# ಪ್ರಸಾದ

**ಸಂಪುಟ 30 ಸಂಚಿಕೆ 1** **ಜನವರಿ-ಫೆಬ್ರವರಿ 2015**

ಸಂಪಾದಕ

**ಪ್ರೊ. ಮಲೆಯೂರು ಗುರುಸ್ವಾಮಿ**

**ಜೆಎಸ್‌ಎಸ್ ಮಹಾವಿದ್ಯಾಪೀಠ**

ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ವೃತ್ತ

ಮೈಸೂರು 570 004



**ಸಂಸ್ಥಾಪಕರು**

'ಶ್ರೀಮನ್ಮಹಾರಾಜ ರಾಜಗುರುತಿಲಕ' ಪರಮಪೂಜ್ಯ ಲಿಂಗೈಕ್ಯ

**ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು**

**ಅಧ್ಯಕ್ಷರು**

**ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು**

**ಸಂಪಾದಕ ಸಮಿತಿ**

ಡಾ. ಶ್ರೀ ಶರತ್‌ಚಂದ್ರ ಸ್ವಾಮಿಗಳು
ಶ್ರೀ ಬಿ.ಎನ್. ಬೆಟ್‌ಕೆರೂರ್
ಶ್ರೀ ಎಸ್.ಪಿ. ಮಂಜುನಾಥ್
ಶ್ರೀ ಎಸ್. ನಂಜುಂಡಯ್ಯ
ಡಾ. ಎನ್.ಎಸ್. ತಾರಾನಾಥ
ಡಾ. ಓ.ಎಲ್. ನಾಗಭೂಷಣಸ್ವಾಮಿ
ಡಾ. ಎನ್.ಎಂ. ತಳವಾರ್
ಶ್ರೀಮತಿ ಪ್ರೀತಿ ಶುಭಚಂದ್ರ
ಪ್ರೊ. ಮಲೆಯೂರು ಗುರುಸ್ವಾಮಿ (ಸಂಪಾದಕ)

---

ಸಾಹಿತ್ಯ, ಸಂಸ್ಕೃತಿ, ಕಲೆ, ಧರ್ಮ, ವಿಜ್ಞಾನ, ಶಿಕ್ಷಣ, ಆರೋಗ್ಯ
ಮುಂತಾದ ವಿಚಾರಪೂರ್ಣ ಲೇಖನಗಳಿಗೆ ಸ್ವಾಗತವಿದೆ.
ಬರಹಗಳಲ್ಲಿನ ಅಭಿಪ್ರಾಯಗಳು ಆಯಾ ಲೇಖಕರವು

# ಪರಿವಿಡಿ

ಸಂಪಾದಕೀಯ 5

ಗುರುವಾಣಿ 9

ನಾನು ಮಲಾಲಾ 11
**ಹಾ.ಮ. ಪೃಥ್ವಿರಾಜ್**

ಫ್ರಿಜೋಕಾಪ್ರರ ಭೌತವಿಜ್ಞಾನದ ಮಾರ್ಗ ಆಧುನಿಕ ಭೌತವಿಜ್ಞಾನ
ಪೌರ್ವಾತ್ಯ ದಾರ್ಶನಿಕತೆಗಳ ಸೂತ್ರ 22
**ಡಾ. ಕೆ.ಎಸ್. ಮಲ್ಲೇಶ್**

ಮೈಸೂರು ಜಿಲ್ಲೆಯ ವೀರಶೈವ ಮಠಗಳ ಸಾಂಸ್ಕೃತಿಕ ಕೊಡುಗೆ 36
**ವೀರಭದ್ರಸ್ವಾಮಿ**

ಡಾ. ಎಸ್.ಎಂ. ವೃಷಭೇಂದ್ರ ಸ್ವಾಮಿಯವರಿಗೆ ನುಡಿನಮನ 45
**ಡಾ. ಎಸ್. ವಿದ್ಯಾಶಂಕರ**

ವಾರ್ತಾವಿಹಾರ 48

ಪ್ರಸಾದ ಲೇಖನಸೂಚಿ - 2014 59

**ಮುಖಪುಟ ಚಿತ್ರ**

ವಸ್ತುಸಂಗ್ರಹಾಲಯ ಕಟ್ಟಡದ ಶಿಲಾನ್ಯಾಸವನ್ನು ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಮುಖ್ಯಮಂತ್ರಿಗಳಾದ ಶ್ರೀ ಸಿದ್ಧರಾಮಯ್ಯನವರು ನೆರವೇರಿಸಿದರು. ಚಿತ್ರದಲ್ಲಿ ಶ್ರೀ ಎಂ.ಕೆ. ಸೋಮಶೇಖರ್, ಶ್ರೀ ಆರ್. ಧ್ರುವನಾರಾಯಣ್, ಶ್ರೀ ಎಚ್.ಎಸ್. ಮಹದೇವಪ್ರಸಾದ್, ಡಾ. ಎಚ್.ಸಿ. ಮಹದೇವಪ್ಪ, ಶ್ರೀ ವಿ. ಶ್ರೀನಿವಾಸಪ್ರಸಾದ್ ಮತ್ತಿತರರನ್ನು ಕಾಣಬಹುದು

## ಲೇಖಕರ ವಿಳಾಸ

**ಹೆಚ್.ಎಂ. ಪೃಥ್ವಿರಾಜ್**
ಉಪನ್ಯಾಸಕರು
ಹಾಲಹಳ್ಳಿ ಗ್ರಾಮ
ತೊಂಡವಾಡಿ ಅಂಚೆ
ಗುಂಡ್ಲುಪೇಟೆ ತಾಲ್ಲೂಕು
ಚಾಮರಾಜನಗರ ಜಿಲ್ಲೆ 571 109

**ಡಾ. ಕೆ. ಎಸ್. ಮಲ್ಲೇಶ್**
ಭೌತ ವಿಜ್ಞಾನ ವಿಭಾಗ
ಮಾನಸಗಂಗೋತ್ರಿ
ಮೈಸೂರು 570 006

**ವೀರಭದ್ರಸ್ವಾಮಿ**
ಸಂಶೋಧಕರು
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು

**ಡಾ. ಎಸ್. ವಿದ್ಯಾಶಂಕರ**
ನಂ. 138, 7ನೇ 'ಸಿ' ಮುಖ್ಯರಸ್ತೆ
ವಿಜಯನಗರ 2ನೇ ಹಂತ
ಬೆಂಗಳೂರು 560 040

# ಸಂಪಾದಕೀಯ

ಅಭಿವ್ಯಕ್ತಿ ಸ್ವಾತಂತ್ರ್ಯ ಎನ್ನುವುದು ಪ್ರಜಾಪ್ರಭುತ್ವ ವ್ಯವಸ್ಥೆಯ ಶ್ರೇಷ್ಠ ಮೌಲ್ಯಗಳಲ್ಲಿ ಒಂದು. ಪ್ರಾಯಃ ಅಂತಹ ಸ್ವಾತಂತ್ರ್ಯವೊಂದು ದತ್ತವಾಗದಿದ್ದರೆ, ವ್ಯಕ್ತಿ ಮತ್ತು ಸಮುದಾಯ ಕೇವಲ ಉದರಪೋಷಣೆ ಮಾಡಿಕೊಂಡು ಅಸ್ತಿತ್ವವೇ ಇಲ್ಲದೆ ನಾಶವಾಗುವ ಕ್ರಿಮಿಕೀಟಾದಿಗಳಿಗೂ ಕಡೆಯಾಗಿ ಹೋಗುತ್ತಿತ್ತು. ನಮ್ಮೆಲ್ಲ ಒಳಲೋಕದ ಸಂಕೀರ್ಣತೆಗಳು ಒಂದು ರೂಪ ಪಡೆಯುವುದು ಅಭಿವ್ಯಕ್ತಿಯ ಮೂಲಕ. ಅಂತಹ ಅಭಿವ್ಯಕ್ತಿಯ ಅನಂತಸ್ತರಗಳು ಒಂದು ಬಿಂದುವಿನಲ್ಲಿ ಸಾಮಾನ್ಯೀಕರಣಗೊಂಡು ಘನೀಕರಿಸಿ ಸೈದ್ಧಾಂತಿಕ ಸ್ವರೂಪವನ್ನು ಪಡೆದು, ಒಂದು ಸಮಾಜಕ್ಕೆ ನಡಾವಳಿಯ ಚೌಕಟ್ಟನ್ನು ನಿರ್ಮಿಸಿ, ಸಾಮಾಜಿಕ ನೆಮ್ಮದಿಗೆ ಕಾರಣವಾಗುತ್ತವೆ. ಆದರೆ ಒಂದು ಕಾಲಘಟ್ಟದ, ಒಂದು ಸಮುದಾಯದ, ಅಥವಾ ಒಬ್ಬ ವ್ಯಕ್ತಿಯ (ಆತ ಎಷ್ಟೇ ದಾರ್ಶನಿಕನಾಗಿರಲಿ) ನಿಲುವು ಅಥವಾ ರೂಪಿಸಿದ ಸಿದ್ಧಾಂತಗಳು ಎಲ್ಲರಿಗೂ ಎಲ್ಲ ಕಾಲಕ್ಕೂ ಸರಿಹೊಂದುತ್ತದೆ ಅಥವಾ ಸರಿಯಾಗಬೇಕು ಎಂದು ನಂಬುವುದು, ಅಥವಾ ಒತ್ತಾಯಿಸುವುದು ವ್ಯಕ್ತಿ ಮತ್ತು ಸಮುದಾಯವನ್ನು ಮತ್ತೆ ಹಿಮ್ಮುಖ ಚಲನೆಗೆ ಇಂಬುಕೊಟ್ಟಂತೆ ಆಗುತ್ತದೆ. ಆದ್ದರಿಂದ ಇಂತಹ ಅಂಶಗಳು ಎಷ್ಟೇ ಶ್ರೇಷ್ಠ ಸಂಶೋಧನೆಯ ಫಲಿತಗಳಾದರೂ ಬೇರೆ ಬೇರೆ ಕಾಲಘಟ್ಟದಲ್ಲಿ, ಬೌದ್ಧಿಕ ಹಾಗೂ ಭಾವನಾತ್ಮಕ ಸ್ತರದಲ್ಲಿ ಮರುಪರಿಶೀಲನೆಗೆ ಒಳಪಡಲೇಬೇಕು. ಕಾಲಧರ್ಮಕ್ಕೆ ಹೊಂದದಿರುವುದನ್ನು ನಯವಾಗಿ ತಿರಸ್ಕರಿಸಿ, ಹೊಂದುವುದನ್ನು ಅಷ್ಟೇ ಗೌರವದಿಂದ ಪುರಸ್ಕರಿಸಿ ಮುನ್ನಡೆಯಬೇಕಾದುದು 'ಸಂಸ್ಕೃತಿ'ವಂತರ ಲಕ್ಷಣ. ಇಂತಹ ತಿರಸ್ಕಾರ-ಪುರಸ್ಕಾರಗಳ ಪ್ರಕ್ರಿಯೆಯೂ ಮತ್ತೆ ಚಿತ್ತಸಮತೆಯ ಶ್ರೇಷ್ಠ ಚಿಂತಕರ ನಡುವೆ ಮತ್ತೆ ಮತ್ತೆ ಮಥಿತವಾಗಿ ರೂಪು ಪಡೆಯುವಂತದಾಗಿರಬೇಕೇ ಹೊರತು ವೇದಿಕೆಯ ಮೇಲಿನ ತರ್ಕದ ಮಟ್ಟದಲ್ಲಿ, ಭಾವೋದ್ವೇಗದ ಅಥವಾ ರೋಗಿಷ್ಠ ಮನಸ್ಥಿತಿಯ ಹಗುರವಾದ ಹೇಳಿಕೆಗಳ ಸ್ತರದಲ್ಲಿ ತೀರ್ಮಾನವಾಗುವಂತದಲ್ಲ; ಹಾಗೆ ತೀರ್ಮಾನವಾಗಲೂಬಾರದು.

ಇತ್ತೀಚಿನ ದಿನಗಳಲ್ಲಿ ಭಗವದ್ಗೀತೆಯ ಬಗ್ಗೆ ಎದ್ದಿರುವ ಪರವಿರೋಧದ ಚರ್ಚೆಯ ಹಿನ್ನೆಲೆಯಲ್ಲಿ ನಾನು ಈ ಕೆಲವು ಮಾತುಗಳನ್ನು ಬರೆಯಬೇಕಾಯಿತು. ರಾಷ್ಟ್ರೀಯ ವೃಕ್ಷ, ರಾಷ್ಟ್ರೀಯ ಪಕ್ಷಿ, ರಾಷ್ಟ್ರೀಯ ಪ್ರಾಣಿ ಇರುವಂತೆಯೇ ರಾಷ್ಟ್ರೀಯ

ಗ್ರಂಥವೊಂದಿರಬೇಕು, ಅದು 'ಭಗವದ್ಗೀತೆ' ಆಗಬೇಕು ಎನ್ನುವ ಅಂಶ ಚರ್ಚಿತವಾಗುತ್ತಿರುವ ಸಂದರ್ಭದಲ್ಲಿ, ಅಲ್ಲಲ್ಲಿ ಈ ಸಂಬಂಧ ವಿಚಾರ ಸಂಕಿರಣಗಳು ಏರ್ಪಡುತ್ತಿವೆ. ಇದು ಪ್ರಜಾಪ್ರಭುತ್ವ ವ್ಯವಸ್ಥೆಯ ಒಂದು ಆರೋಗ್ಯಕರ ಪ್ರಕ್ರಿಯೆ. ಇದು ರಾಷ್ಟ್ರೀಯ ಗ್ರಂಥ ಎಂಬ ಹಣೆಪಟ್ಟಿ ಹಚ್ಚಿಕೊಳ್ಳಬೇಕೇ ಬೇಡವೇ ಎನ್ನುವುದರ ಬಗ್ಗೆ ಚರ್ಚಿತವಾಗಬೇಕಾದುದು ಸರಿಯಾದುದೆ, ಆದರೆ ಆ ಚರ್ಚೆಯ ನೆಪದಲ್ಲಿ 'ಭಗವದ್ಗೀತೆ' ಜೀವವಿರೋಧಿಯಾದದ್ದು, ವರ್ಣಾಶ್ರಮ ಧರ್ಮವನ್ನು ಪ್ರತಿಪಾದಿಸುವಂತದು, ಮನುಷ್ಯನನ್ನು ದಾಸ್ಯದಲ್ಲಿ ಇಡುವ ಅಂಶಗಳನ್ನು ಒಳಗೊಂಡದ್ದು. ಆ ಕಾರಣಕ್ಕಾಗಿ ಇದನ್ನು ಸುಟ್ಟುಹಾಕಬೇಕು ಎನ್ನುವ ಮಾತನ್ನು ವಿದ್ವಾಂಸರೊಬ್ಬರು ಆಡುವ ಮೂಲಕ, ಪ್ರತಿಭಟನೆಗಳಿಗೆ, ಕಾನೂನಿನ ತೊಡಕುಗಳಿಗೆ ಸಿಕ್ಕಿಹಾಕಿಕೊಂಡಿದ್ದಾರೆ.

"ಭಗವದ್ಗೀತೆ" ಹೇಳಿಕೇಳಿ ಒಂದು ಅಧ್ಯಾತ್ಮಸಂಬಂಧಿಯಾದ ಕೃತಿ. ಮಹಾಭಾರತದಂತಹ ಬಹುಮುಖೀ ಆಯಾಮದ ಮಹಾಕಾವ್ಯದ ಒಂದು ಭಾಗವಾಗಿ ಬಂದಿರುವ ಕಾವ್ಯಖಂಡ. ಮಹಾಭಾರತ ಸುಮಾರು ಎರಡು ಸಾವಿರ ವರ್ಷಗಳಷ್ಟು ಹಿಂದೆಯೇ ಬರೆಯಲ್ಪಟ್ಟ ಶುದ್ಧಕಾವ್ಯ. ಇಲ್ಲಿ ಬರುವ ಭಗವದ್ಗೀತೆಯ ಭಾಗ ವೈದಿಕ ಧರ್ಮದ ಪ್ರಚಾರಕ್ಕಾಗಿ ಬರೆದ ಕೃತಿಯಂತೂ ಅಲ್ಲ. ಇದನ್ನು ಉಪದೇಶಿಸಿದ ಭಗವಂತನೇ ಒಬ್ಬ ಗೊಲ್ಲರವನು; ಕೇಳಿಸಿಕೊಂಡವ ಒಬ್ಬ ಕ್ಷತ್ರಿಯ. ಇದರ ಮೂಲ ಉದ್ದೇಶ 'ಜೀವನಯೋಗ'ವನ್ನು ಹೇಳುವುದೇ ಹೊರತು, ವೈದಿಕ ಸಂಸ್ಕೃತಿಯ ವೈಭವೀಕರಣ ಅಥವಾ ಧರ್ಮಪ್ರಸಾರವಂತೂ ಅಲ್ಲ. ವೇದೋಪನಿಷತ್ತುಗಳ ಜ್ಞಾನ ಭಾಗದ, ಕಾವ್ಯಾಭಿವ್ಯಕ್ತಿ ಇದು. ಆಯಾ ಕಾಲಘಟ್ಟದ ಹಿನ್ನೆಲೆಯಲ್ಲಿ ಬಂದ ಕಾವ್ಯದ ಕೆಲವು ಮಾತುಗಳನ್ನು ನಮ್ಮ ಇಂದಿನ ಸಾಮಾಜಿಕ ಸ್ಥಿತಿಗೆ ಅನ್ವಯಿಸಿ ಅರ್ಥೈಸುವ ಕ್ರಮವೇ ಸರಿಯಾದುದಲ್ಲ. ಕಾವ್ಯವನ್ನು ವರ್ಣನೆ, ಪ್ರತಿಮೆ, ರೂಪಕಗಳ ಹಿನ್ನೆಲೆಯಲ್ಲಿಯೇ ಅರ್ಥೈಸಬೇಕೇ ಹೊರತು ಅದನ್ನು ಒಂದು ಸಾಮಾಜಿಕ ಪಠ್ಯವಾಗಿ ಅಲ್ಲ. ಹಾಗೆ ನೋಡಿದರೆ ಜಗತ್ತಿನ ಯಾವುದೇ ಧರ್ಮಗ್ರಂಥಗಳಲ್ಲಿ, ಕಾವ್ಯಗಳಲ್ಲಿ ಎಲ್ಲರಿಗೂ ಸಾರ್ವಕಾಲಿಕವಾಗಿ ಒಪ್ಪಿತವಾಗುವ ಅನೇಕ ಅಂಶಗಳು ಇರುವಂತೆಯೇ, ಒಂದೊಂದು ಕಾಲಕ್ಕೆ, ಒಂದೊಂದು ಪ್ರದೇಶಕ್ಕೆ ಒಪ್ಪಿತವಾಗದ ಅಂಶಗಳೂ ಇರುತ್ತವೆ. ಅದು ಆ ಕೃತಿಯಲ್ಲಿನ ದೋಷಗಳಲ್ಲ, ಕೆಲವೊಮ್ಮೆ ಆಯಾ ಕಾಲದ ಸಾಮಾಜಿಕ ಸಂರಚನೆಯ ದೋಷವೂ ಆಗಿರುತ್ತದೆ. ಹಾಗೆ ನೋಡಿದರೆ ನಮ್ಮಲ್ಲಿನ ಜಾತಿ ವ್ಯವಸ್ಥೆ, ವರ್ಣಾಶ್ರಮಧರ್ಮ ವ್ಯವಸ್ಥೆ ಅಂದು ಸರಿಯಾದ ತರ್ಕಬದ್ಧವಾಗಿಯೇ ರೂಪಿತವಾಗಿತ್ತು. ಚರಿತ್ರೆ, ಸಮಾಜಶಾಸ್ತ್ರ, ಮಾನವಶಾಸ್ತ್ರವನ್ನು ಅಧ್ಯಯನ ಮಾಡಿದವರಿಗೆ ಇದು ತಿಳಿದ ಅಂಶವೇ ಆಗಿದೆ. 'ಗುಣ' ಮತ್ತು 'ಕರ್ಮ' ಹಾಗೂ ವೃತ್ತಿಯ ಹಿನ್ನೆಲೆಯಲ್ಲಿ ಮಾಡಿದ ಈ ವರ್ಗೀಕರಣವನ್ನು ಆದ್ಯಂತವಾಗಿ ತಿರಸ್ಕರಿಸ



ಲಾಗುವುದಿಲ್ಲ. ನಾವು ಪ್ರಾತಃಸ್ಮರಣೀಯರೆಂದು ಕರೆಯುವ ಅನೇಕ ಋಷಿಮುನಿಗಳು, ಉಪನಿಷತ್ಕಾರರು. ಬ್ರಹ್ಮಜ್ಞಾನಿಗಳು - ಬ್ರಾಹ್ಮಣರೇನೂ ಅಲ್ಲ. 'ವ್ಯಾಸ ಬೋಯಿತಿಯ ಮಗ, ಮಾರ್ಕಂಡೇಯ ಮಾತಂಗಿಯ ಮಗ, ಅಗಸ್ತ್ಯ ಕಬ್ಬಿಲ, ಕಶ್ಯಪ ಕಮ್ಮಾರ...' ಈ ಪಟ್ಟಿಯನ್ನು ನೋಡಿದ ಯಾರಿಗಾದರೂ ಇದು ಸುಲಭ ವೇದ್ಯವಾಗುತ್ತದೆ. ಆದರೆ ಕಾಲಾನುಗತದಲ್ಲಿ ಅಧ್ಯಯನದ ಕೊರತೆ, ಆಚರಣೆಯ ಕೊರತೆಯಿಂದ, ಆ ಶ್ರೇಷ್ಠ ಪರಿಕಲ್ಪನೆಗಳು ಹಿಂದಕ್ಕೆ ಸರಿದು, ಕೇವಲ ಜಡವಾದ ಮೇಲ್ಪದರದ ನಂಬಿಕೆ ನಡಾವಳಿಗಳು ಮುಂಚೂಣಿಗೆ ಬಂದು ಅನೇಕ ಗೊಂದಲಕ್ಕೆ ಕಾರಣವಾಗಿವೆ. ಯಾವುದೇ ಧರ್ಮಶಾಸ್ತ್ರಗ್ರಂಥಗಳು ಎಲ್ಲವನ್ನೂ ಇದಮಿತ್ಥಂ ಎಂದು ಹೇಳಿಲ್ಲ. ಪ್ರಪಂಚದ ಶ್ರೇಷ್ಠ ಸಂವಿಧಾನಗಳಲ್ಲಿ ಒಂದು ಎಂದು ಪರಿಗಣಿಸಲ್ಪಟ್ಟಿರುವ 'ಭಾರತದ ಸಂವಿಧಾನ'ವು ಡಾ. ಅಂಬೇಡ್ಕರ್ ಅವರು ಬರೆದ ರೂಪದಲ್ಲಿಯೇ ಇಂದು ಉಳಿದುಬಂದಿಲ್ಲ. ಆರು ದಶಕಗಳ ಅವಧಿಯಲ್ಲಿ ನೂರು ಬಾರಿ ತಿದ್ದುಪಡಿಗೆ ಒಳಗಾಗಿದೆ. ಹಾಗೆಂದಾಕ್ಷಣ ಅದು ಶ್ರೇಷ್ಠ ಸಂವಿಧಾನ ಹೇಗಾದೀತು ಎನ್ನಲಾಗುತ್ತದೆಯೇ. ಸಂವಿಧಾನ ರಚನಾ ಸಂದರ್ಭದ ಭಾರತದ ಸಾಮಾಜಿಕ ಪರಿಸ್ಥಿತಿ ಇಂದು ಬೇರೆ ಬೇರೆ ರೀತಿಯ ಸಂಕೀರ್ಣಸ್ವರೂಪಗಳನ್ನು ಪಡೆದುಕೊಂಡಿದೆ. ಅದಕ್ಕೆ ತಕ್ಕ ಹಾಗೆ ತಜ್ಞರು ಸಂವಿಧಾನದ ಮೂಲ ಆಶಯಕ್ಕೆ ಧಕ್ಕೆ ಬಾರದ ರೀತಿಯಲ್ಲಿ ಕೆಲವನ್ನು ತಿದ್ದುಪಡಿ ಮಾಡುವುದು ಅನಿವಾರ್ಯವಾಗುತ್ತದೆ. ಇದು ನಮ್ಮ ಆರ್ಷೇಯ ಗ್ರಂಥಗಳಿಗೂ ಅನ್ವಯವಾಗುತ್ತದೆ.

ಭಗವದ್ಗೀತೆಯನ್ನು ವೈಯಕ್ತಿಕವಾಗಿ ನಾವು ಒಪ್ಪುವುದು ಬಿಡುವುದು ಬೇರೆಯ ವಿಷಯ. ಆದರೆ ಅನೇಕ ವಿದ್ವಜ್ಜನರು, ವಿಜ್ಞಾನಿಗಳು, ಸಾಧುಸಂತರು, ಸಾಹಿತಿಗಳು- ಅದನ್ನು ಅನೇಕ ರೀತಿಯಲ್ಲಿ ವಿಶ್ಲೇಷಣೆಗೆ ಒಳಪಡಿಸಿದ್ದಾರೆ. ಅದರಲ್ಲಿನ ತಾತ್ವಿಕ ಅಂಶಗಳಿಗೆ ಮಾರುಹೋಗಿದ್ದಾರೆ. ನ್ಯಾಯಾಲಯಗಳಲ್ಲಿ ಅದನ್ನು ಪ್ರಮಾಣಗ್ರಂಥವನ್ನಾಗಿಸಿ ಗೌರವಿಸಿದ್ದಾರೆ. ಅಂತಹ ಕೃತಿಯೊಂದರ ಬಗ್ಗೆ ಮಾತನಾಡುವಾಗ - ವೈಯಕ್ತಿಕ ನಿಲುವುಗಳನ್ನು ಮೀರಿ - ಬಹಳ ಗಂಭೀರವಾಗಿಯೇ ಅದನ್ನು ಪರಿಗಣಿಸಬೇಕಾಗುತ್ತದೆ. ಅದು ಒಂದು ದೇಶದ ಜನಜೀವನದ ಭಾವಕೋಶದ ಒಂದು ಭಾಗವೇ ಆಗಿರುವ ಕಾರಣಕ್ಕಾಗಿ, ಅದರೊಡನೆ ಮುಖಾಮುಖಿಯಾಗಲೂ ಒಂದು ಅರ್ಹತೆ ಮತ್ತು ಸಿದ್ಧತೆ ಬೇಕಾಗುತ್ತದೆ; ಸಾಮಾಜಿಕ ಜವಾಬ್ದಾರಿ ಇರಬೇಕಾಗುತ್ತದೆ. ನಮ್ಮ ಗುಂಪಿನ ಚಿಂತನಾಕ್ರಮಕ್ಕೆ ಒಗ್ಗುವುದಿಲ್ಲ ನಾವು ಸಮರ್ಥಿಸುವ ಸಾಮಾಜಿಕ ಸಿದ್ಧಾಂತಗಳು ಅದರಲ್ಲಿ ಇಲ್ಲ ಎನ್ನುವ ಕಾರಣಕ್ಕಾಗಿ, ಅದನ್ನು ಸಾರಾಸಗಟಾಗಿ ತಿರಸ್ಕರಿಸುವುದು, ವ್ಯಾಸನಂತಹ ಮಹಾಕವಿಗೆ (ಕೃಷ್ಣನಿಗಲ್ಲ) ಮಾಡಿದ ಅಪಚಾರವಾಗುತ್ತದೆ. ನಾನಂತೂ ಅದನ್ನು ಆದ್ಯಂತವಾಗಿ, ಅದರ ಎಲ್ಲ ಸೂಕ್ಷ್ಮಗಳೊಡನೆ ಅಧ್ಯಯನ ಮಾಡಿಲ್ಲ - ಸಂಸ್ಕೃತ ಭಾಷೆಯ ಮೇಲಿನ ಪ್ರಭುತ್ವದ ಕೊರತೆಯಿಂದಾಗಿ. ಅನೇಕ ವಿದ್ವಾಂಸರುಗಳ

ವ್ಯಾಖ್ಯಾನಗಳನ್ನು ಗಂಭೀರವಾಗಿ ಅಧ್ಯಯನ ಮಾಡಿದ್ದೇನೆ. ವಿಷ್ಣುವಿನ ಅವತಾರವಾದ ಕೃಷ್ಣನು ಇದನ್ನು ಹೇಳಿದ (ಕೃಷ್ಣಪ್ರಣೀತ) ಎನ್ನುವ ಪೌರಾಣಿಕ ಅಂಶದ ಬಗ್ಗೆ ನನಗೆ ಕಿಂಚಿತ್ ನಂಬಿಕೆಯೂ ಇಲ್ಲ. ಆದರೂ ಅದರ ಬಗ್ಗೆ ಮಾತನಾಡುವಾಗ ನಾನು ಎಲ್ಲರ ಸಾಕ್ಷೀಪ್ರಜ್ಞೆಯಾಗಿ ಮಾತನಾಡಬೇಕೇ ಹೊರತು, ಸ್ವಕೇಂದ್ರಿತವಾಗಿ ಅಲ್ಲ ಎನ್ನುವುದು ನನ್ನ ಯಾವತ್ತು ಭಾವನೆಯಾಗಿದೆ. ಎಂ.ಎಫ್. ಹುಸೇನ್ ಅವರು ಭಾರತೀಯ ದೇವಾನುದೇವತೆಗಳನ್ನು ವಿಕೃತವಾಗಿ ಚಿತ್ರಿಸಿದಾಗ, ಹೀಗೆಯೇ ಒಂದಿಷ್ಟು ಗೊಂದಲವಾದದ್ದು ಸರ್ವವಿದಿತ. ಆದರೆ, ಅದು ಕಲಾವಿದನ ಅಭಿವ್ಯಕ್ತ ಸ್ವಾತಂತ್ರ್ಯಕ್ಕೆ ಮಾಡಿದ ಅಪಮಾನ ಎಂದು ಕೆಲವರು ಬೊಬ್ಬೆ ಇಟ್ಟರು. ಹೌದು, ಕವಿಕಲಾವಿದರಿಗೆ ಅಭಿವ್ಯಕ್ತಿ ಸ್ವಾತಂತ್ರ್ಯವಿರಬೇಕು ಎನ್ನುವುದರಲ್ಲಿ ಎರಡು ಮಾತಿಲ್ಲ. ಆದರೆ ಅದು ವಿಕೃತವಾದುದಾಗಿದ್ದರೆ ಅದನ್ನು ಪ್ರಶ್ನಿಸಲೇಬೇಕಾಗುತ್ತದೆ – ಅದರದೇ ಮಾರ್ಗದಲ್ಲಿ. ಅದೇ ಕಲಾವಿದರು ಬೇರೆ ಧರ್ಮದ ದೇವರುಗಳನ್ನು, ಮಹಾಪುರುಷರನ್ನು ಹಾಗೆಯೇ ಚಿತ್ರಿಸುವ ಪರಿಪಾಠವನ್ನು ಬೆಳೆಸಿಕೊಂಡಿದ್ದರೆ, ಅವರ ರೀತಿಯೇ ಹಾಗೆ ಎಂದು ಸುಮ್ಮನಾಗಬಹುದಾಗಿತ್ತು. ಆದರೆ ಲೇಖಕರು ಮುಸಲ್ಮಾನರಾಗಿರುವುದು, ಅವರು ಚಿತ್ರಿಸಿದ ದೇವತೆಗಳು ಹಿಂದೂಗಳಿಗೆ ಸಂಬಂಧಪಟ್ಟವರೂ ಆಗಿರುವುದರಿಂದ, ಈ ಸೂಕ್ಷ್ಮಗಳ ಹಿನ್ನೆಲೆಯಲ್ಲಿಯೇ ಕವಿಕಲಾವಿದರು ವರ್ತಿಸಬೇಕಾಗುತ್ತದೆ. ಇಂತಹ ಸಂದರ್ಭಗಳಲ್ಲಿ ಗುರುಗಳಾದ ಡಾ. ಯು.ಆರ್. ಅನಂತಮೂರ್ತಿಯವರು ನನ್ನ ನೆನಪಿಗೆ ಬರುತ್ತಾರೆ. ಅವರ 'ರುಜುವಾತು' ಪತ್ರಿಕೆಯಲ್ಲಿ ಒಮ್ಮೆ ಅಯ್ಯಪ್ಪಸ್ವಾಮಿ ಭಕ್ತರು ಇರುಳೆಲ್ಲಾ ಮೈಕ್ ಹಿಡಿದುಕೊಂಡು ಪ್ರಾರ್ಥನೆಯ ಗದ್ದಲವನ್ನು ಮಾಡುವ ರೀತಿನೀತಿಗಳನ್ನು ಖಂಡಿಸುತ್ತಾ, ಭಕ್ತಿ ಎನ್ನುವುದು ಹೀಗೆ ಪ್ರದರ್ಶನಗೊಳ್ಳಬಾರದು, ಶರಣರದ್ದೂ ಭಕ್ತಿ ಚಳುವಳಿಯೇ ಆಗಿತ್ತು, ಆದರೆ ಅದನ್ನು ಅವರು ದುಡಿಸಿಕೊಂಡ ಪರಿ ಹೇಗಿತ್ತು ಎನ್ನುವುದನ್ನು ಪರಸ್ಪರ ಹೋಲಿಕೆಯೊಡನೆ ವಿಶ್ಲೇಷಿಸುತ್ತಾರೆ. ಅವರ ಉದ್ದೇಶ ಅಯ್ಯಪ್ಪ ಭಕ್ತರ ಗದ್ದಲದ ಬಗ್ಗೆ ಅಸಮಾಧಾನ ವ್ಯಕ್ತಪಡಿಸುವುದಾಗಿತ್ತು. ಆದರೆ ಅದನ್ನು ಅವರು ಹೇಳುವ ಕ್ರಮವಂತೂ ಮತ್ತೆ ಮತ್ತೆ ಮನನ ಮಾಡುವಂತಿತ್ತು. ಗೀತೆಯ ಬಗೆಗಿನ ವಿದ್ವಾಂಸರ ಮಾತುಗಳೂ ಸಹ ಹೀಗೆಯೇ - ಏನೇ ಹೇಳಲಿ - ಗೌರವಯುತ ಭಾಷೆಯಲ್ಲಿಯೇ, ರೀತಿಯಲ್ಲಿಯೇ ಇರಬೇಕು. ಆಗ ಅದನ್ನು ಸಮಾಜ ಗಂಭೀರವಾಗಿಯೇ ಸ್ವೀಕರಿಸುತ್ತದೆ.

ಪ್ರಜ್ಞಾವಂತರ ಮಾತುಗಳು ಸಾಮಾಜಿಕ ಶಾಂತಿ ನೆಮ್ಮದಿಗೆ ಕಾರಣವಾಗಬೇಕೇ ಹೊರತು, ಸಾಮಾಜಿಕ ವಿಘಟನೆಗೆ ಕಾರಣವಾಗಬಾರದು ಎನ್ನುವುದನ್ನು ಎಲ್ಲರೂ - ಹಾಗೆ ಮಾತನಾಡಿದವರೂ – ಒಪ್ಪುತ್ತಾರೆ ಎನ್ನುವುದು ನನ್ನ ನಿಲುವು.

**ಮಲೆಯೂರು ಗುರುಸ್ವಾಮಿ**
ಸಂಪಾದಕ

# ಗುರುವಾಣಿ

ಗೊಂದಾವಲಿ ಮಹಾರಾಷ್ಟ್ರದ ಒಂದು ಹಳ್ಳಿ. ನೂರೈವತ್ತು ವರ್ಷಗಳ ಹಿಂದೆ ಅಲ್ಲಿ ಬ್ರಹ್ಮಚೈತನ್ಯರೆಂಬ ಸಂತರಿದ್ದರು. ಭಗವನ್ನಾಮ ಜಪವನ್ನೇ ಜೀವನದ ಉಸಿರಾಗಿಸಿಕೊಂಡು ಬದುಕಿದವರು ಅವರು. ಅವರು ಮಾಡುತ್ತಿದ್ದ ಜಪ 'ಅಜಪ ಜಪ'ವೆಂದೇ ಪ್ರಸಿದ್ಧಿಯಾಗಿತ್ತು. ಒಮ್ಮೆ ಕಾಶಿ ತಾಯಿ ಎನ್ನುವ ಭಕ್ತೆಯೋರ್ವಳು ಅವರ ಬಳಿ ಬಂದು ನಮಸ್ಕರಿಸಿ, ನಾನು ಸದಾ ದೇವರ ಜಪ ಮಾಡುತ್ತಿರುತ್ತೇನೆ. ನನ್ನ ನಾಲಗೆಗೆ ವಿರಾಮವೆನ್ನುವುದೇ ಇಲ್ಲ. ಆದರೂ ಮನಸ್ಸಿಗೆ ಶಾಂತಿಯಿಲ್ಲ. ತಾವು 'ಅಜಪ ಜಪ'ವನ್ನು ಮಾಡುತ್ತೀರಿ ಎಂದು ಕೇಳಿದ್ದೇನೆ. ಅದನ್ನು ಯಾವ ರೀತಿ ಮಾಡಬೇಕು ಎನ್ನುವುದನ್ನು ನನಗೂ ಸ್ವಲ್ಪ ತಿಳಿಸಿಕೊಡಿ ಎಂದು ಕೇಳಿಕೊಳ್ಳುತ್ತಾಳೆ. ಆಗ ಬ್ರಹ್ಮಚೈತನ್ಯರು 'ನಿನ್ನ ಕಿವಿಯನ್ನು ನನ್ನ ಎದೆಯ ಮೇಲಿಟ್ಟು ಆಲಿಸು, ನಿನಗೆ ಏನು ಕೇಳಿಸುತ್ತದೆ ತಿಳಿಸು' ಎನ್ನುತ್ತಾರೆ. ಆಕೆ ಅಂತೆಯೇ ತನ್ನ ಕಿವಿಯನ್ನು ಅವರ ಎದೆಯಮೇಲೆ ಇಟ್ಟು ಆಲಿಸತೊಡಗುತ್ತಾಳೆ. ಆಕೆಗೆ ಎಂದೂ ಆಗದ ಒಂದು ವಿಶೇಷ ಅನುಭವ ಆ ಸಂದರ್ಭದಲ್ಲಿ ಆಗುತ್ತದೆ. ಅದೇನೆಂದರೆ ಆಕೆಯ ಕಿವಿಯಲ್ಲಿ 'ಶ್ರೀರಾಮ್, ಜೈರಾಮ್, ಜಯಜಯರಾಮ್' ಎನ್ನುವ ಮಂತ್ರ ನಿರಂತರವಾಗಿ ಅನುರಣಿತವಾಗುತ್ತಿರುತ್ತದೆ. ಬ್ರಹ್ಮಚೈತನ್ಯರು ಮೌನವಾಗಿಯೇ ಇದ್ದಾರೆ. ಆದರೆ ಅವರ ಎದೆಯ ಭಾಗದಿಂದ ಮಾತ್ರ 'ರಾಮ'ನ ಹೆಸರು ತರಂಗ ತರಂಗವಾಗಿ ಹೊರಹೊಮ್ಮುತ್ತಿದೆ! ಆಗ ಆಕೆ ಅಚ್ಚರಿಯಿಂದ ಇದು ಹೇಗೆ ಸಾಧ್ಯ ಗುರುಗಳೇ ಬಾಯಿಯಿಂದ ಹೊರಡಬೇಕಾದ ಶಬ್ದ ಎದೆಯ ಭಾಗದಿಂದ ಹೊರಡುತ್ತಿದೆ ಎಂದು ಕೇಳುತ್ತಾಳೆ. ಆಗ ಬ್ರಹ್ಮಚೈತನ್ಯರು –

ಜಪವೆನ್ನುವುದು ಕೇವಲ ನಾಲಗೆಯ ಮೂಲಕ ಮಾಡುವಷ್ಟಕ್ಕೆ ಮಾತ್ರ ಸೀಮಿತವಲ್ಲ ಮತ್ತು ಸೀಮಿತವಾಗಬಾರದು. ಅದು ದೈವನಿಷ್ಠೆಯ ಪ್ರಾರಂಭಿಕ ಹಂತದ ಪ್ರಕ್ರಿಯೆ ಮಾತ್ರ. ಆದರೆ ಅದು ಅಷ್ಟಕ್ಕೇ ನಿಂತರೆ, ಅದೊಂದು ರೂಢಿಗತ ಕ್ರಿಯೆಯಾಗಿಯಷ್ಟೇ ಉಳಿಯುತ್ತದೆ. ಅನಂತರ ಅದು ನಾವು ನಿತ್ಯವೂ ವ್ಯಾವಹಾರಿಕ ಕಾರಣಗಳಿಗಾಗಿ ಬಳಸುವ ಉಳಿದ ಶಬ್ದಗಳಂತೆಯೇ ಒಂದು ಮಾಮೂಲಿ ಶಬ್ದವಾಗಿ ಬಿಡುತ್ತದೆ. ಅದು ಹಾಗಾಗಬಾರದು. ಜಪವನ್ನು ತೀವ್ರವಾಗಿ ಮಾಡಿದಾಗ ಅದು ಚರ್ಮದ ಆಳಕ್ಕೆ ಇಳಿಯುತ್ತದೆ. ಹಾಗೆ ಇಳಿದು ಮನಸ್ಸಿನ ಒಳ ಪದರಗಳಲ್ಲಿ ಸೇರಿಹೋಗುತ್ತದೆ.

ಅದು ನಂತರ ಹೃದಯದಲ್ಲಿ ಸ್ಥಿರವಾಗಿ ನೆಲೆಸುತ್ತದೆ. ಹಾಗೆ ಹೃದಯದಲ್ಲಿ ನೆಲೆಸುವುದೇ ಶಾಶ್ವತ ಜಪ. ಇದಕ್ಕೆ ಶಬ್ದ ನಾದಗಳ ಯಾವುದೇ ಹಂಗಿಲ್ಲ. ಅದು ಆಂತರಿಕ ವಿಶ್ರಾಂತ ಸ್ಥಿತಿ. ಇದಕ್ಕೆ 'ಅಜಪಜಪ' ಎನ್ನಲಾಗುತ್ತದೆ. ಇದೇ ನಿಜವಾದ ಜಪ" ಎಂದು ಅವರು ಹೇಳಿದಾಗ ಆ ಭಕ್ತೆಯ ಗೊಂದಲ ನಿವಾರಣೆಯಾಗುತ್ತದೆ. ತಾನು ಇದುವರೆವಿಗೆ ಮಾಡುತ್ತಿದ್ದ, ಜಪದ ಮಿತಿ ಅವಳಿಗೆ ಈಗ ಅರ್ಥವಾಗ ತೊಡಗುತ್ತದೆ.

ದೈವಸಾಕ್ಷಾತ್ಕಾರಕ್ಕೆ ಬೇಕಾದ ಜಪತಪಗಳ ಅವಶ್ಯಕತೆಯನ್ನು ಕುರಿತು ಅನೇಕ ಧರ್ಮಗಳು ಚರ್ಚಿಸಿವೆ. ಹಾಗೆಯೇ ಕುರುಹಿನ ಪೂಜೆಯ ಬಗ್ಗೆಯೂ ವಿಸ್ತೃತ ವಿವರಣೆಗಳು ಸಿಕ್ಕುತ್ತವೆ. ಇಷ್ಟಲಿಂಗದ ಪೂಜೆ ಹಾಗೆಯೇ ಮುಂದುವರಿದು ಇಷ್ಟಲಿಂಗ ಭಾವಲಿಂಗವಾಗುವ, ಭಾವಲಿಂಗ ಪ್ರಾಣಲಿಂಗವಾಗುವ ಪ್ರಕ್ರಿಯೆಯ ಪರಿಕಲ್ಪನೆಯೂ ಸಹ ಬ್ರಹ್ಮಚೈತನ್ಯರ 'ಅಜಪಜಪ'ದ ಪರಿಕಲ್ಪನೆಯೂ ಸೂಕ್ಷ್ಮವಾಗಿ ಚಿಂತಿಸಿದರೆ ಒಂದೇ ಬಿಂದುವಿನಲ್ಲಿ ಸೇರುತ್ತವೆ ಎನ್ನುವುದನ್ನು ನೋಡಬಹುದು. ಜಪತಪಗಳಾಗಲೀ, ಪೂಜೆಯಾಗಲೀ ಬಾಹ್ಯದಿಂದ ಆಂತರ್ಯಕ್ಕೆ ಇಳಿಯುವ ಪರಿಕ್ರಮಗಳಾಗಬೇಕು ಎನ್ನುವುದು ದಾರ್ಶನಿಕರ ಮೂಲ ಉದ್ದೇಶವೇ ಆಗಿದೆ. ಆಂತರ್ಯಕ್ಕೆ ಚಲಿಸದೆ ಕೇವಲ ಬಾಹ್ಯಾಡಂಬರದಲ್ಲಿಯೇ ವಿಹರಿಸಿದರೆ ಅವುಗಳಿಂದ ಅಪಾಯಗಳೇ ಹೆಚ್ಚು. ಬ್ರಹ್ಮಚೈತನ್ಯರ 'ಅಜಪಜಪ'ದ ಸ್ಥಿತಿಗೆ ತಲುಪುವುದೇ ನಿಜವಾದ ಅಧ್ಯಾತ್ಮ.

ರಾಮಾಯಣದಲ್ಲಿ ಆಂಜನೇಯನು ತನ್ನ ಎದೆಯನ್ನು ಬಗೆದು ಅದರೊಳಗಿರುವ ರಾಮ ಸೀತೆಯರನ್ನು ತೋರಿಸಿದ ಎನ್ನುವ ಪುರಾಣ ಪರಿವೇಷದ ಕಥೆ ಬರುತ್ತದೆ. ಇದನ್ನು ಸಾಂಕೇತಿಕವಾಗಿ ತೆಗೆದುಕೊಂಡಾಗ ತಿಳಿಯುತ್ತದೆ - ಆಂಜನೇಯನ ಈ ಕ್ರಿಯೆ 'ಅಜಪಜಪ'ದ ಸ್ವರೂಪವೇ ಆಗಿದೆ ಎನ್ನುವುದು. ಏಕೆಂದರೆ ರಾಮ ಸೀತೆ ಆತನ ಬಾಹ್ಯ ಜಪಕ್ಕಿಂತ ಮುಖ್ಯವಾಗಿ ಅಂತರಂಗದೊಳಗಿದ್ದರು. ಆ ಶಕ್ತಿಯೇ ಆತನ ಸಮುದ್ರಲಂಘನಕ್ಕೆ ಸ್ಫೂರ್ತಿಯಾದದ್ದು, ಸತ್ವವನ್ನು ಒದಗಿಸಿದುದು. ದೇವರ ಹೆಸರಿನಲ್ಲಿ, ಧರ್ಮದ ಹೆಸರಿನಲ್ಲಿ ನಡೆಯುತ್ತಿರುವ ಮೌಢ್ಯ, ಕಂದಾಚಾರಗಳಿಗೆ ಪ್ರಮುಖ ಕಾರಣ, ಧರ್ಮದೇವರುಗಳ 'ಜಪ' ವ್ಯಕ್ತಿಗಳ ದೇಹಸ್ತರದಲ್ಲಿ ಮಾತ್ರ ಪರಿಭಾವಿಸಲ್ಪಡುತ್ತಿರುವುದು. ಅದು ಅಂತರಂಗಕ್ಕೆ ಇಳಿಯದಿರುವುದೇ ಎಲ್ಲ ಧಾರ್ಮಿಕ ಭಯೋತ್ಪಾದನೆಯ ಬೀಜ. ಇಂತಹ ದುಷ್ಟ ಬೀಜ ಮೊಳೆಯದಂತೆ ನೋಡಿಕೊಳ್ಳಬೇಕಾದದ್ದು ಇಂದಿನ ಸಾಮಾಜಿಕ ತುರ್ತಾಗಿದೆ. ಸಾಮಾಜಿಕರು ಇದನ್ನು ಗಂಭೀರವಾಗಿ ಪರಿಗಣಿಸಿ ಧಾರ್ಮಿಕ ಭಯೋತ್ಪಾದನೆಗೆ ಇತಿಶ್ರೀ ಹಾಡಬೇಕಾಗಿದೆ.

**ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು**

# ನಾನು ಮಲಾಲಾ

**ಹಾ.ಮ. ಪೃಥ್ವಿರಾಜ್**

ದಾಟಿ ಬಾ ಮಹಾದೇವಿಯಕ್ಕನ ಹಾಗೇ
ನಿರ್ಭಯದ ನಿಲುವಿಗೆ ..... ಆತ್ಮಗೌರವದ ಗಿರಿಶಿಖರದೆತ್ತರದಲ್ಲಿ
ಅರಳಿಕೊಳ್ಳಲಿ ಬದುಕು ಹೊಸ ಬೆಳಕಿಗೆ.

ಡಾ. ಜಿ.ಎಸ್. ಶಿವರುದ್ರಪ್ಪನವರ ಈ ಮೇಲಿನ ಕವಿತೆ 12ನೇ ಶತಮಾನದಲ್ಲಿ ಇಡೀ ಸಮಾಜದ ಅಂಕುಡೊಂಕುಗಳನ್ನು ತಿದ್ದಿದ ಅಕ್ಕಮಹಾದೇವಿಯ ಕುರಿತು ಈ ಕವಿತೆಯನ್ನು ಓದಿದಾಗ ಎಂಥವರಿಗೂ ಸ್ಫೂರ್ತಿಯ ಚಿಲುಮೆಯಾಗಿ ಬರುವುದು. ಆ ಕಾರಣಕ್ಕೆ ಈ ಲೇಖನ ಬರೆಯಬೇಕು ಅಂಥ ಅಂದುಕೊಂಡೆ. ಮೊನ್ನೆ ಮೊನ್ನೆ ಪಾಕಿಸ್ತಾನದ ಪೇಷಾವರ್‌ನಲ್ಲಿ ಎಳೇ ಕಂದಮ್ಮಗಳನ್ನ ಗುಂಡಿಟ್ಟು ಕೊಂದ ದೃಶ್ಯ ಇಡೀ ಪ್ರಪಂಚದಲ್ಲಿ ಎಲ್ಲಾ ಮಾನವೀಯ ಹೃದಯಗಳಿಗೆ ಘಾಸಿ ಉಂಟಾಯಿತು.

ಈ ಪೇಷಾವರ್‌ನ ಹತ್ತಿರದ ಊರಿನಲ್ಲೇ ಜನಿಸಿದವಳು. 2014ರ ನೊಬೆಲ್ ಶಾಂತಿ ಪ್ರಶಸ್ತಿಯ ಪುರಸ್ಕೃತೆ ಮಲಾಲಾ.

ನನಗೆ 12ನೇ ಶತಮಾನದ ಅಕ್ಕನಾಗಿ ಮಹಾದೇವಿಯಕ್ಕ ಕಂಡುಬಂದರೆ, 21ನೇ ಶತಮಾನದ ತಂಗಿಯಾಗಿ ಮಲಾಲಾ ಇಡೀ ಪ್ರಪಂಚದ ಎಲ್ಲಾ ಹೆಣ್ಣುಮಕ್ಕಳಿಗೆ ಸ್ಫೂರ್ತಿಯಾಗಿದ್ದಾಳೆ.

ಪಾಕಿಸ್ತಾನದ ಸ್ವಾತ್ ಪ್ರಾಂತ್ಯದಲ್ಲಿ ಹೆಣ್ಣುಮಕ್ಕಳ ಶಿಕ್ಷಣದ ಪರವಾಗಿ ಪ್ರಚಾರ ನಡೆಸುತ್ತಿದ್ದ ಈ ಬಾಲಕಿ, ಮೊದಲಿಗೆ ಬ್ರಿಟಿಷ್ ಬ್ರಾಡ್‌ಕಾಸ್ಟಿಂಗ್ ಕಾರ್ಪೊರೇಷನ್ (ಬಿಬಿಸಿ)ನ ಉರ್ದು ವೆಬ್‌ಸೈಟ್‌ಗೆ ಬರೆಯುವ ಮೂಲಕ ಗಮನ ಸೆಳೆದಳು. ಅಲ್ಲಿ ಈಕೆ 'ಗುಲ್ ಮಕಾಯ್' ಎನ್ನುವ ಹೆಸರಿನಲ್ಲಿ, ತಾಲಿಬಾನ್ ಭಯೋತ್ಪಾದಕರ ಅಟ್ಟಹಾಸದ ಸಂದರ್ಭದಲ್ಲಿನ ತಮ್ಮ ಬದುಕು ಕಂಡ ಅವಸ್ಥೆಗಳ ಬಗ್ಗೆ ಬರೆಯುತ್ತಿದ್ದಳು. ಜೊತೆಗೆ, ತಮ್ಮ ಸಮುದಾಯದಲ್ಲಿ ಶಿಕ್ಷಣದಿಂದ ವಂಚಿತರಾಗಿರುವ ಹೆಣ್ಣುಮಕ್ಕಳಿಗೆ ವಿದ್ಯಾಭ್ಯಾಸ ಸಿಗಬೇಕೆಂದು ತಮ್ಮ ಕುಟುಂಬದವರು ನಡೆಸುತ್ತಿರುವ ಹೋರಾಟದ ಬಗ್ಗೆಯೂ ಈಕೆ ಆಗಿಂದಾಗ್ಗೆ ಮಾತನಾಡುತ್ತಿದ್ದಳು. ಆದರೆ ಅದನ್ನು ಸಹಿಸದ ತಾಲಿಬಾನ್ ಭಯೋತ್ಪಾದಕರು 2012ರ ಅಕ್ಟೋಬರ್ ತಿಂಗಳಲ್ಲಿ ಇವಳನ್ನು ಮುಗಿಸಬೇಕೆಂದು ಸಂಚು ರೂಪಿಸಿ, ಈಕೆಯ ಮೇಲೆ ಗುಂಡಿನ ದಾಳಿ ನಡೆಸಿದರು.

ಗುಂಡೇಟು ತಿಂದೂ ಪವಾಡಸದೃಶವಾಗಿ ಬದುಕುಳಿದ ಈ ಬಾಲಕಿ, ಈಗಲೂ

ತನ್ನ ಆಂದೋಲನವನ್ನು ಮುಂದುವರಿಸಿದ್ದಾಳೆ. ಈಕೆಯ ಧೈರ್ಯ-ಸಾಹಸಗಳನ್ನು ಮೆಚ್ಚಿ ಪಾಕಿಸ್ತಾನ ಸರಕಾರವು 2011ರಲ್ಲಿ ಈಕೆಗೆ 'ರಾಷ್ಟ್ರೀಯ ಶಾಂತಿ ಪ್ರಶಸ್ತಿ'ಯನ್ನು ನೀಡಿದೆ. 2013ರಲ್ಲಿ 'ಅಂತಾರಾಷ್ಟ್ರೀಯ ಮಕ್ಕಳ ಶಾಂತಿ ಪ್ರಶಸ್ತಿ'ಗೆ ಪಾತ್ರವಾದ ಈ ಬಾಲಕಿಯ ಹೆಸರು ನೊಬೆಲ್ ಶಾಂತಿ ಪ್ರಶಸ್ತಿಗೂ ಸೂಚಿತವಾಗಿತ್ತು. ಆದರೆ, ಆಗ ಪ್ರಶಸ್ತಿ ಬರಲಿಲ್ಲ. ಇದಾದ ಒಂದು ವರ್ಷದ ಬಳಿಕ ನೊಬೆಲ್ ಪ್ರಶಸ್ತಿ ಸಮಿತಿಯು ಈಕೆಗೆ, 2014ನೇ ಇಸವಿಯ 'ನೊಬೆಲ್ ಶಾಂತಿ ಪ್ರಶಸ್ತಿ ಪುರಸ್ಕಾರ'ವನ್ನು ಘೋಷಿಸಿತು. ಇಷ್ಟು ಚಿಕ್ಕ ವಯಸ್ಸಿನಲ್ಲಿ ಇದುವರೆಗೂ ಇನ್ನೊಬ್ಬರ ಹೆಸರು ಈ ಪ್ರತಿಷ್ಠಿತ ಪ್ರಶಸ್ತಿಗೆ ಪರಿಗಣಿತವಾಗಿರಲಿಲ್ಲ. ಜಗತ್ತಿನೆಲ್ಲೆಡೆ ಮಕ್ಕಳಿಗೆ ಉಚಿತ ಶಿಕ್ಷಣ ಸಿಗುವಂತಾಗಬೇಕು ಎಂಬುದು ಇವಳ ಮಹತ್ವಾಕಾಂಕ್ಷೆ. ಈ ಕೆಲಸವನ್ನು ಈಕೆ ಲಾಭ-ನಷ್ಟದ ಲೆಕ್ಕಾಚಾರವಿಲ್ಲದ 'ಮಲಾಲಾ ಫಂಡ್' ಮೂಲಕ ಮಾಡುತ್ತಿದ್ದಾಳೆ. ಸಮುದಾಯ ಶಿಕ್ಷಣ ಕಾರ್ಯಕ್ರಮಗಳನ್ನು ನಿರಂತರವಾಗಿ ಹಮ್ಮಿಕೊಳ್ಳುವುದರ ಜೊತೆಗೆ ಶಿಕ್ಷಣಕ್ಕಾಗಿ ದುಡಿಯುತ್ತಿರುವವರನ್ನು ಈಕೆ ಬೆಂಬಲಿಸುತ್ತಿದ್ದಾಳೆ.

ನಾನು, ನಡುರಾತ್ರಿಯಲ್ಲಿ ಅಸ್ತಿತ್ವಕ್ಕೆ ಬಂದಂತಹ ದೇಶದಿಂದ ಬಂದವಳು. ಆದರೆ, ನಾನು ಇನ್ನೇನು ಸತ್ತೇಹೋದೆ ಎನ್ನುವ ಸ್ಥಿತಿಗೆ ಈಡಾದಾಗ ಹೊತ್ತು ಆಗಷ್ಟೇ ನಡುಮಧ್ಯಾಹ್ನವನ್ನು ದಾಟಿತ್ತು.

ಒಂದು ವರ್ಷದ ಹಿಂದೆ ಯಾವತ್ತಿನಂತೆಯೇ ಶಾಲೆಗೆ ಹೋದ ನಾನು, ಮತ್ತೆ ಮನೆಗೆ ವಾಪಸ್ಸಾಗಲಿಲ್ಲ. ಅವತ್ತು ತಾಲಿಬಾನಿ ಉಗ್ರಗಾಮಿಗಳು ನನ್ನತ್ತ ಗುಂಡು ಹಾರಿಸಿದರು. ಗುಂಡೇಟು ಬಿದ್ದ ಪರಿಣಾಮವಾಗಿ ಪ್ರಜ್ಞೆ ಕಳೆದುಕೊಂಡು ನನ್ನನ್ನು ಪಾಕಿಸ್ತಾನದಿಂದ ಆಚೆಗೆ ಚಿಕಿತ್ಸೆಗೆಂದು ವಿಮಾನದಲ್ಲಿ ಸಾಗಿಸಲಾಯಿತು. ಆಗ ಕೆಲವರು, 'ಮಲಾಲಾ ಇನ್ನು ಯಾವತ್ತಿಗೂ ಪಾಕಿಸ್ತಾನಕ್ಕೆ ವಾಪಸ್ ಬರಲಾರಳು' ಎಂದುಕೊಂಡರು. ಆದರೆ, ನನ್ನ ಹೃದಯ ಇದಕ್ಕೆ ತದ್ವಿರುದ್ಧವಾಗಿ, 'ಇಲ್ಲ ಇಲ್ಲ, ನಾನು ನನ್ನ ದೇಶಕ್ಕೆ ಮತ್ತೆ ಬಂದೇಬರುವೆ' ಎಂದು ಮಿಡಿಯುತ್ತಿತ್ತು. ನೀವು ಅಗಾಧವಾಗಿ ಪ್ರೀತಿಸುವ ದೇಶದಿಂದ ಶಾಶ್ವತವಾಗಿ ದೂರವಾಗಬೇಕೆಂದು ಯಾರೊಬ್ಬರೂ ಯಾರಿಗೂ ಬಯಸುವುದಿಲ್ಲ . ಈಗ ಪ್ರತಿದಿನ ಮುಂಜಾನೆ ಕಣ್ಣು ಬಿಟ್ಟೊಡನೆಯೇ ನನ್ನ ಸಾಮಾನು ಸರಂಜಾಮುಗಳು ತುಂಬಿರುವ, ನೆಲದ ಮೇಲೆಲ್ಲ ನನ್ನ ಬಟ್ಟೆಬರೆಗಳು ಚೆಲ್ಲಾಪಿಲ್ಲಿಯಾಗಿ ಬಿದ್ದಿರುವ ಮತ್ತು ಕಪಾಟಿನ ತುಂಬೆಲ್ಲಾ ನನ್ನ ಶಾಲೆಯಲ್ಲಿ ನನಗೆ ಬಂದ ಬಹುಮಾನಗಳನ್ನು ಹೊತ್ತುಕೊಂಡಿರುವ ಆ ನನ್ನ ಹಳೆಯ ಕೋಣೆಯನ್ನು ಕಣ್ತುಂಬಿಕೊಳ್ಳಬೇಕೆನಿಸುತ್ತದೆ. ಆದರೆ ಅದು ಸಾಧ್ಯವಿಲ್ಲ. ಏಕೆಂದರೆ, ನಾನೀಗ ನನ್ನ ತವರಾದ ಪಾಕಿಸ್ತಾನ ಮತ್ತು ಅಲ್ಲಿ ನಮ್ಮ ಮನೆಯಿರುವ ಸ್ವಾತ್ ಕಣಿವೆಗಿಂತ ಐದು ಗಂಟೆಗಳ ಕಾಲ ಹಿಂದಿರುವ ಈ ದೇಶದಲ್ಲಿದ್ದೇನೆ. ಈ ದೇಶಕ್ಕೆ ಹೋಲಿಸಿದರೆ ನಮ್ಮ ದೇಶ ಶತಮಾನಗಳಷ್ಟು ಹಿಂದಿದೆ. ಇಲ್ಲಿ, ನೀವು ನಿಮ್ಮ ಮನಸ್ಸಿನಲ್ಲಿ ಕಲ್ಪಿಸಿಕೊಳ್ಳುವ



ಯಾವುದೇ ತರಹದ ಸೌಲಭ್ಯವಾದರೂ ಸಲೀಸಾಗಿ ಸಿಗುತ್ತದೆ. ನಲ್ಲಿಯಲ್ಲಿ ನಿಮಗೆ ಬಿಸಿನೀರು ಬೇಕೆಂದರೆ ಬಿಸಿನೀರು, ತಣ್ಣೀರು ಬೇಕೆಂದರೆ ತಣ್ಣೀರು ಸಿಗುತ್ತದೆ; ಒಂದು ಸ್ವಿಚ್ ಅದುಮಿದರೆ ಸಾಕು, ಹಗಲು-ರಾತ್ರಿಯೆಲ್ಲ ವಿದ್ಯುತ್ ದೀಪಗಳು ಝಗಮಗಿಸುತ್ತದೆ. ಹೀಗಾಗಿ ಇಲ್ಲಿ ಬುಡ್ಡಿದೀಪಗಳ ಹಂಗಿಲ್ಲ; ಅಡುಗೆ ಮಾಡಬೇಕೆಂದರೆ ಪೇಟೆಗೆ ಹೋಗಿ ಗ್ಯಾಸ್ ಸಿಲಿಂಡರುಗಳನ್ನು ಹೊತ್ತುಕೊಂಡು ಬರಬೇಕಾಗಿಲ್ಲ. ಅದಕ್ಕೆಂದೇ ಸುಸಜ್ಜಿತ ಓವನ್ನುಗಳಿವೆ. ಒಟ್ಟಿನಲ್ಲಿ ಇಲ್ಲಂತೂ ಪ್ರತಿಯೊಂದೂ ಅತ್ಯಾಧುನಿಕ. ಇಷ್ಟೇ ಅಲ್ಲ, ಪ್ಯಾಕೆಟ್ಟುಗಳಲ್ಲಿ ಒಪ್ಪವಾಗಿಟ್ಟಿರುವ ಸಿದ್ಧ ಆಹಾರವೂ ಇಲ್ಲುಂಟು.

ನಮ್ಮ ತಂದೆಯೇ ನಾನು ಓದುತ್ತಿದ್ದ ಈ ಶಾಲೆಯನ್ನು ಆರಂಭಿಸಿದ್ದು. ಆದರೆ, ಅವರು ಈ ಶಾಲೆ ಆರಂಭಿಸುವಾಗ ನಾನಿನ್ನು ಹುಟ್ಟಿರಲಿಲ್ಲ. ಆರಂಭದ ಆ ದಿನಗಳಲ್ಲಿ ತುಂಬಾ ಠೀವಿಯಿಂದ ಕಾಣುವಂತೆ ಕೆಂಪು ಮತ್ತು ಬಿಳಿ ಬಣ್ಣಗಳಲ್ಲಿ "KHUSHAL SCHOOL' (ಕುಶಾಲ್ ಸ್ಕೂಲ್) ಎಂದು ಬರೆಸಲಾಗಿತ್ತು. ನಾವು ವಾರದಲ್ಲಿ ಆರು ದಿನ ಸ್ಕೂಲಿಗೆ ಹೋಗುತ್ತಿದ್ದೆವು. ಹದಿನೈದು ವರ್ಷದ ನಾನು. ಆಗ ಒಂಬತ್ತನೇ ಕ್ಲಾಸಿನಲ್ಲಿದ್ದೆ. ನಮ್ಮ ಕೊಠಡಿಯಲ್ಲಿದ್ದ ಮಕ್ಕಳೆಲ್ಲ ಒಂದೋ ರಸಾಯನಶಾಸ್ತ್ರದ ಸಮೀಕರಣಗಳನ್ನು ಉರು ಹೊಡೆಯುತ್ತಿದ್ದರು; ಇಲ್ಲವೇ ಉರ್ದು ವ್ಯಾಕರಣವನ್ನು ಓದಿಕೊಳ್ಳುತ್ತಿದ್ದರು; ಇಲ್ಲವೇ 'ಅವಸರದಿಂದ ಎಲ್ಲವೂ ವ್ಯರ್ಥ' ಎಂಬಂಥ ನೀತಿಕತೆಗಳನ್ನು ಇಂಗ್ಲಿಷ್‌ನಲ್ಲಿ ಬರೆಯುತ್ತಿದ್ದರು; ಇಲ್ಲವೇ ರಕ್ತಪರಿಚಲನೆಯ ಸ್ವರೂಪವನ್ನು ವಿವರಿಸುವ ಚಿತ್ರವನ್ನು ಬಿಡಿಸಿಕೊಂಡು ಕೂತಿರುತ್ತಿದ್ದರು. ಅಂದಹಾಗೆ, ನನ್ನ ಸಹಪಾಠಿಗಳಲ್ಲಿ ಹೆಚ್ಚಿನವರು ಮುಂದೆ ಡಾಕ್ಟರಾಗಬೇಕೆಂದು ಕನಸು ಕಾಣುತ್ತಿದ್ದವರಾಗಿದ್ದರು. ಇವೆಲ್ಲವೂ ಕೆಲವರಿಗೆ ಅಪಾಯದ ಮುನ್ಸೂಚನೆಯಾಗಿ ಕಂಡೀತು ಎನ್ನುವುದನ್ನು ಊಹಿಸಿಕೊಳ್ಳಲೂ ಆಗ ಸಾಧ್ಯವಿರಲಿಲ್ಲ. ಆದರೆ, ಸ್ವಾತ್ ಕಣಿವೆಯ ಮುಖ್ಯ ನಗರವಾದ ಮಿಂಗೋರಾದಲ್ಲಿ ಈ ಬಗ್ಗೆ ಗುಸುಗುಸು ಮಾತು ಕೇಳಿಬರುತ್ತಿದ್ದವು. ಅಷ್ಟೇ ಅಲ್ಲ. ತಾಲಿಬಾನ್‌ನಂಥ ಸಂಘಟನೆಯ ಮಂದಿ ಕೂಡ 'ಹೆಣ್ಣುಮಕ್ಕಳೆಲ್ಲ ಹೀಗೆ ಸ್ಕೂಲಿಗೆ ಹೋಗ್ತಾ ಇರೋದು ಖಂಡಿತಾ ಒಳ್ಳೇದಲ್ಲ' ಎಂದು ಯೋಚಿಸುತ್ತಿದ್ದರು.

ನಾನೊಬ್ಬಳೇ ಒಂಟಿಯಾಗಿ ಸ್ಕೂಲಿಗೆ ನಡೆದುಕೊಂಡು ಹೋಗಿಬರುವುದರ ಬಗ್ಗೆ ಅಮ್ಮನಿಗೆ ತುಂಬಾ ಭಯವಿತ್ತು. ಅಮ್ಮನ ಭಯದಿಂದಲೇ ನಾನು, ಬಸ್ಸಿನಲ್ಲಿ ಹೋಗಿಬರಲು ಶುರು ಮಾಡಿದೆ. ಏಕೆಂದರೆ ನಮಗೆ ವರ್ಷವಿಡೀ ಬೆದರಿಕೆಯ ಕರೆಗಳು ಬರುತ್ತಲೇ ಇದ್ದವು. ಇಂಥ ಬೆದರಿಕೆಗಳಲ್ಲಿ ಕೆಲವು ವರ್ತಮಾನ ಪತ್ರಿಕೆಗಳ ಮೂಲಕ ಬರುತ್ತಿದ್ದವು; ಇನ್ನು ಕೆಲವು ಪತ್ರಗಳ ಮೂಲಕ ಬರುತ್ತಿದ್ದವು; ಇನ್ನೂ ಕೆಲವು ಜನರಿಂದ ಜನರಿಗೆ ಹಬ್ಬಿ, ನಮ್ಮನ್ನು ತಲುಪುತ್ತಿದ್ದವು. ಹೀಗಾಗಿ, ನನಗೆಲ್ಲಾದರೂ

ತೊಂದರೆಯಾದೀತೆಂದು ಅಮ್ಮ ಹೆದರಿಕೊಂಡಿದ್ದರು. ಆದರೆ, ಆಗ ನನ್ನ ಆಲೋಚನೆಯೇ ಬೇರೆಯಾಗಿತ್ತು. ನಾನಾಗ 'ತಾಲಿಬಾನಿಗಳು ಯಾವತ್ತು ಹೆಣ್ಣುಮಕ್ಕಳ ತಂಟೆಗೆ ಬರೋದಿಲ್ಲ. ಅವರು ಬಹುಶಃ ನಮ್ಮ ಅಪ್ಪನ ಮೇಲೆ ಕಣ್ಣಿಟ್ಟಿರಬಹುದು. ಏಕೆಂದರೆ, ನಮ್ಮ ಅಪ್ಪ ಸದಾ ತಾಲಿಬಾನಿಗಳ ವಿರುದ್ಧ ಮಾತನಾಡುತ್ತಿರುತ್ತಾರೆ' ಎಂದುಕೊಂಡಿದ್ದೆ. ಹಿಂದಿನ ಆಗಸ್ಟ್‌ನಲ್ಲಷ್ಟೆ ನಮ್ಮ ತಂದೆಯ ಆತ್ಮೀಯ ಸ್ನೇಹಿತ ಮತ್ತು ನಮ್ಮ ಅಪ್ಪನ ಜೊತೆಯಲ್ಲಿ ಆಂದೋಲನ ಮಾಡುತ್ತಿದ್ದ ಜಹೀದ್ ಖಾನ್ ಅವರು ಪ್ರಾರ್ಥನೆ ಸಲ್ಲಿಸಲು ಹೋಗುತ್ತಿದ್ದಾಗ ಉಗ್ರಗಾಮಿಗಳು ಅವರನ್ನು ಗುಂಡಿಟ್ಟು ಕೊಂದಿದ್ದರು. ಅದಾದಮೇಲೆ ಪ್ರತಿಯೊಬ್ಬರೂ ನಮ್ಮ ಅಪ್ಪನಿಗೆ 'ನೀನು ಹುಷಾರಾಗಿರು... ನೀನೇ ಅವರ ಮುಂದಿನ ಗುರಿ' ಎಂದು ಹೇಳುತ್ತಿದ್ದರು. ಇದು ನನಗೂ ಚೆನ್ನಾಗಿ ಗೊತ್ತಿತ್ತು.

**ಇಳೆಗಿಳಿದ ಮಗಳು**

ನಾನು ಹುಟ್ಟಿದಾಗ ನಮ್ಮ ಹಳ್ಳಿಯ ಜನರೆಲ್ಲ ನಮ್ಮ ತಾಯಿಯ ಬಳಿ ಬಂದು 'ಅಯ್ಯೋ ಪಾಪ....! ಎಂದರೇ ವಿನಾ ಯಾರೊಬ್ಬರೂ ಅಪ್ಪಿತಪ್ಪಿಯೂ ನಮ್ಮ ಅಪ್ಪನಿಗೊಂದು ಅಭಿನಂದನೆ ಹೇಳಲಿಲ್ಲ. ನಾನು ಹುಟ್ಟಿದ್ದು ಬೆಳ್ಳಂಬೆಳಗ್ಗೆ. ರಾತ್ರಿಯೆಲ್ಲ ಮಿನುಗಿದ್ದ ನಕ್ಷತ್ರಗಳಲ್ಲಿ ಕಟ್ಟಕಡೆಯದು ಬಹುಶಃ ಆಗತಾನೇ ಬಾಂದಳದಲ್ಲಿ ಕಣ್ಮರೆಯಾಗಿತ್ತು. ನಮಗೆ – ಅಂದರೆ ಪಾಶ್ತೂನಿ ಜನರಿಗೆ ಇದೊಂದು ಒಳ್ಳೆಯ ಶಕುನ. ನಮ್ಮಪ್ಪನ ಕೈಯಲ್ಲಿ ಆಗ ತುಂಬುಗರ್ಭಿಣಿಯಾಗಿದ್ದ ನಮ್ಮತಾಯಿಯನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗುವಷ್ಟಾಗಲಿ ಅಥವಾ ನಮ್ಮ ತಾಯಿಗೆ ಹೆರಿಗೆ ಸಮಯದಲ್ಲಿ ದಾದಿಯ ನೆರವು ಕೊಡಿಸುವಷ್ಟಾಗಲಿ ದುಡ್ಡು-ಕಾಸು ಇರಲಿಲ್ಲ. ಹೀಗಾಗಿ, ನಾನು ಹುಟ್ಟುವ ಸಮಯದಲ್ಲಿ ನಮ್ಮ ನೆರೆಯಮನೆಯವರೇ ಒಬ್ಬರು ಸಹಾಯ ಮಾಡಿದರು. ನಮ್ಮ ತಂದೆ-ತಾಯಿಗೆ ಆಗಿದ್ದ ಮೊದಲನೇ ಮಗು ಏಕೋ ಏನೋ ಹೊಟ್ಟೆಯೊಳಗೇ ಸತ್ತುಹೋಗಿತ್ತು. ಆದರೆ, ನಾನು ನಮ್ಮ ಅಮ್ಮನನ್ನು ಜಾಡಿಸುತ್ತ ಜೋರಾಗಿ ಅಳುತ್ತ ಈ ಭೂಮಿಗೆ ಬಂದೆ. ನಮ್ಮದು ಎಂಥ ಸೀಮೆಯೆಂದರೆ, ಅಲ್ಲಿ ಗಂಡುಮಗು ಹುಟ್ಟಿದರೆ ಬಂದೂಕು ಸಿಡಿಸಿ ಹಿರಿಹಿರಿ ಹಿಗ್ಗುತ್ತಾರೆ. ಆದರೆ ಹೆಣ್ಣುಮಗುವೇನಾದರೂ ಹುಟ್ಟಿದರೆ ಅದನ್ನು ಪರದೆಗಳ ಹಿಂದೆ ಬಚ್ಚಿಡುತ್ತಾರೆ. ನಮ್ಮಲ್ಲಿ ಹೆಣ್ಣುಮಕ್ಕಳೆಂದರೆ ಕೇವಲ ಅಡುಗೆ ಬೇಯಿಸಿಹಾಕಿಕೊಂಡು, ಮಕ್ಕಳನ್ನು ಹೆರುವುದಕ್ಕೆ ಮಾತ್ರ ಇರುವವರಷ್ಟೆ. ಇದನ್ನು ಬಿಟ್ಟು ಅವರಿಗೆ ಜೀವನದಲ್ಲಿ ಬೇರೆ ಯಾವ ಕೆಲಸವೂ ಇಲ್ಲ.

ಹೆಚ್ಚಿನ ಪಶ್ತೂನಿಗಳಿಗೆ ಹೆಣ್ಣುಮಕ್ಕಳು ಹುಟ್ಟಿದ ದಿವಸವೆಂದರೆ ಅವತ್ತು ಸೂತಕದ ಛಾಯೆ ಆವರಿಸಿಕೊಂಡುಬಿಡುತ್ತದೆ. ಆದರೆ, ನಾನು ಹುಟ್ಟಿದಾಗ ಕೆಲವು ಮಂದಿ ಸಂಭ್ರಮಾಚರಣೆ ಮಾಡಿದರು. ಹೀಗೆ ಸಂಭ್ರಮಾಚಾರಣೆ ಮಾಡಿದವರಲ್ಲಿ ನಮ್ಮ ತಂದೆಯ ಸೋದರಸಂಬಂಧಿ ಜೆಹಾನ್ ಶೇರ್‌ಖಾನ್, ಯೂಸಫ್‌ಝಾಯಿ ಕೂಡ



ಒಬ್ಬರು. ಅಷ್ಟೇ ಅಲ್ಲ, ಅವರು ನಾನು ಹುಟ್ಟಿದ ಆ ಗಳಿಗೆಯಲ್ಲಿ ಸಾಕಷ್ಟು ಹಣವನ್ನೂ ಉಡುಗೊರೆಯಾಗಿ ಕೊಟ್ಟಿದ್ದರು. ಇದರ ಜೊತೆಗೆ ಅವರನ್ನು ನಮ್ಮ ಇಡೀ ವಂಶವೃಕ್ಷ ನಮ್ಮ ಮುತ್ತಾತನ ತಂದೆ ದಲೋಕ್‌ಹಲ್ ಯೂಸಫ್‌ಝಾಯಿ ಅವರವರೆಗೂ ಹಬ್ಬಿತ್ತು. ನಮ್ಮ ಅಪ್ಪ ಜಿಯಾವುದ್ದೀನ್ ನಿಜಕ್ಕೂ ಉಳಿದ ಪಶ್ತೂನಿ ಗಂಡಸರಿಗಿಂತ ಭಿನ್ನವಾಗಿದ್ದನು. ಆ ವಂಶವೃಕ್ಷದ ನಕಾಶೆಯನ್ನು ಕೈಗೆ ತೆಗೆದುಕೊಂಡ ಅವರು, ತಮ್ಮ ಹೆಸರಿನ ಮುಂದೆ ಲಾಲಿಪಪ್‌ನಂತೆ ಕಾಣುವ ಒಂದು ಗೆರೆ ಎಳೆದು, ಕೊನೆಯಲ್ಲಿ 'ಮಲಾಲಾ' ಎಂದು ಬರೆದರು. ಇದನ್ನು ನೋಡಿದ ಅವರ ಸೋದರಸಂಬಂಧಿ ಆಶ್ಚರ್ಯಚಕಿತರಾಗಿ ನಕ್ಕಿದ್ದರು. ಆದರೆ, ಅದಕ್ಕೆಲ್ಲ ನಮ್ಮ ತಂದೆ ಸೊಪ್ಪುಹಾಕಲಿಲ್ಲ. ನಾನು ಹುಟ್ಟಿದ ಗಳಿಗೆಯಲ್ಲಿ ನನ್ನ ಕಂಗಳನ್ನೆ ನೋಡಿದ ಅವರು ಆ ಕ್ಷಣದಿಂದಲೇ ನನ್ನನ್ನು ಪ್ರೀತಿಸತೊಡಗಿದರಂತೆ. ಇದನ್ನೆಲ್ಲ ನನಗೆ ಹೇಳಿದ್ದು ನಮ್ಮ ಅಪ್ಪನೇ. ನನಗಷ್ಟೇ ಅಲ್ಲ. ಮಿಕ್ಕವರಿಗೂ ಕೂಡ ಅವರು, 'ಈ ಮಗುವಿನಲ್ಲಿ ಏನೋ ವೈಶಿಷ್ಟ್ಯವಿದೆ ಅಂತ ನನಗೂ ಗೊತ್ತು' ಎಂದು ಹೇಳಿದ್ದರಂತೆ. ಹೀಗಾಗಿಯೇ ಅವರು ನಾನು ತೊಟ್ಟಿಲಲ್ಲಿದ್ದಾಗ ಖರ್ಜೂರ-ದ್ರಾಕ್ಷಿಯಂಥ ಒಣಹಣ್ಣುಗಳು, ಸಿಹಿತಿಂಡಿಗಳು ಮತ್ತು ನಾಣ್ಯಗಳನ್ನು ಅದರೊಳಕ್ಕೆ ಎರಚುವಂತೆ ಇತರರಿಗೆಲ್ಲ ಹೇಳಿದ್ದರಂತೆ. ಸಾಮಾನ್ಯವಾಗಿ ಪಶ್ತೂನಿಗಳಲ್ಲಿ ಗಂಡುಮಗು ಹುಟ್ಟಿದಾಗ ಮಾತ್ರ ಹೀಗೆಲ್ಲ ಮಾಡುತ್ತಾರೆ.

ಅಫಘಾನಿಸ್ತಾನದಲ್ಲಿರುವ ಮೇವಾಂಡ್ ಸೀಮೆಯ ಪ್ರಚಂಡ ವೀರಾಗ್ರಣಿ ಎಂದರೆ ಮಲಾಲಾಯಿ. ಹೀಗಾಗಿ ಅವಳ ಹೆಸರನ್ನೇ ನನಗೆ ಇಡಲಾಯಿತು. ಪಶ್ತೂನಿಗಳು ಪಾಕಿಸ್ತಾನ ಮತ್ತು ಅಫಘಾನಿಸ್ತಾನದ ಮಧ್ಯೆ ಚೆಲ್ಲಾಪಿಲ್ಲಿಯಾಗಿರುವ ಹತ್ತಾರು ಬುಡಕಟ್ಟುಗಳಿಗೆ ಸೇರಿದ ಹೆಮ್ಮೆಯ ಪ್ರಜೆಗಳು. ಶತಶತಮಾನಗಳ ಕಾಲ ನಮ್ಮನ್ನು 'ಪಶ್ತೂನ್‌ವಾಲಿ'ಗಳು ಎಂದೇ ಕರೆಯಲಾಗುತ್ತಿತ್ತು. ಇದು, ನಮ್ಮ ಅತಿಥಿಗಳನ್ನೆಲ್ಲ ಉಪಚರಿಸಲು ನಮಗೆ ಕಾರಣವಾಗುತ್ತಿತ್ತು. ನಮ್ಮಲ್ಲಿ ತುಂಬಾ ದೊಡ್ಡ ಮೌಲ್ಯವೆಂದರೆ 'ಮರ್ಯಾದೆ' (ನಂಗ್) ಅಪಮಾನವನ್ನು ಯಾವ ಪಶ್ತೂನಿಯು ಸಹಿಸಿಕೊಳ್ಳುವುದಿಲ್ಲ; ಅದೊಂದು ಭಯಂಕರವಾದ ಅನುಭವ. ನಮ್ಮಲ್ಲಿ 'ಮರ್ಯಾದೆ ಇಲ್ಲವೆಂದಮೇಲೆ ಈ ಜಗತ್ತು ನಶ್ವರ' ಎಂಬ ಮಾತೇ ರೂಢಿಯಲ್ಲಿದೆ. ಹಾಗೆಯೇ ನಮ್ಮ ಜನ ಪರಸ್ಪರ ಒಬ್ಬರಿಗೊಬ್ಬರು ಬಡಿದಾಡಿಕೊಳ್ಳುವುದಕ್ಕೂ ಖ್ಯಾತರು. ನಮ್ಮಲ್ಲಿ 'ಸೋದರಸಂಬಂಧಿ' (ದಾಯಾದಿ) ಎಂಬ ಅರ್ಥ ಕೊಡುವ ಪದವಾದ 'ತರ್ಬೂರ್'ಗೆ 'ಶತ್ರು' ಎನ್ನುವ ಅರ್ಥವೂ ಇದೆ. ಆದರೆ ನಮ್ಮ ನೆಲವನ್ನು ವಶಪಡಿಸಿಕೊಳ್ಳಲು ಯಾರಾದರೂ ಮುಂದಾದರೆ ಅವರ ವಿರುದ್ಧ ಇಡೀ ಪಶ್ತೂನಿಗಳಲ್ಲಿ ಒಂದಾಗಿ ನಿಲ್ಲುತ್ತಾರೆ. 1880ನೇ ಇಸವಿಯಲ್ಲಿ ಬ್ರಿಟಿಷ್ ಸೇನೆಯು ನಮ್ಮ ನೆಲವನ್ನು ಆಕ್ರಮಿಸಿಕೊಳ್ಳಲು ಮುಂದಾದಾಗ ಅವರನ್ನು ಸದೆಬಡಿಯುವಂತೆ ಆಫ್ಘನ್ ಸೇನೆಯನ್ನು ಮಲಾಲಾಯಿ ಹೇಗೆ ಹುರಿದುಂಬಿಸಿದಳು ಎನ್ನುವ ಕತೆಯನ್ನು ಕೇಳಿಕೊಂಡೇ ಪ್ರತಿಯೊಂದು ಪಶ್ತೂನ್

ಮಗುವೂ ಬೆಳೆಯುತ್ತದೆ. ಅದು ನಿಜಕ್ಕೂ ಎರಡನೇ ಆಂಗ್ಲೋ-ಅಫ್ಘನ್ ಯುದ್ಧದಲ್ಲಿ ಅತ್ಯಂತ ದೊಡ್ಡ ಹೋರಾಟವೇ ಸರಿ.

ಸಣ್ಣ ಪಟ್ಟಣವಾದ ಮೇವಾಂಡ್, ಧೂಳಿನಿಂದ ಆವರಿಸಿಕೊಂಡಿರುವ ಬಯಲು ಪ್ರದೇಶದಲ್ಲಿ ಕಂದಹಾರ್‌ನಿಂದ ಪಶ್ಚಿಮಕ್ಕಿದೆ. ಮಲಾಲಾಯಿ ಅಲ್ಲಿಯ ಕುರುಬನೊಬ್ಬನ ಮಗಳು. ಅವಳು ಪ್ರಾಯದ ಹುಡುಗಿಯಾಗಿದ್ದ ದಿನಗಳವು. ಆಗ ಬ್ರಿಟೀಷರು ಆಫ್ಘಾನಿಸ್ತಾನವನ್ನು ವಶಪಡಿಸಿಕೊಳ್ಳಲು ಮುಂದಾಗಿ, ಯುದ್ಧ ಶುರುವಾಯಿತು. ಆ ಯುದ್ಧದಲ್ಲಿ ಮಲಾಲಾಯಿ ಅವರ ಅಪ್ಪ ಮತ್ತು ಅವಳು ಇನ್ನೇನು ಮದುವೆಯಾಗಲಿದ್ದ ಹುಡುಗ ಇಬ್ಬರೂ ಸೇರಿದಂತೆ ಸಾವಿರಾರು ಆಫ್ಘನ್ನರು ವೀರಾವೇಶದಿಂದ ಹೋರಾಡುತ್ತಿದ್ದರು. ಊರಿನ ಹೆಂಗಸರು ಆ ಯುದ್ಧದಲ್ಲಿ ಗಾಯಾಳುಗಳಾದವರನ್ನು ಉಪಚರಿಸಿ, ಅವರಿಗೆ ನೀರುನಿಡಿ ಕೊಡುತ್ತಿದ್ದರು. ಇದಕ್ಕೆಂದು ಮಲಾಲಾಯಿ ಕೂಡ ಉಳಿದ ಹೆಂಗಸರ ಜೊತೆ ರಣರಂಗಕ್ಕೆ ಹೋದಳು. ಆದರೆ, ರಣರಂಗದಲ್ಲಿ ನೋಡಿದರೆ ಇವರ ಜನರೆಲ್ಲ ಸೋಲಿನಂಚಿನಲ್ಲಿದ್ದು, ಆಫ್ಘನ್ನರ ಧ್ವಜ ಹಿಡಿದಿದ್ದವನು ನೋಡನೋಡುತ್ತಿದ್ದಂತೆಯೇ ನೆಲಕ್ಕೊರಗಿದ. ಇದನ್ನು ನೋಡಿದ ಮಲಾಲಾಯಿ ಕೂಡಲೇ ತನ್ನ ಬಿಳಿ ಬಣ್ಣದ ಶಿರೋವಸ್ತ್ರವನ್ನು ಮೇಲೆತ್ತಿ ಬೀಸುತ್ತ ರಣರಂಗಕ್ಕೆ ಧುಮುಕಿಯೇಬಿಟ್ಟಳು.

ಹೀಗೆ ಅಖಾಡಕ್ಕಿಳಿದ ಮಲಾಲಾಯಿ, ಓ ನನ್ನ ಪ್ರೀತಿಯ ತರುಣರೇ! ಮೇವಾಂಡ್‌ಗಾಗಿ ನೀವು ರಣರಂಗದಲ್ಲಿ ಹೋರಾಡಿ, ಮಡಿಯಿರಿ. ಇಲ್ಲದಿದ್ದರೆ ಬೇರ್‍ಯಾರೋ ಒಬ್ಬರು ನಿಮ್ಮನ್ನು ಉಳಿಸುತ್ತಾರೆ. ಆದರೆ ಅದು ಅವಮಾನದ ಸಂಕೇತ' ಎಂದು ಘೋಷಿಸಿದಳು.

ಕೊನೆಗೆ ಮಲಾಲಾಯಿ ಈ ಯುದ್ಧದಲ್ಲಿ ಗುಂಡೇಟು ತಿಂದು ಸತ್ತಳು. ಆದರೆ ಅವಳಾಡಿದ ಮಾತು ಮತ್ತು ಅವಳು ತೋರಿಸಿದ ಆ ಅಪ್ರತಿಮ ಧೈರ್ಯ ಎರಡೂ ರಣರಂಗದಲ್ಲಿ ಕಾದಾಡುತ್ತಿದ್ದವರಿಗೆ ಸ್ಫೂರ್ತಿಯ ಸೆಲೆಯಾದವು. ಅಲ್ಲಿಯವರೆಗೂ ಬ್ರಿಟೀಷರ ಕೈಯೇ ಮೇಲಾಗಿದ್ದ ಆ ಯುದ್ಧದಲ್ಲಿ ಅಲ್ಲಿಂದ ಮುಂದಕ್ಕೆ ಪರಿಸ್ಥಿತಿ ತಿರುಗುಮುರುಗಾಯಿತು. ಅಂತಿಮವಾಗಿ ಆ ಯುದ್ಧದಲ್ಲಿ ಬ್ರಿಟೀಷರ ಒಂದು ಇಡೀ ತುಕಡಿಯೇ ನಾಮಾವಶೇಷವಾಯಿತು. ಅದು ಬ್ರಿಟಿಷ್ ಸೇನಾಪಡೆಯ ಇತಿಹಾಸದಲ್ಲೇ ಕಂಡುಕೇಳರಿಯದಂತಹ ಘನಘೋರ ಸೋಲು. ಈ ವಿಜಯದ ಬಗ್ಗೆಯಂತೂ ಆಫ್ಘನ್ನರಿಗೆ ತುಂಬಾ ಹೆಮ್ಮೆ. ಇದರ ಕುರುಹಾಗಿ ಕಟ್ಟಕಡೆಯ ಆಫ್ಘನ್ ದೊರೆ ಕಾಬೂಲಿನ ಮಧ್ಯಭಾಗದಲ್ಲಿ 'ಮೇವಾಂಡ ವಿಜಯ ಸ್ಮಾರಕ'ವನ್ನೇ ನಿರ್ಮಿಸಿದ್ದಾನೆ. ಹೈಸ್ಕೂಲಿನಲ್ಲಿದ್ದಾಗ ಶೆರ್ಲಾಕ್ ಹೋಮ್ಸ್‌ನ ಕೆಲವು ಕತೆಗಳನ್ನು ಓದುತ್ತಿದ್ದಾಗ, ಅಲ್ಲಿ ಬರುವ ಡಾ. ವ್ಯಾಟ್ಸನ್ ಪತ್ತೇದಾರಿಯಾಗುವ ಮೊದಲು ಯುದ್ಧದಲ್ಲಿ ಪೆಟ್ಟುತಿಂದಿದ್ದು ಇದೇ ಯುದ್ಧದಲ್ಲಿರಬೇಕು ಎಂದುಕೊಂಡು ನಗುತ್ತಿದ್ದೆ. ಮಲಾಲಾಯಿ ಎಂದರೆ



ಪಶ್ತೂನಿಗಳ ಪಾಲಿಗೆ ನಮ್ಮದೇ ಆದ 'ಜೋನ್ ಆಫ್ ಆರ್ಕ್' ಇದ್ದಂತೆ. ಹೀಗಾಗಿಯೇ ಆಫ್ಘಾನಿಸ್ತಾನದಲ್ಲಿ ಹೆಣ್ಣುಮಕ್ಕಳಿಗೆಂದೇ ಇರುವ ಹಲವು ಶಾಲೆಗಳಿಗೆ ಮಲಾಲಾಯಿಯ ಹೆಸರನ್ನೇ ಇಡಲಾಗಿದೆ. ಆದರೆ ಧಾರ್ಮಿಕ ವಿದ್ವಾಂಸನೂ ತನ್ನ ಹಳ್ಳಿಯಲ್ಲಿ ಧರ್ಮಗುರುವೂ ಆಗಿದ್ದ ನಮ್ಮ ಅಜ್ಜನಿಗೆ ನಮ್ಮ ಅಪ್ಪ ನನಗೆ ಈ ಹೆಸರಿಟ್ಟದ್ದು ಹಿಡಿಸಿರಲಿಲ್ಲ. ಅದೊಂದು ದುಃಖಸೂಚಕ ಹೆಸರು... ಅದೊಂದು ಸೂತಕದ ನೆರಳಿರುವ ಹೆಸರು' ಎನ್ನುವುದು ನನ್ನ ಹೆಸರಿಗೆ ಅಜ್ಜನ ತಕರಾರಾಗಿತ್ತು.

ನಾನು ಮಗುವಾಗಿದ್ದಾಗ ನಮ್ಮ ಅಪ್ಪ ನನಗೊಂದು ಹಾಡು ಹೇಳುತ್ತಿದ್ದರು. ಅದನ್ನು ಬರೆದಿದ್ದು ಪೇಶಾವರದ ಕವಿಯಾದ ರಹಮತ್ ಷಾ ಸಯೇಲ್. ಅದರ ಕೊನೆಯ ಸಾಲುಗಳು ಹೀಗಿವೆ:

ಓ! ಮೇವಾಂಡದ ಮಲಾಲಾಯಿಯೇ

ಪಶ್ತೂನಿಗಳು ಆ ಮರ್ಯಾದೆಯ ಹಾಡನ್ನು ಅರ್ಥಮಾಡಿಕೊಳ್ಳುವಂತೆ ಮಾಡಲು ಮತ್ತೊಮ್ಮೆ ಹುಟ್ಟಿ ಬಾ.

ನಿನ್ನ ಆ ಕಾವ್ಯಾತ್ಮಕ ಶಬ್ದವು ಇಡೀ ಜಗತ್ತನ್ನೇ ಬದಲಿಸುತ್ತದೆ, ನನ್ನದು ನಿನ್ನಲ್ಲಿ ಧೀನ ಪ್ರಾರ್ಥನೆ. ನೀನು ಮತ್ತೊಮ್ಮೆ ಹುಟ್ಟಿ ಬಾ.

ನಮ್ಮ ಮನೆಗೆ ಯಾರೇ ಬರಲಿ, ನಮ್ಮ ಅಪ್ಪ ಅವರಿಗೆಲ್ಲ ಮಲಾಲಾಯಿಯ ಕತೆಯನ್ನು ತಪ್ಪದೇ ಹೇಳುತ್ತಿದ್ದರು. ನಮ್ಮ ತಂದೆ ಹೇಳುತ್ತಿದ್ದ ಕತೆಗಳನ್ನೂ ಹಾಡುತ್ತಿದ್ದ ಹಾಡುಗಳನ್ನೂ ಕೇಳುವುದು ನನಗೆ ತುಂಬಾ ಇಷ್ಟದ ಸಂಗತಿಯಾಗಿತ್ತು. ಹಾಗೆಯೇ ಜನ ನನ್ನ ಹೆಸರು ಹಿಡಿದು ಕೂಗಿದಾಗ ಅದು ಗಾಳಿಯಲ್ಲಿ ತೇಲಿಬರುವ ರೀತಿಯೂ ನನಗೆ ಆಪ್ಯಾಯಮಾನವಾಗಿತ್ತು.

**ಶಾಲೆಯಲ್ಲಿ ಬೆಳೆಯುತ್ತ ಹೋಗಿದ್ದು**

ನಮ್ಮ ತಾಯಿ ಶಾಲೆಯ ಮೆಟ್ಟಿಲು ತುಳಿದಾಗ ಅವರಿಗೆ ಆರು ವರ್ಷ. ಆದರೆ, ಅವರು ಅದೇ ವರ್ಷ ಸ್ಕೂಲಿಗೆ 'ನಮಸ್ಕಾರ' ಹಾಕಿದರು. ಅವರ ಹಳ್ಳಿಯಲ್ಲಿ ಅವರು ನಿಜಕ್ಕೂ ಒಂದು ಅಪವಾದವಾಗಿದ್ದರು. ಏಕೆಂದರೆ, 'ನೀನು ಸ್ಕೂಲಿಗೆ ಹೋಗು' ಅಂತ ಹೇಳುವ ಅಣ್ಣತಮ್ಮಂದಿರು ನಮ್ಮ ತಾಯಿಗಿದ್ದರು. ಅವರ ತರಗತಿಯಲ್ಲಿ ಇದ್ದ ಹೆಣ್ಣುಮಗಳೆಂದರೆ ನಮ್ಮ ತಾಯಿ ಒಬ್ಬರೇ. ತನ್ನ ಸ್ಕೂಲ್ ಬ್ಯಾಗನ್ನು ಬಹಳ ಹೆಮ್ಮೆಯಿಂದ ಬೆನ್ನಮೇಲೆ ಹಾಕಿಕೊಂಡು ಹೋಗುತ್ತಿದ್ದ ಅವರು, ತಾನು ಹುಡುಗರಿಗಿಂತಲೂ ಚೂಟಿ ಎಂದು ಹೇಳಿಕೊಳ್ಳುತ್ತಿದ್ದರು. ಆದರೆ ದಿನವೂ ತನ್ನ ಸೋದರ ಸಂಬಂಧಿಗಳಾದ ಹೆಣ್ಣುಮಕ್ಕಳನ್ನೆಲ್ಲಾ ಮನೆಯಲ್ಲಿ ಬಿಟ್ಟುಹೋಗುತ್ತಿದ್ದ ಅಮ್ಮ, ಅವರಿಗೆಲ್ಲ ಹೊಟ್ಟೆಕಿಚ್ಚು ಬರಲು ಕಾರಣಳಾದಳು. ಇಷ್ಟಾದ ಮೇಲೆ ನಮ್ಮ ಅಮ್ಮನಿಗೆ, 'ಇನ್ನೂ ಸ್ಕೂಲಿನ ಸಹವಾಸ ಸಾಕು' ಎನಿಸಿರಬೇಕು. ಹೀಗಾಗಿ ಸ್ಕೂಲಿಗೆ 'ನಮಸ್ಕಾರ'

ಹೇಳಿ, ಮನೆಯಲ್ಲಿ ಅಡುಗೆ ಮಾಡಿಕೊಂಡು, ಪಾತ್ರೆ ತಿಕ್ಕಿಕೊಂಡು, ಮನೆಯಲ್ಲಿ ಕಸ ಗುಡಿಸಿಕೊಂಡು ಇದ್ದರೆ ಸಾಕೆನಿಸಿತು. ಇಷ್ಟೆನಿಸಿದ್ದೇ ತಡ, ನಮ್ಮ ಅಮ್ಮ ಒಂದು ದಿನ ತನ್ನ ಪುಸ್ತಕವನ್ನೆಲ್ಲ ಒಂಬತ್ತು ಆಣೆಗೆ ಮಾರಿಹಾಕಿ, ಆ ದುಡ್ಡಿನಲ್ಲಿ ಒಂದಿಷ್ಟು ಸಿಹಿತಿಂಡಿ ತಿಂದುಹಾಕಿದಳು. ಅದಾದಮೇಲೆ ನಮ್ಮ ಅಮ್ಮ, ಇನ್ನು ಯಾವತ್ತೂ ಸ್ಕೂಲಿನ ಮುಖ ನೋಡಲಿಲ್ಲ. ಮಗಳು ಹೀಗೆ ಸ್ಕೂಲಿಗೆ ಹೋಗುವುದನ್ನು ಬಿಟ್ಟರೂ ಅವರ ಅಪ್ಪ ಏನೂ ಅನ್ನಲಿಲ್ಲ. ಈ ಬಗ್ಗೆ ಅಮ್ಮ ಮಾತಿಗಿಳಿದರೆ, 'ನಮ್ಮ ಅಪ್ಪ ನಾನು ಸ್ಕೂಲು ಬಿಟ್ಟಿದ್ದನ್ನು ಗಮನಿಸಲೂ ಇಲ್ಲ. ಬೆಳಿಗ್ಗೆ ಬ್ರೆಡ್ಡು-ಕ್ರೀಮು ಅಂತ ಒಂದಿಷ್ಟು ತಿಂಡಿ ತಿಂದು, ಜರ್ಮನ್ ಪಿಸ್ತೂಲನ್ನು ಸಿಕ್ಕಿಸಿಕೊಂಡು ಅವರು ಹೊರಟುಬಿಡುತ್ತಿದ್ದರು. ಇಡೀ ದಿನ ರಾಜಕೀಯ ಮತ್ತು ಯಾವ್ಯಾವುದೋ ಜಗಳಗಳನ್ನೆಲ್ಲ ಪರಿಹರಿಸುವುದರಲ್ಲೇ ಅವರು ಮುಳುಗಿರುತ್ತಿದ್ದರು. ಇಷ್ಟೇ ಅಲ್ಲ, ಅವರು ನನ್ನ ಜೊತೆಗೆ ಇನ್ನೂ ಏಳು ಮಕ್ಕಳನ್ನು ಸಾಕಬೇಕಾಗಿತ್ತು ಎನ್ನುತ್ತಾರೆ.

**ನಮ್ಮ ಹಳ್ಳಿ**

ನಮ್ಮ ಸಂಪ್ರದಾಯದಲ್ಲಿ ಮಗು ಹುಟ್ಟಿದ ಏಳನೇ ದಿವಸ ಕುಟುಂಬಸ್ಥರು, ನೆಂಟರಿಷ್ಟರು ಮತ್ತು ಅಕ್ಕಪಕ್ಕದವರನ್ನು ಕರೆದು 'ವೋಮಾ' ಎನ್ನುವ ಒಂದು ಸಮಾರಂಭ ಮಾಡುತ್ತೇವೆ. ಪಶ್ತೂನಿ ಭಾಷೆಯಲ್ಲಿ 'ವೋಮಾ' ಎಂದರೆ ಏಳನೇ ದಿನ ಎಂದೇ ಅರ್ಥ. ಈ ಸಮಾರಂಭಕ್ಕೆ ಬಂದವರೆಲ್ಲ ಮಗುವನ್ನು ನೋಡಿ ಮೆಚ್ಚಿಕೊಂಡು ಅದಕ್ಕೆ ಒಳ್ಳೆಯದಾಗಲಿ ಎಂದು ಹರಸುತ್ತಾರೆ. ಆದರೆ, ನಾನು ಹುಟ್ಟಿದಾಗ ನಮ್ಮ ಅಪ್ಪ-ಅಮ್ಮ ಈ ಸಮಾರಂಭವನ್ನೇ ಮಾಡಲಿಲ್ಲ. ಏಕೆಂದರೆ, ಈ ಸಮಾರಂಭವನ್ನು ನಡೆಸಿದರೆ ಬಂದವರಿಗೆಲ್ಲ ಆಡಿನ ಮಾಂಸ ಮತ್ತು ಒಳ್ಳೆಯ ರಸಗವಳ ಮಾಡಿ ಹಾಕಬೇಕು. ಆದರೆ, ಇವೆರಡೂ ನಮ್ಮ ಅಪ್ಪ-ಅಮ್ಮನಿಂದ ಸಾಧ್ಯವಿರಲಿಲ್ಲ. ಹೀಗಾಗಿ ಅವರು ಸಮಾರಂಭವನ್ನು ನಡೆಸುವ ಗೋಜಿಗೇ ಹೋಗಲಿಲ್ಲ. ನಮ್ಮ ತಾತ ಮನಸ್ಸು ಮಾಡಿದ್ದರೆ ಈ ಸಮಾರಂಭ ನಡೆಸುವಂತೆ ಸಹಾಯ ಮಾಡಬಹುದಿತ್ತು. ಆದರೆ, ನಾನು ಗಂಡು ಹುಡುಗನಾಗಿಲ್ಲದೆ ಇದ್ದುದರಿಂದ ಅವರೂ ಈ ಬಗ್ಗೆ ಉದಾಸೀನ ಮಾಡಿದರು. ಅದೇ ನನ್ನ ತಮ್ಮಂದಿರು ಹುಟ್ಟಿದಾಗ ತಾತ, ಈ ಸಮಾರಂಭ ನಡೆಸುವಂತೆ ನಮ್ಮ ಅಪ್ಪನಿಗೆ ದುಡ್ಡು ಕೊಡಲು ಬಂದರು. ಆದರೆ, ನಾನು ಹುಟ್ಟಿದಾಗ ಅವರು ಹೀಗೆ ಸಹಾಯ ಮಾಡಲು ಮುಂದೆ ಬರದಿದ್ದುಕ್ಕೆ ಬೇಸರಗೊಂಡಿದ್ದ ನಮ್ಮ ಅಪ್ಪ ಇದನ್ನು ನಿರಾಕರಿಸಿದರು. ನನಗಿದ್ದುದು ಈ ತಾತ ಒಬ್ಬರೇ. ಏಕೆಂದರೆ, ನಾನು ಹುಟ್ಟುವ ಮೊದಲೇ ನಮ್ಮ ತಾಯಿಯ ತಂದೆ ಇಹಲೋಕ ತ್ಯಜಿಸಿದ್ದರು. ಹೀಗಾಗಿ ನಾನೂ ತಾತನೂ ಒಬ್ಬರನ್ನೊಬ್ಬರು ತುಂಬಾ ಹಚ್ಚಿಕೊಂಡಿದ್ದೆವು. ನಮ್ಮ ಅಪ್ಪ-ಅಮ್ಮ ಇಬ್ಬರೂ, 'ನಿನಗೆ ಎರಡೂ ಕಡೆಯ ತಾತಂದಿರ ಗುಣವೂ ರಕ್ತದಲ್ಲೇ ಹರಿದು ಬಂದಿದೆ. ಅಮ್ಮನ ಕಡೆಯ ತಾತನಂತೆ ನಿನಗೆ ಹಾಸ್ಯಪ್ರಜ್ಞೆ ಮತ್ತು ಬುದ್ಧಿವಂತಿಕೆ ಇದೆ; ಹಾಗೆಯೇ ಅಪ್ಪನ ಕಡೆಯ ತಾತನಂತೆ ವಾಚಾಳತ್ವವೂ ಇದೆ. ತಮಗೆ ವಯಸ್ಸಾಗುತ್ತಾ  ಬಂದಂತೆ ಮೃದುವಾದ ನಮ್ಮ ಈ ತಾತ. ಕೊನೆಗಾಲದಲ್ಲಿ ಬಿಳಿ ಗಡ್ಡ ಬಿಟ್ಟಿದ್ದರು. ಒಟ್ಟಿನಲ್ಲಿ ನಮ್ಮ ಹಳ್ಳಿಗೆ ಹೋಗಿ ಈ ತಾತನನ್ನು ನೋಡಬೇಕೆಂಬ ಆಸೆ ನನಗಾಗುತ್ತಿತ್ತು.



ಈ ತಾತನಿಗೆ ನನ್ನ ಹೆಸರಿನಲ್ಲೇ ದುಃಖದ ಛಾಯೆ ಇದೆ ಎನ್ನುವ ಭಾವನೆ ಬದಲಾಗಿತ್ತು. ಹೀಗಾಗಿ, ಅವರು ನನ್ನನ್ನು ನೋಡಿದಾಗಲೆಲ್ಲ 'ಮಲಾಲಾ ಮೇವಾಂಡ್ ವಾಲಾ ದಾ ಪಾ ತೂಲ್ ಜೆಹಾನ್ ಕೆ ದಾ ಕುಶಾಲಾ ದಾ' ಎಂದು ಹಾಡುತ್ತಿದ್ದರು. ಹೀಗೆಂದರೆ, 'ಮೇವಾಂಡದ ಮಲಾಲಾ ಇದಾಳಲ್ಲ, ಅವಳೇ ಈ ಜಗತ್ತಿನಲ್ಲಿ ತುಂಬಾ ಖುಷಿಯಿಂದಿರುವವಳು' ಎಂದರ್ಥ. ಏನೇ ಆಗಲಿ, ನನ್ನ ಹೆಸರು ಸಂತೋಷವನ್ನು ಸೂಚಿಸಬೇಕು ಎನ್ನುವ ಅವರ ಹಂಬಲವೇ ಇದಕ್ಕೆ ಕಾರಣ.

**ಓಲೆ ಹಾಕಿಕೊಳ್ಳದ ಹುಡುಗಿ**

ನನಗೆ ಏಳು ವರ್ಷ ತುಂಬುವ ಹೊತ್ತಿಗಾಗಲೇ ನಾನು ತರಗತಿಯಲ್ಲಿ ಮೊದಲಿಗಳಾಗಿ ನಿಲ್ಲುತ್ತಿದ್ದೆ. ಓದಲು, ಬರೆಯಲು ಸ್ವಲ್ಪ ಕಷ್ಟಪಡುತ್ತಿದ್ದ ಮಕ್ಕಳಿಗೆಲ್ಲ ನಾನು ತರಗತಿಯಲ್ಲಿ ಸಹಾಯ ಮಾಡುತ್ತಿದ್ದೆ. ನನ್ನ ಸಹಪಾಠಿಗಳಂತೂ 'ಮಲಾಲಾ ನಿಜಕ್ಕೂ ತುಂಬಾ ಜಾಣ ಹುಡುಗಿ' ಎನ್ನುತ್ತಿದ್ದರು. ಇದರ ಜೊತೆಗೆ ನಾನು ಬ್ಯಾಡ್ಮಿಂಟನ್, ನಾಟಕ, ಕ್ರಿಕೆಟ್, ಚಿತ್ರರಚನೆಗಳಲ್ಲೆಲ್ಲಾ ಭಾಗವಹಿಸುತ್ತಿದ್ದೆ. ಅಷ್ಟೇನೂ ಚೆನ್ನಾಗಿ ಹಾಡಲು ಬರದಿದ್ದರೂ ಗಾಯನ ಸ್ಪರ್ಧೆಗೂ ಹೋಗುತ್ತಿದ್ದೆ. ಹೀಗಿದ್ದಾಗ ನಮ್ಮ ತರಗತಿಗೆ ಹೊಸ ಹುಡುಗಿಯೊಬ್ಬಳು ಸೇರಿಕೊಂಡಳು. ಅವಳ ಹೆಸರು ಮಲ್ಕಾ-ಇ-ನೂರ್ ಅಂತ. ಅವಳು ನಮ್ಮ ಶಾಲೆಗೆ ಸೇರಿದಾಗ ನನಗೆ ಅವಳ ಬಗ್ಗೆ ಏನೂ ಅನ್ನಿಸಲಿಲ್ಲ. ಅಂದಹಾಗೆ 'ಮಲ್ಕಾ-ಇ-ನೂರ್' ಎಂದರೆ 'ಬೆಳಕಿನ ರಾಣಿ' ಎಂದರ್ಥ. ಅವಳು ಒಂದು ದಿನ,'ಪಾಕಿಸ್ತಾನದ ಸೇನೆಗೆ ಪ್ರಪ್ರಥಮ ದಂಡನಾಯಕಿ ಆಗಬೇಕೆನ್ನುವ ಆಸೆ ನನಗಿದೆ' ಎಂದಳು. ಅವರ ಅಮ್ಮ ಇನ್ನೊಂದು ಶಾಲೆಯಲ್ಲಿ ಶಿಕ್ಷಕಿಯಾಗಿದ್ದರು. ಇದು ತುಂಬಾ ಅಪರೂಪದ ಘಟನೆಯಾಗಿತ್ತು. ಏಕೆಂದರೆ ನಮ್ಮ ಯಾರ ತಾಯಂದಿರೂ ಹೀಗೆ ಶಿಕ್ಷಕಿಯರಾಗಿ ಕೆಲಸ ಮಾಡುತ್ತಿರಲಿಲ್ಲ. ಶುರುವಿನಲ್ಲಿ ಮಲ್ಕಾ ಹೆಚ್ಚೇನೂ ಮಾತನಾಡುತ್ತಿರಲಿಲ್ಲ. ಮಿಕ್ಕಂತೆ, ತರಗತಿಯಲ್ಲಿ ಯಾವಾಗಲೂ ನನಗೂ ಮತ್ತು ನನ್ನ ಒಳ್ಳೆಯ ಗೆಳತಿ ಮೋನಿಬಾಗೂ ಸ್ಪರ್ಧೆ ಇರುತ್ತಿತ್ತು. ಮೋನಿಬಾ ತುಂಬಾ ಮುದ್ದಾಗಿಯೂ ಅಚ್ಚುಕಟ್ಟಾಗಿಯೂ ಬರೆಯುತ್ತಿದ್ದಳು. ಇದನ್ನು ಪರೀಕ್ಷಾಧಿಕಾರಿಗಳು ಇಷ್ಟಪಡುತ್ತಿದ್ದರು. ಆದರೆ, ವಸ್ತು-ವಿಷಯ ಜ್ಞಾನದ ಬಲದ ಮೇಲೆ ಅವಳನ್ನು ಹಿಂದಿಕ್ಕಬಹುದು ಎನ್ನುವುದು ನನ್ನ ಭಾವನೆಯಾಗಿತ್ತು. ವರ್ಷದ ಕೊನೆಗೆ ನಡೆದ ಪರೀಕ್ಷೆಯಲ್ಲೂ ನಾವು ಹೀಗೆಯೇ ಮಾಡಿದೆವು. ಆದರೆ, ಕೊನೆಗೆ ಫಲಿತಾಂಶ ಹೊರಬಿದ್ದಾಗ ಹೊಸ ಹುಡುಗಿ ಮಲ್ಕಾ ಮೊದಲಿಗಳಾಗಿದ್ದಳು. ಇದರಿಂದ ನನಗಂತೂ ಆಘಾತವಾಯಿತು. ಮನೆಗೆ ಬಂದು ಗೊಳೋ ಎಂದು ಅಳುತ್ತಿದ್ದೆ. ನನ್ನನ್ನು ಕೊನೆಗೆ

ಅಮ್ಮ ತುಂಬಾ ಸಮಾಧಾನಪಡಿಸಿದರು.

ನನ್ನ ಪಾಲಿನ ಜಗತ್ತು ತುಂಬಾ ಬದಲಾಗಿದೆ. ನಮ್ಮ ಈ ಬಾಡಿಗೆ ಮನೆಯ ಕಪಾಟುಗಳ ಮೇಲೆ ಅಮೆರಿಕ, ಭಾರತ, ಫ್ರಾನ್ಸ್, ಸ್ಪೇನ್, ಇಟಲಿ, ಆಸ್ಟ್ರಿಯಾ ಮತ್ತು ಇನ್ನೂ ಇತರ ದೇಶಗಳು ನನಗೆ ನೀಡಿದ ಪ್ರಶಸ್ತಿ ಫಲಕಗಳಿವೆ. ನೊಬೆಲ್ ಶಾಂತಿ ಪುರಸ್ಕಾರಕ್ಕೂ ನನ್ನ ಹೆಸರು ಸೂಚಿತವಾಗಿತ್ತು. ಈ ಪ್ರಶಸ್ತಿಗೆ ಇದುವರೆಗೂ ನನ್ನಷ್ಟು ಕಿರಿಯ ವಯಸ್ಸಿನವರು ಯಾರೂ ಪರಿಗಣನೆಗೆ ಬಂದಿಲ್ಲ. ನಾನೂ ಸ್ಕೂಲಿನಲ್ಲಿದ್ದಾಗ ನನಗೆ ಬಹುಮಾನಗಳು ಬರುತ್ತಿದ್ದವು. ಆಗೆಲ್ಲಾ ನನ್ನ ಶ್ರಮಕ್ಕೆ ಸಿಕ್ಕ ಫಲವಿದು ಎಂದು ನನಗೆ ಸಂತೋಷವಾಗುತ್ತಿತ್ತು. ಆದರೆ, ಈ ಬಹುಮಾನಗಳು ತುಂಬಾ ವಿಭಿನ್ನವಾದವು. ನನಗೆ ಈ ಪ್ರಶಸ್ತಿಗಳನ್ನು ಕೊಟ್ಟವರಿಗೆಲ್ಲ ನಾನು ಋಣಿ. ಆದರೆ, ಈ ಪ್ರಶಸ್ತಿಗಳು ಪ್ರತಿಯೊಬ್ಬ ಗಂಡುಮಗುವಿಗೆ ಶಿಕ್ಷಣ ಸಿಗುವಂತಾಗಬೇಕೆಂಬ ಗುರಿಯನ್ನು ಮುಟ್ಟಲು ಇನ್ನೂ ಮಾಡಬೇಕಾಗಿರುವ ಕೆಲಸ ಎಷ್ಟೊಂದಿದೆ ಎನ್ನುವುದನ್ನು ನನಗೆ ನೆನಪಿಸುತ್ತವೆ. ನನ್ನ ಬಗ್ಗೆ ಯಾರೇ ಆದರೂ 'ತಾಲಿಬಾನ್‌ನಿಂದ ಗುಂಡೇಟು ತಿಂದ ಹುಡುಗಿ' ಎಂದು ಯೋಚಿಸಬಾರದು. ಇದರ ಬದಲಿಗೆ 'ಮಲಾಲಾ ಅಂದರೆ, ಶಿಕ್ಷಣದ ಹಕ್ಕಿಗಾಗಿ ಹೋರಾಡಿದ ಹುಡುಗಿ' ಎಂದು ಯೋಚಿಸುವಂತಾಗಬೇಕು. ನಾನು ನನ್ನ ಇಡೀ ಜೀವನವನ್ನೇ ಈ ಗುರಿಯ ಈಡೇರಿಕೆಗಾಗಿ ಸಮರ್ಪಿಸಬೇಕು ಎಂದುಕೊಂಡಿದ್ದೇನೆ.

ನನ್ನ ಹದಿನಾರನೇ ಹುಟ್ಟುಹಬ್ಬದ ದಿನ ನ್ಯೂಯಾರ್ಕ್‌ನಲ್ಲಿರುವ ವಿಶ್ವಸಂಸ್ಥೆಗೆ ನನ್ನನ್ನು ಭಾಷಣ ಮಾಡಲೆಂದು ಆಹ್ವಾನಿಸಿದ್ದರು. ಆ ವಿಶಾಲವಾದ ಸಭಾಂಗಣದಲ್ಲಿ ನೆರೆದಿದ್ದ ಜಗತ್ತಿನ ನಾನಾ ನಾಯಕರ ಮುಂದೆ ನಿಂತುಕೊಂಡು ಮಾತನಾಡುವುದು ನಿಜಕ್ಕೂ ಸವಾಲಿನ ಕೆಲಸ. ಆದರೂ ಅವತ್ತು ನಾನೇನೂ ಮಾತನಾಡಬೇಕೆಂಬುದು ನನಗೆ ಗೊತ್ತಿತ್ತು. ಆಗ ನನಗೆ ನಾನೇ, 'ಮಲಾಲಾ ಇದು ನಿನಗೆ ಸಿಕ್ಕಿರುವ ಅವಕಾಶ' ಎಂದು ಹೇಳಿಕೊಂಡೆ. ಅವತ್ತು ನನ್ನ ಎದುರು ಕೇವಲ ನಾನೂರು ಮಂದಿ ಮಾತ್ರ ಕೂತಿದ್ದರು ಎನ್ನುವುದೇನೋ ನಿಜ. ಆದರೆ, ಅವರತ್ತ ನೋಡಿದ ನಾನು ಅಲ್ಲಿ ಇನ್ನೂ ಹತ್ತು ಲಕ್ಷ ಜನರನ್ನು ಕಲ್ಪಿಸಿಕೊಂಡೆ. ಅವತ್ತಿನ ಭಾಷಣವನ್ನು ನಾನೇನೂ ಅಲ್ಲಿ ನೆರೆದಿದ್ದ ನಾಯಕರನ್ನು ಮಾತ್ರ ಗಮನದಲ್ಲಿಟ್ಟುಕೊಂಡು ಸಿದ್ಧಪಡಿಸಿರಲಿಲ್ಲ. ಬದಲಿಗೆ, ಬದಲಾವಣೆಯನ್ನು ತರಬಲ್ಲಂತಹ ಇಡೀ ಜಗತ್ತಿನ ಜನರನ್ನು ಮನಸ್ಸಿನಲ್ಲಿಟ್ಟುಕೊಂಡು ಅದನ್ನು ಬರೆದುಕೊಂಡಿದ್ದೆ. ಬಡವರು. ಆ ಬಡತನದಿಂದಾಗಿ ದುಡಿಮೆಗೆ ಇಳಿದಿರುವ ಅವರೆಲ್ಲರ ಮಕ್ಕಳು, ಭಯೋತ್ಪಾದನೆಗೆ ಸಿಲುಕಿ ನರಳುತ್ತಿರುವವರು ಅಥವಾ ವಿದ್ಯಾಭ್ಯಾಸವಿಲ್ಲದೆ ಒದ್ದಾಡುತ್ತಿರುವ ಜನರಿಗೆಲ್ಲ ನನ್ನ ಮಾತುಗಳು ತಲುಪಬೇಕೆನ್ನುವ ಆಸೆ ನನ್ನದಾಗಿತ್ತು. ಎದೆಯ ಆಳದಲ್ಲಿ ನನ್ನ ಮಾತುಗಳಿಂದ ಧೈರ್ಯ ಪಡೆದುಕೊಂಡು ತನ್ನ ಹಕ್ಕುಗಳಿಗಾಗಿ ಹೋರಾಡುವಂಥ ಪ್ರತಿಯೊಂದು ಮಗುವಿಗೂ ನಾನು ತಲುಪಬೇಕು ಎನ್ನುವ ಬಯಕೆ ಇತ್ತು.



ಅವತ್ತು ನಾನು ಹಾಕಿಕೊಂಡಿದ್ದ ನನ್ನ ಅಚ್ಚುಮೆಚ್ಚಿನ ಪಿಂಕ್ ಬಣ್ಣದ ಸಲ್ವಾರ್ ಕಮೀಜ್ ಮೇಲೆ ನನಗೆ ಉಡುಗೊರೆಯಾಗಿ ಬಂದಿದ್ದ ಬೆನರ್ಝೀರ್ ಬುಟ್ಟೋ ಅವರ ಒಂದು ಬಿಳಿಯ ಶಾಲನ್ನು ಹೊದ್ದುಕೊಂಡಿದ್ದೆ. ಅವತ್ತು ನಾನು, ಜಗತ್ತಿನ ಪ್ರತಿಯೊಂದು ಮಗುವಿಗೂ ಉಚಿತವಾಗಿ ಶಿಕ್ಷಣ ಒದಗಿಸಬೇಕು ಎಂದು ಅಲ್ಲಿ ನೆರೆದಿದ್ದ ವಿಶ್ವದ ನಾಯಕರಿಗೆ ಕರೆಕೊಟ್ಟೆ. ಅಷ್ಟೇ ಅಲ್ಲ, 'ನಾವೆಲ್ಲರೂ ನಮ್ಮ ನಮ್ಮ ಪುಸ್ತಕಗಳನ್ನು ಲೇಖನಿಗಳನ್ನು ಎತ್ತಿಕೊಳ್ಳೋಣ. ಇವೆರಡೂ ತುಂಬಾ ಶಕ್ತಿಶಾಲಿಯಾದ ಅಸ್ತ್ರಗಳು. ಒಂದು ಮಗು, ಒಬ್ಬರು ಶಿಕ್ಷಕರು ಒಂದು ಪುಸ್ತಕ ಮತ್ತು ಒಂದು ಲೇಖನಿಯಿಂದ ಜಗತ್ತನ್ನೇ ಬದಲಿಸಬಹುದು' ಎಂದು ಹೇಳಿದೆ. ಶ್ರೋತೃಗಳೆಲ್ಲ ಎದ್ದು ನಿಂತು ಕರತಾಡನ ಮಾಡುವವರೆಗೂ ನನ್ನ ಈ ಭಾಷಣವನ್ನು ಇವರೆಲ್ಲ ಹೇಗೆ ಸ್ವೀಕರಿಸುತ್ತಾರೆಂದು ನನಗೆ ಗೊತ್ತಿರಲಿಲ್ಲ. ಆ ಕ್ಷಣಗಳಲ್ಲಿ ಅಮ್ಮನ ಕಣ್ಣುಗಳಲ್ಲಿ ನೀರಾಡುತ್ತಿದ್ದರೆ, ಅಪ್ಪ 'ನೀನೀಗ ಪ್ರತಿಯೊಬ್ಬರ ಪಾಲಿಗೂ ಮಗಳಾಗಿಬಿಟ್ಟೆ' ಎಂದರು.

ಇವತ್ತು ನಾನು ಕನ್ನಡಿಯಲ್ಲಿ ಮುಖ ನೋಡಿಕೊಂಡು, ಒಂದು ಕ್ಷಣ ಹಾಗೆಯೇ ಯೋಚಿಸಿದೆ. ಒಂದು ಕಾಲದಲ್ಲಿ ನಾನು 'ಓ ದೇವರೇ, ನನ್ನನ್ನು ಇನ್ನೊಂದೆರಡು ಇಂಚು ದೊಡ್ಡವಳನ್ನಾಗಿ ಮಾಡು' ಎಂದು ಕೇಳಿಕೊಳ್ಳುತ್ತಿದ್ದೆ. ಅದರ ಬದಲಿಗೆ ದೇವರು ನನ್ನನ್ನು ಆಕಾಶದಷ್ಟು ಎತ್ತರದವಳನ್ನಾಗಿ ಮಾಡಿದ. ಈ ಎತ್ತರವನ್ನು ಅಳೆಯುವುದೇ ನನಗೆ ಸಾಧ್ಯವಿಲ್ಲ. ಹೀಗಾಗಿ, ನನ್ನನ್ನು ದೊಡ್ಡವಳನ್ನಾಗಿ ಮಾಡಿದರೆ ನೂರು ವಿಶೇಷ ಪ್ರಾರ್ಥನೆ ಮಾಡುವುದಾಗಿ ಹೊತ್ತಿದ್ದ ಹರಕೆಯನ್ನು ನಾನು ತೀರಿಸಿದ್ದೇನೆ.

ನಾನು ನನ್ನ ದೇವರನ್ನು ಪ್ರೀತಿಸುತ್ತೇನೆ. ನಾನು ನನ್ನ ಅಲ್ಲಾಹುವಿಗೆ ಧನ್ಯವಾದ ಸಮರ್ಪಿಸುತ್ತೇನೆ. ದೇವರು ಎಲ್ಲರಿಗಿಂತಲು ದೊಡ್ಡವನು. ಅವನು ಜನಸೇವೆ ಮಾಡಲೆಂದು ನನ್ನನ್ನು ಇಷ್ಟು ದೊಡ್ಡವಳನ್ನಾಗಿ ಮಾಡುವ ಮೂಲಕ ನನಗೆ ದೊಡ್ಡ ಜವಾಬ್ದಾರಿಗಳನ್ನು ಕೊಟ್ಟಿದ್ದಾನೆ. ಪ್ರತಿ ಮನೆಯಲ್ಲೂ ಪ್ರತಿ ಬೀದಿಯಲ್ಲೂ ಪ್ರತಿ ಹಳ್ಳಿಯಲ್ಲೂ, ಪ್ರತಿ ದೇಶದಲ್ಲೂ ಶಾಂತಿ ನೆಲೆಸಿರಲಿ. ಇದೇ ನನ್ನ ಕನಸು. ಪ್ರಪಂಚದ ಪ್ರತಿಯೊಬ್ಬ ಹುಡುಗ-ಹುಡುಗಿಗೂ ಶಿಕ್ಷಣ ಸಿಗಲಿ. ಶಾಲೆಯಲ್ಲಿ ಕುರ್ಚಿಯ ಮೇಲೆ ಕೂತುಕೊಂಡು, ನನ್ನೆಲ್ಲ ಗೆಳೆಯರೊಂದಿಗೆ ನನ್ನ ಪುಸ್ತಕಗಳನ್ನು ಓದುವುದು ನನ್ನ ಹಕ್ಕು. ಪ್ರತಿಯೊಬ್ಬ ಮನುಷ್ಯನ ಮುಖದ ಮೇಲೂ ನೆಮ್ಮದಿ ಸಂತೋಷಗಳ ನಗುವನ್ನು ಕಾಣಬೇಕೆನ್ನುವುದು ನನ್ನ ಆಸೆ.

# ಫ್ರಿಜೋಕಾಪ್ರರ ಭೌತವಿಜ್ಞಾನದ ಮಾರ್ಗ ಆಧುನಿಕ ಭೌತವಿಜ್ಞಾನ ಪೌರ್ವಾತ್ಯ ದಾರ್ಶನಿಕತೆಗಳ ಸೂತ್ರ

**ಡಾ. ಕೆ.ಎಸ್. ಮಲ್ಲೇಶ್**

**1. ಕಾಪ್ರರ ಬದುಕು ಬರಹ:** 'ದಿ ತಾವೋ ಆಫ್ ಫಿಸಿಕ್ಸ್'ನ ಕರ್ತೃ ಫ್ರಿಜೋ ಕಾಪ್ರ ಜನಿಸಿದ್ದು 1939 ರ ಫೆಬ್ರವರಿ 1 ರಂದು ಆಸ್ಟ್ರಿಯಾ ದೇಶದ ವಿಯೆನ್ನಾದಲ್ಲಿ. ಮುಂದೆ ವಿಯೆನ್ನಾ ವಿಶ್ವವಿದ್ಯಾನಿಲಯದಲ್ಲಿ ಉನ್ನತ ಶಿಕ್ಷಣ ಪಡೆದು ಸೈದ್ಧಾಂತಿಕ ಭೌತವಿಜ್ಞಾನದಲ್ಲಿ ಸಂಶೋಧನೆ ನಡೆಸಿ 1966 ರಲ್ಲಿ ಡಾಕ್ಟರೇಟ್ ಪದವಿ ಪಡೆದರು. ಕಣ ಭೌತವಿಜ್ಞಾನದಲ್ಲಿ ತಮ್ಮ ಸಂಶೋಧನೆಯನ್ನು 1966 ರಿಂದ 1970ರ ವರೆಗೆ ಪ್ಯಾರಿಸ್, ಕ್ಯಾಲಿಫೋರ್ನಿಯಾ ಮತ್ತು ಬರ್ಕ್‌ಲೀ ವಿಶ್ವವಿದ್ಯಾನಿಲಯಗಳಲ್ಲಿ ಮುಂದುವರೆಸಿದ ಕಾಪ್ರ ಜೊತೆಗೇ 'ವ್ಯವಸ್ಥೆಗಳ ಸಿದ್ಧಾಂತ'ದಲ್ಲೂ ಕೂಡ ಅಧ್ಯಯನ ನಡೆಸಿದ್ದಾರೆ. ಪ್ರಸ್ತುತ ಲಂಡನ್‌ನ ಶೂಮಾಕರ್ ಕಾಲೇಜಿನಲ್ಲಿ ಅಧ್ಯಾಪಕ ಬಳಗದಲ್ಲಿರುವ ಕಾಪ್ರ ಕ್ಯಾಲಿಫೋರ್ನಿಯಾದ ಬರ್ಕ್‌ಲೀಯಲ್ಲಿ **ಪರಿಸರ ಸಾಕ್ಷರತಾ ಕೇಂದ್ರದ** ಸಂಸ್ಥಾಪಕ ನಿರ್ದೇಶಕರಾಗಿದ್ದಾರೆ. ಇವರ ಕೃತಿಗಳು ದಿ ತಾವೋ ಆಫ್ ಫಿಸಿಕ್ಸ್ (1975), ದಿ ಟರ್ನಿಂಗ್ ಪಾಯಿಂಟ್ (1982), ಅನ್‌ಕಾಮನ್ ವಿಸ್‌ಡಂ (1988), ದಿ ವೆಬ್ ಆಫ್ ಲೈಫ್ (1996), ದಿ ಹಿಡನ್ ಕನೆಕ್ಷನ್ಸ್ (2002). ಇವುಗಳಲ್ಲಿ ದಿ ತಾವೋ ಆಫ್ ಫಿಸಿಕ್ಸ್ 43 ಬಾರಿ ಪುನರ್‌ಪ್ರಕಟಣೆಗೊಂಡಿರುವುದಲ್ಲದೆ 23 ಭಾಷೆಗಳಿಗೆ ಅನುವಾದಗೊಂಡು ಜನಪ್ರಿಯ ಕೃತಿಯೆನಿಸಿದೆ.

**2. ಕೃತಿಯ ಮೂಲ ವಿಷಯ:** ಕೃತಿಯ ಶೀರ್ಷಿಕೆ **'ತಾವೋ ಆಫ್ ಫಿಸಿಕ್ಸ್'** ಅನ್ನು ಸರಳ ಅರ್ಥದಲ್ಲಿ ಭೌತವಿಜ್ಞಾನದ ಮಾರ್ಗ ಎಂದು ಅನುವಾದಿಸಬಹುದು. ಈ ಕೃತಿಯಲ್ಲಿ ಕಾಪ್ರ ಆಧುನಿಕ ಭೌತವಿಜ್ಞಾನ ಮತ್ತು ಪೌರ್ವಾತ್ಯ ದಾರ್ಶನಿಕತೆಗಳ ನಡುವಿನ ಸಾಮ್ಯಗಳ ಪರಿಶೋಧನೆಯನ್ನು ದಾಖಲಿಸಿದ್ದಾರೆ. ಇಲ್ಲಿ ಆಧುನಿಕ ಭೌತವಿಜ್ಞಾನ ಎಂದರೆ ಪ್ರಮುಖವಾಗಿ 20ನೆಯ ಶತಮಾನದಲ್ಲಿ ಪ್ರಕಟಗೊಂಡ ಆಲ್ಬರ್ಟ್ ಐನ್‌ಸ್ಟೈನರ ಸಾಪೇಕ್ಷತಾ ಸಿದ್ಧಾಂತ ಮತ್ತು ಪ್ಲಾಂಕ್, ನೀಲ್ಸ್ ಬೋರ್ ಹೈಸನ್ಬರ್ಗ್, ಸ್ಕ್ರಡಿಂಜರ್, ಪೌಲಿ, ಡಿರಾಕ್ ಮುಂತಾದವರು ಪ್ರತಿಪಾದಿಸಿದ ಕ್ವಾಂಟಂ ಸಿದ್ಧಾಂತಗಳಿಂದ ರೂಪಿತವಾದದ್ದು. ಪೌರ್ವಾತ್ಯ ದರ್ಶನಗಳೆಂದರೆ ಹಿಂದೂ, ಬೌದ್ಧ,



ಝೆನ್ ಮತ್ತು ತಾವೋ ದರ್ಶನಗಳು. ಬೆನ್ನುಡಿಯ ಪ್ರಕಾರ ಕಾಪ್ರ ತಮ್ಮ ಪರಿಶೋಧನೆಯ ಮೂಲಕ ಭೌತವಿಜ್ಞಾನದ ಲೌಕಿಕ ದೃಷ್ಟಿಕೋನ ಮತ್ತು ಆಧ್ಯಾತ್ಮಿಕ ಸಂಪ್ರದಾಯಗಳ ನಡುವೆ ಇರುವ ಆಳವಾದ ಸಾಮರಸ್ಯದ ಬಗೆಗೆ ಹೊಸ ಅರಿವು ಮೂಡಿಸಿದ್ದಾರೆ.

**3. ಕೃತಿಗೆ ಪ್ರೇರಣೆ:** **ಬೇಸಿಗೆಯ ಮಧ್ಯಾಹ್ನದಲ್ಲೊಮ್ಮೆ ಸಮುದ್ರ ತೀರದಲ್ಲಿ ಸುರುಸುರುಳಿಯಾಗಿ ಅಬ್ಬರಿಸಿ ಬರುತ್ತಿದ್ದ ಅಲೆಗಳನ್ನು ನೋಡುತ್ತ ಜೊತೆಗೆ ಲಯಬದ್ಧವಾಗಿ ಸಾಗಿದ್ದ ಎದೆಬಡಿತವನ್ನು ಅನುಭವಿಸುತ್ತ ಕುಳಿತಿದ್ದ ನನಗೆ ಇದ್ದಕ್ಕಿದ್ದಂತೆ ಇಡೀ ಸೃಷ್ಟಿಯೇ ಒಂದು ಅದ್ಭುತ ಬ್ರಹ್ಮಾಂಡ ನರ್ತನಗೈಯುತ್ತಿದ್ದಂತೆ ಭಾಸವಾಯಿತು. ಸುತ್ತಲಿನ ಜಡ ಚೇತನಗಳಲ್ಲಿ ಕಂಪಿಸುತ್ತಿರುವ ಅಣು ಪರಮಾಣುಗಳು ಸಂಲಗ್ನಗೊಂಡು ಸೃಷ್ಟಿ ಲಯ ಕಾರ್ಯಗಳಲ್ಲಿ ತೊಡಗಿರುವ, ವಿಶ್ವದ ಕಿರಣಗಳು ವಾಯುಮಂಡಲದಲ್ಲಿ ಸಂಘಟ್ಟಿಸಿ ನವನವೀನ ಕಣಸೃಷ್ಟಿಯೊಡನೆ ಅವಿಚ್ಛಿನ್ನವಾಗಿ ಭೂಮಿಯನ್ನು ಅಪ್ಪಳಿಸುವ ಕ್ರಿಯೆಗಳೆಲ್ಲವೂ ಭೌತವಿಜ್ಞಾನಿಯಾದ ನನಗೆ ಅಂಕಿ ಅಂಶ ನಕ್ಷೆ ಚಿತ್ತಾರಗಳ ಮೂಲಕ ಈ ಮೊದಲೇ ಪರಿಚಯವಾಗಿತ್ತಾದರೂ ಸಮುದ್ರತೀರದಲ್ಲಿ ಕುಳಿತಿದ್ದ ಆ ಕ್ಷಣದಲ್ಲಿ ಮಾತ್ರ ಬಾಹ್ಯಾಕಾಶದಿಂದ ಪ್ರವಾಹೋಪಾದಿಯಲ್ಲಿ ಹರಿದು ಬರುತ್ತಿದ್ದ ಚೈತನ್ಯ ವಸ್ತು ಸೃಷ್ಟಿ ಲಯ ಕ್ರಿಯೆಯನ್ನು ಲಯಬದ್ಧವಾಗಿ ನಡೆಸುತ್ತ ನನ್ನೊಳಗಿನ ಕಣಗಳನ್ನೂ ಸೇರಿಸಿಕೊಂಡು ಒಂದು ಮಹಾನರ್ತನದಲ್ಲಿ ತೊಡಗಿದ್ದಂತೆ ಭಾಸವಾಯಿತು. ಇದೇ ಆ ಶಿವತಾಂಡವ ನೃತ್ಯವೆಂದು ನನಗೆ ಅರಿವಾದುದಕ್ಕೆ ಆ ಕ್ಷಣ ಸಾಕ್ಷಿಯಾಯಿತು.** ಕೃತಿ ಬರೆಯಲು ಈ ಸುಂದರ ಅನುಭವವೇ ಪ್ರೇರಣೆಯಾಯಿತು ಎಂದು ಕಾಪ್ರ ಮುನ್ನುಡಿಯುತ್ತಾರೆ.

ಕ್ವಾಂಟಂ ಭೌತವಿಜ್ಞಾನದ ಪ್ರವರ್ತಕರಲ್ಲಿ ಒಬ್ಬರಾದ ವರ್ನರ್ ಹೈಸನ್‌ಬರ್ಗ್‌ರ **ನಮ್ಮ ಚಿಂತನೆಯ ಇತಿಹಾಸವನ್ನು ಗಮನಿಸಿದರೆ ವಿಭಿನ್ನ ನೆಲೆಗಳ ಚಿಂತನಾಕ್ರಮಗಳು ಸಂಧಿಸಿದಾಗ ಫಲಪ್ರದ ಬೆಳವಣಿಗೆಗಳಾಗಿವೆ. ಈ ನೆಲೆಗಳು ಬೇರೆ ಬೇರೆ ಕಾಲಘಟ್ಟಗಳಲ್ಲಿ ಸಂಸ್ಕೃತಿ ಅಥವಾ ಆಧ್ಯಾತ್ಮ ಪರಂಪರೆಗಳಾಗಿರಬಹುದು** ಎನ್ನುವ ಹೇಳಿಕೆಯನ್ನು ಕಾಪ್ರ ತಮ್ಮ ವಿಚಾರಸರಣಿಯನ್ನು ಮಂಡಿಸಲು ಆಧಾರವಾಗಿಟ್ಟುಕೊಂಡು ಮುನ್ನಡೆಯುತ್ತಾರೆ. ಆಧುನಿಕ ಭೌತವಿಜ್ಞಾನ ಆವಿಷ್ಕಾರಗಳ ಮೂಲಕ ನಮ್ಮ ಬದುಕಿಗೆ ಪೂರಕವಾಗಿಯೂ ಮಾರಕವಾಗಿಯೂ ಬದಲಾವಣೆಗಳನ್ನು ತಂದಿದೆ. ತಂತ್ರಜ್ಞಾನದ ಅಳವಡಿಕೆಯಿಂದಾಚೆಗೂ ದಾಟಿ ನಮ್ಮ ಸಾಂಸ್ಕೃತಿಕ, ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ಹೀಗೆ ಎಲ್ಲ ಕ್ಷೇತ್ರಗಳನ್ನೂ ಆವರಿಸಿ ಪ್ರಭಾವ ಬೀರಿದೆ. ನ್ಯೂಟನ್ ಕಾಲಘಟ್ಟದಿಂದ 20ನೆಯ ಶತಮಾನದವರೆಗೂ ವಿಶ್ವದ ಬಗೆಗಿನ ಹಾಗೂ ವಿಶ್ವದೊಡನೆ ನಮಗಿದ್ದ ಸಂಬಂಧದ ಬಗೆಗಿನ ಮೂಲ ತತ್ವಗಳನ್ನೂ ವಿಚಾರಗಳನ್ನೂ ನವ್ಯಾತಿನವ್ಯ

ಅರ್ಥಕೊಡುವ ಮೂಲಕ ಆಮೂಲಾಗ್ರವಾಗಿ ಬದಲಾಯಿಸಿದೆ.

ಹೊಸ ಅರ್ಥಗಳನ್ನು ಕೊಟ್ಟಂತಹ ಸ್ವರೂಪವುಳ್ಳ ಆಧುನಿಕ ಭೌತವಿಜ್ಞಾನವನ್ನು ಅತ್ಯಂತ ಸೂಕ್ಷ್ಮವಾಗಿ ಗಮನಿಸಿದರೆ ಪೌರ್ವಾತ್ಯ ದರ್ಶನಗಳು ವಿಶ್ವದ ಬಗ್ಗೆ ತಾಳಿರುವ ನಿಲುವುಗಳನ್ನೇ ಹೋಲುವಷ್ಟು ಸಮೀಪಕ್ಕೆ ಭೌತವಿಜ್ಞಾನ ಕರೆದೊಯ್ಯುತ್ತದೆ ಎನ್ನುವುದು ಕಾಪ್ರರ ನಿಲುವು. **ಪರಮಾಣುಗಳ ಬಗೆಗಿನ ಸಂಶೋಧನೆಯಲ್ಲಿ ಕಂಡುಕೊಂಡ ವಿಚಾರಗಳು, ವಿಜ್ಞಾನಕ್ಕೆ ಹೊಸವಿರಬಹುದು. ಆದರೆ ಬೌದ್ಧ ಮತ್ತು ಹಿಂದೂಧರ್ಮಗಳಲ್ಲಿ ಇವು ಬಹಳ ಹಿಂದಿನಿಂದಲೇ ಪ್ರಚಲಿತವಾಗಿವೆ** ಎಂಬ **ಓಪನ್ ಹೈಮರ್**‌ರ ಅಭಿಪ್ರಾಯ ಕಾಪ್ರಾರ ಹೇಳಿಕೆಗೆ ಸಾಕ್ಷಿಯಾಗಿದೆ. ಕೇವಲ ಸಾಮ್ಯತೆಯ ನೆಲೆಯಲ್ಲಿ ನಿಲ್ಲದೆ ಇಂತಹ ದೃಷ್ಟಿಕೋನ ಫಲಪ್ರದವೂ ಆಗುವ ಸಾಧ್ಯತೆಯಿದೆ ಎನ್ನುವುದಕ್ಕೆ ಸಾಕ್ಷಿಯಾಗಿ **1950ರ ನಂತರ ಜಪಾನ್ ಆಧುನಿಕ ಭೌತವಿಜ್ಞಾನದಲ್ಲಿ ಅಸಾಧಾರಣ ಕೊಡುಗೆ ಕೊಟ್ಟಿರುವುದನ್ನು ವರ್ನರ್ ಹೈಸನ್‌ಬರ್ಗ್ ಗುರುತಿಸಿ ಈ ಪ್ರಗತಿಗೆ ಪೌರ್ವಾತ್ಯ ದರ್ಶನಗಳ ವಿಚಾರ ಪರಂಪರೆ ಮತ್ತು ಕ್ವಾಂಟಂ ವಿಜ್ಞಾನದ ತಾತ್ವಿಕ ಅಂಶಗಳ ನಡುವೆ ನಿಶ್ಚಿತ ಸಂಬಂಧವಿರುವುದೇ ಕಾರಣ** ಎಂದಿದ್ದಾರೆ.

**4. ಎರಡು ವಿಭಿನ್ನ ಜ್ಞಾನಗಳು:** ಸಾಮ್ಯಗಳನ್ನು ಗುರುತಿಸುವುದಕ್ಕೆ ಮೊದಲು ನಾವು ಹೋಲಿಕೆ ಮಾಡುತ್ತಿರುವುದಾದರೂ ಏನನ್ನು ಎನ್ನುವುದನ್ನು ಸ್ಪಷ್ಟಪಡಿಸಿಕೊಳ್ಳಬೇಕು. ಇದಕ್ಕೆ ಉತ್ತರ ಇವೆರಡರಲ್ಲಿರುವ ಜ್ಞಾನ. ಎರಡು ತೆರನಾದ ಜ್ಞಾನಗಳನ್ನು ಹೋಲಿಸಬೇಕಾಗಿದೆ ಎನ್ನುತ್ತ ಕಾಪ್ರ, ಒಂದು ಖಚಿತ ವಿಜ್ಞಾನ, ಹೊರಜಗತ್ತಿನಲ್ಲಿನ ಕ್ರಿಯೆಗಳನ್ನು ಪ್ರಮಾಣಿಸಿ ಪಡೆದ ಫಲಿತಾಂಶಗಳನ್ನು ತರ್ಕದ ಆಧುನಿಕ ಗಣಿತದ ಉನ್ನತ ಭಾಷೆಯಲ್ಲಿ ನಿರೂಪಿಸಿ ಪಡೆದದ್ದು. ಇನ್ನೊಂದು ಧ್ಯಾನಾಧಾರಿತ, ಧ್ಯಾನಸ್ಥಿತಿಯಲ್ಲಿ ಹೊರಜಗತ್ತಿನ ಬಗ್ಗೆ ಅಂತರ್ದೃಷ್ಟಿ ಬೀರಿ ಪಡೆದದ್ದು. ಭಾಷೆಯ ಮೂಲಕ ಸಂವಹಿಸಲು ಸಾಧ್ಯವಾಗದ ಒಳನೋಟಗಳಿಂದ ಕೂಡಿದ್ದು. ಇವೆರಡಕ್ಕೂ ಎಲ್ಲಿಯ ಹೋಲಿಕೆ ಎಂದು ಅನ್ನಿಸಿದರೂ ಈ ಕ್ಷೇತ್ರಗಳಿಗೆ ಸಮರ್ಪಿಸಿಕೊಂಡು ಇಲ್ಲಿನ ಜ್ಞಾನಗಳನ್ನು ತಮ್ಮದಾಗಿಸಿಕೊಂಡು ವಿಜ್ಞಾನಿಗಳು ಮತ್ತು ದಾರ್ಶನಿಕರು ಅವರವರ ಅನುಭವದ ಮೂಲಕ ತಿಳಿಸಿಕೊಟ್ಟಿದ್ದಾರೆ. ಅವುಗಳನ್ನು ಹೋಲಿಕೆ ಮಾಡಿದರೆ ಆ ಜ್ಞಾನಗಳನ್ನು ಹೋಲಿಸಿನೋಡಿದಂತೆಯೇ ಎನ್ನುತ್ತ ಕಾಪ್ರ ಹೋಲಿಕೆಗಾಗಿ ಸರಿಯಾದ ಚೌಕಟ್ಟೊಂದನ್ನು ಮೊದಲು ಸಿದ್ಧಪಡಿಸಿಕೊಳ್ಳೋಣ ವೆನ್ನುತ್ತಾರೆ. ಜ್ಞಾನವೆಂದರೆ ಯಾವ ತೆರನಾದದ್ದು, ಬುದ್ಧ ಹೇಳುವ ಜ್ಞಾನ ಆಕ್ಸ್‌ಫರ್ಡ್‌ನ ವಿಜ್ಞಾನಿ ಹೇಳುವ ಜ್ಞಾನ ಎರಡೂ ಒಂದೇ ಏನು? ಎನ್ನುತ್ತ ಕಾಪ್ರ ಮಾನವ ಚಿಂತನೆಯ ಚಾರಿತ್ರಿಕ ಬೆಳವಣಿಗೆಯ ಕಡೆಗೆ ಹೊರಳುತ್ತಾರೆ. ವೈಚಾರಿಕ ಅಥವಾ ತಾರ್ಕಿಕ ಜ್ಞಾನ ಒಂದಿದೆ ಹಾಗೆಯೇ ಧ್ಯಾನೋತ್ಪನ್ನ ಅಥವಾ ಭಾವನಾತ್ಮಕ ಜ್ಞಾನ



ಇನ್ನೊಂದಿದೆ. ಇದನ್ನೇ ಹಿಂದೂ ಧರ್ಮದಲ್ಲಿ ಕೆಳಸ್ತರದ ಮೇಲುಸ್ತರದ ಜ್ಞಾನಗಳೆಂದೂ, ಬೌದ್ಧರು ಸಾಪೇಕ್ಷ ನಿರಪೇಕ್ಷ ಜ್ಞಾನಗಳೆಂದೂ, ಚೀನೀಯರು ಯಾಂಗ್ ಮತ್ತು ಯಿನ್‌ಗಳೆಂದೂ ಕರೆಯುತ್ತಾರೆ. ವಿಜ್ಞಾನದ್ದು ತಾರ್ಕಿಕ ಜ್ಞಾನ, ದರ್ಶನಗಳದ್ದು ಧ್ಯಾನೋತ್ಪನ್ನ ಜ್ಞಾನ. ಪಾಶ್ಚಿಮಾತ್ಯರು ತಾರ್ಕಿಕ ಜ್ಞಾನವೇ ಮೇಲೆಂದು ಪರಿಗಣಿಸಿದರೆ ಪೌರ್ವಾತ್ಯರದ್ದು ತದ್ವಿರುದ್ಧ ನಿಲುವು.

ಪರಿಸರದೊಡನೆ ನಮ್ಮ ನಿತ್ಯ ಸಂಪರ್ಕ ವರ್ತನೆಗಳಿಂದ ಬಂದದ್ದು ತಾರ್ಕಿಕ ಜ್ಞಾನ. ಇದರಿಂದಾಗಿಯೇ ನಾವು ವಸ್ತುಸ್ಥಿತಿಗಳನ್ನು ಪರಿಮಾಣಾತ್ಮಕವಾಗಿ ಗುರುತಿಸುವ, ಸಂಬಂಧ ಕಲ್ಪಿಸುವ, ಅಳೆದು ನೋಡುವ, ವಿಂಗಡಿಸುವ ಸಾಮರ್ಥ್ಯ ಪಡೆದಿದ್ದೇವೆ. ವಸ್ತುಸ್ಥಿತಿಗಳ ಗುಣವಿಶೇಷಗಳನ್ನು ಸಾಂಕೇತಿಕವಾಗಿ ಖಚಿತವಾಗಿ ನಿರ್ದಿಷ್ಟವಾಗಿ ಗುರುತಿಸಲೂ ಯುಕ್ತವಾಗಿ ಸಂವಹಿಸಬಹುದಾದ ಸಾರ್ವತ್ರಿಕವಾದ ಸಾಂಕೇತಿಕ ಭಾಷೆಯಲ್ಲಿ ನಿರೂಪಿಸಲೂ ಸಾಧ್ಯವಾಗಿದೆ. ಈ ತಾರ್ಕಿಕ ಜ್ಞಾನ ಭೌತವಿಜ್ಞಾನದಲ್ಲಿ ಮೂರು ಹಂತದಲ್ಲಿ ರೂಪುಗೊಳ್ಳುತ್ತದೆ. ಮೊದಲಿಗೆ ವಿಜ್ಞಾನಿಗಳು ಯಾವ ಕ್ರಿಯೆಯನ್ನು ಅರ್ಥೈಸಬೇಕೋ ಅದಕ್ಕೆ ಪ್ರಾಯೋಗಿಕ ಪ್ರಮಾಣಗಳನ್ನು ಕಲೆಹಾಕಿ ನಂತರದಲ್ಲಿ ಪ್ರಯೋಗದ ಫಲಿತಾಂಶಗಳನ್ನು ಸಂಕೇತಗಳಿಗೆ ಹೊಂದಿಸಿ ನಿರ್ದಿಷ್ಟ ಗಣಿತ ಸೂತ್ರಗಳನ್ನು ಪಡೆಯುತ್ತಾರೆ. ಇವುಗಳನ್ನು ಕ್ರಮಬದ್ಧ ರೀತಿಯಲ್ಲಿ ಜೋಡಿಸಿದ್ದನ್ನೇ ಕ್ರಿಯೆಯ ಬಗೆಗಿನ ಮಾದರಿಯೆಂದು ಇನ್ನೂ ಸ್ವಲ್ಪ ಸಂಸ್ಕರಿಸಿ ಸಿದ್ಧಾಂತವೆಂದು ಪರಿಗಣಿಸುತ್ತಾರೆ. ಎರಡನೆಯ ಹಂತದಲ್ಲಿ ಈ ಸಿದ್ಧಾಂತವನ್ನು ಹೊಸ ಪ್ರಯೋಗಗಳಿಗೆ ಒರೆಹಚ್ಚಿ ಸುಸಂಬದ್ಧ ಫಲಿತಾಂಶಗಳು ಬಂದಲ್ಲಿ ಸರಿಯಾದ ಸಿದ್ಧಾಂತವೆಂದು ಅಂಗೀಕರಿಸುತ್ತಾರೆ. ಮೂರನೆಯ ಹಂತದಲ್ಲಿ ಈ ಸಿದ್ಧಾಂತದಿಂದ ಸತ್ಯದ ಸಾಕ್ಷಾತ್ಕಾರವೆಷ್ಟಾಗಿದೆಯೋ ಅದನ್ನು ಇತರರಿಗೆ ಪರಿಚಯಿಸುವುದಕ್ಕೆ ಸರಳ ಭಾಷೆಯಲ್ಲಿ ಸಿದ್ಧಾಂತದ ಮೂಲ ವಿಚಾರಗಳನ್ನೂ ಗಣಿತೋಕ್ತಿಗಳ ಸಾರವನ್ನೂ ಸಂಗ್ರಹಿಸಿ ಪ್ರಕಟಪಡಿಸುತ್ತಾರೆ. ಎಲ್ಲ ಸಂದರ್ಭಗಳಲ್ಲೂ ಮೇಲಿನ ಕ್ರಮದಲ್ಲಿಯೇ ವಿಜ್ಞಾನದಲ್ಲಿನ ಸಿದ್ಧಾಂತಗಳು ರೂಪುಗೊಳ್ಳುತ್ತವೆಯೆಂದಲ್ಲ. ಎರಡನೆಯ ಹಂತದಲ್ಲಿ ಒಮ್ಮೊಮ್ಮೆ ತನ್ನ ಕ್ರಿಯಾಶೀಲ ದೃಷ್ಟಿಯಿಂದಲೋ, ಆಧ್ಯಾತ್ಮಿಕ ನೆಲೆಗಟ್ಟಿನಿಂದಲೋ, ಸ್ವಪ್ನ ಸುಷುಪ್ತ ಸ್ಥಿತಿಯಲ್ಲಿಯೋ ತಳೆದ ವಿಶಿಷ್ಟ ಆಲೋಚನೆಗಳನ್ನು ವಿಜ್ಞಾನಿ ಗಣಿತದ ಸಾಂಕೇತಿಕ ಭಾಷೆಗೆ ಅಳವಡಿಸಿ, ಸಿದ್ಧಾಂತವೊಂದನ್ನು ಕಟ್ಟಬಹುದು. ಹೇಗೇ ಕಟ್ಟಿದರೂ ಸಿದ್ಧಾಂತಗಳು ತಮ್ಮ ಸಿಂಧುತ್ವಕ್ಕಾಗಿ ಪ್ರಯೋಗಗಳಿಗೆ ತಮ್ಮನ್ನು ಒಡ್ಡಿಕೊಳ್ಳಬೇಕು. ಹೀಗೆ ಕ್ರಿಯೆಯನ್ನು ಅರ್ಥೈಸುವಲ್ಲಿ, ಎಲ್ಲ ಸಿದ್ಧಾಂತಗಳನ್ನೂ ಪ್ರಯೋಗಗಳಿಗೆ ಆಧಾರಪಡಿಸು ವುದನ್ನೇ ವೈಜ್ಞಾನಿಕ ದೃಷ್ಟಿಕೋನ ಅಥವಾ ವೈಜ್ಞಾನಿಕ ಕ್ರಮವೆನ್ನುತ್ತಾರೆ. ತಾರ್ಕಿಕ ಜ್ಞಾನವೊಂದು ರೂಪುತಳೆಯಬೇಕಾದರೆ ಅಲ್ಲಿನ ಸಿದ್ಧಾಂತಗಳು ಪ್ರಯೋಗಗಳ

ಕುಲುಮೆಗಳಲ್ಲಿ ಉತ್ತೀರ್ಣಗೊಂಡು ಹೊರಬರಬೇಕಾದದ್ದು ಅನಿವಾರ್ಯ. ತಾರ್ಕಿಕ ಜ್ಞಾನಕೋಶಾಗಾರಕ್ಕೆ ಪ್ರವೇಶ ಬಯಸುವುದಾದರೆ ಸಿದ್ಧಾಂತಗಳು ಪ್ರಯೋಗಗಳೆಂಬ ಎಲ್ಲ ಪ್ರವೇಶದ್ವಾರಗಳಲ್ಲಿ ರಹದಾರಿ ಪತ್ರಗಳನ್ನು ಪಡೆಯಲೇಬೇಕು. ಹೀಗೆ ಪಕ್ವಗೊಂಡ ಸಿದ್ಧಾಂತಗಳು ತಮ್ಮೊಳಗಿನ ತಾರ್ಕಿಕ ಜ್ಞಾನದ ಮೂಲಕ ಸೃಷ್ಟಿಯ ರಹಸ್ಯಗಳಿಗೆ ಕ್ರಮಬದ್ಧ ರೀತಿಯಲ್ಲಿ ವ್ಯಾಖ್ಯಾನ ಕೊಟ್ಟು ಹೆಚ್ಚಿನ ಜ್ಞಾನಕ್ಕೂ ಮುಂದುವರಿದ ಸಂಶೋಧನೆಗೂ ಮಾರ್ಗದರ್ಶಕವಾಗುತ್ತವೆ.

ಇಷ್ಟಾದರೂ ಈ ಜ್ಞಾನ ಪರಿಮಿತವಾದದ್ದು ಎಂಬುದು ಸೃಷ್ಟಿಯ ಸಂಕೀರ್ಣ ರಚನಾ ವೈವಿಧ್ಯದಿಂದಲೇ ಸ್ಪಷ್ಟ. ಯಾವ ವಸ್ತುಸ್ಥಿತಿಯೂ ಇಲ್ಲದ ಶೂನ್ಯಸ್ಥಿತಿಯ ಅವಕಾಶವೇ ವಕ್ರತೆಯನ್ನು ಹೊಂದಿದೆ ಎಂದು ಆಧುನಿಕ ಭೌತವಿಜ್ಞಾನವೇ ಕಂಡುಕೊಂಡಿದೆ. ಇನ್ನು ಅಸಂಖ್ಯಾತ ಪರಮಾಣುಗಳಿಂದ ಹಿಡಿದು ಬಿಲಿಯನ್‌ಗಟ್ಟಲೆ ಗೆಲಾಕ್ಸಿಗಳನ್ನೂ, ಕೋಟ್ಯಾಂತರ ಜೀವರಾಶಿಗಳನ್ನೂ ಹೊಂದಿರುವ ವಿಶ್ವರಚನೆಯಂತೂ ಅತ್ಯಂತ ಜಟಿಲ ಹಾಗೂ ಸಂಕೀರ್ಣವಾದದ್ದು ಎನ್ನುವುದರಲ್ಲಿ ಎರಡು ಮಾತಿಲ್ಲ. ಹೀಗಿರುವಾಗ ಇಡೀ ವಿಶ್ವವನ್ನೇ ಜೀವ ನಿರ್ಜೀವ ಭಾಗಗಳೆಂದು ಗುರುತಿಸಿ ಇವುಗಳನ್ನು ಮತ್ತೆ ಮತ್ತೆ ವಿಭಜಿಸಿ ಖಂಡದೃಷ್ಟಿಯಿಂದಲೇ ವಿವಿಧ ಭಾಗಗಳನ್ನು ಅಭ್ಯಸಿಸುವ ವಿಜ್ಞಾನ ತನಗೆ ತಾನೇ ಪರಿಮಿತಿಯನ್ನು ಒಡ್ಡಿಕೊಂಡಿರುವುದಂತೂ ಸ್ಪಷ್ಟ. ಇದರಿಂದಾಗಿಯೇ ಇದರ ತತ್ವ ಹಾಗೂ ಅದನ್ನು ನಿರೂಪಿಸುವ ಭಾಷೆ ನಿರ್ದಿಷ್ಟವೆನಿಸಿದರೂ ನಿರ್ಬಂಧಿತ ಎಲ್ಲೆಗಳಿಗೆ ಸೀಮಿತವಾಗಿವೆ. ಆದರೂ ಹಲವು ಬಾರಿ ಇದು ಗಮನಕ್ಕೆ ಬಾರದೆ ಇಂತಹ ಜ್ಞಾನವು ಬಿಂಬಿಸುವುದನ್ನೇ ನಾವು ವಾಸ್ತವವೆಂದು ಗ್ರಹಿಸಿ ಗೊಂದಲದಲ್ಲಿ ಸಿಲುಕಿ ಬೀಳುತ್ತೇವೆ.

ಇಂತಹ ನಿಲುವು ಸರಿಯಲ್ಲವೆಂದು ದರ್ಶನಗಳು ಎಚ್ಚರಿಸಿ ಗೊಂದಲದಿಂದ ನಮ್ಮನ್ನು ಪಾರುಮಾಡಲು ಪ್ರಯತ್ನಿಸಿವೆ. ಚಂದ್ರನನ್ನು ತೋರಿಸಲು ಬೆರಳು ಅಗತ್ಯವೆನಿಸಿದರೂ ಒಮ್ಮೆ ಚಂದ್ರನನ್ನು ಗುರುತಿಸಿದ ಮೇಲೆ ಬೆರಳನ್ನು ಗಮನಿಸುವ ಗೋಜಿಗೆ ಸಿಲುಕಬಾರದು ಎನ್ನುವ ಈ ದರ್ಶನಗಳು ಇಂದ್ರಿಯಗೋಚರ ಅನುಭವದಿಂದಾಚೆಗೂ ಅಂತರ್ದೃಷ್ಟಿಯಿಂದ ಪಡೆಯಬಹುದಾದ ಒಂದು ಅನುಭವವಿದೆ. ಆ ಅನುಭವದ ಫಲವೇ ನಿರಪೇಕ್ಷಜ್ಞಾನ, ಅತ್ಯುನ್ನತವಾದ ವಾಸ್ತವ ಅಥವಾ ನಿಜಸ್ಥಿತಿ ಎನ್ನುವುದೊಂದಿದೆ ಎಂದು ಈ ಜ್ಞಾನ ಹೇಳುತ್ತದೆ. ಅನುಭವಕ್ಕೆ ಮಾತ್ರ ದಕ್ಕುವ ಈ ಸತ್ಯವನ್ನು ಪ್ರಚುರಪಡಿಸಲು ಸಾಧ್ಯವಿಲ್ಲ. ನಿರಪೇಕ್ಷಜ್ಞಾನ ಬುದ್ಧಿಪೂರ್ವಕವಲ್ಲದ (ಮುಗ್ಧ) ಸ್ಥಿತಿಯಲ್ಲಿ ಪಡೆದ ವಾಸ್ತವದ ನಿಜರೂಪದ ಅನುಭವ. ಸಾಧಾರಣವಲ್ಲದ ವಿವೇಕ ಸ್ಥಿತಿ, ಇದನ್ನು ಧ್ಯಾನಿಕ ಅಥವಾ ದಾರ್ಶನಿಕ ಸ್ಥಿತಿಯೆನ್ನಬಹುದೇನೋ, ಇಂತಹದ್ದೊಂದಿದೆ ಎಂದು ದಾರ್ಶನಿಕರು ಅಭಿಪ್ರಾಯಪಡುವುದಕ್ಕೆ ಪೂರಕವಾಗಿ ಮನಃ



ಶಾಸ್ತ್ರಜ್ಞರೂ ಸಂಶೋಧನೆಯ ಮೂಲಕ ತಮ್ಮ ಒಪ್ಪಿಗೆ ಕೊಟ್ಟಿದ್ದಾರೆ.

ವಸ್ತುಸ್ಥಿತಿಯನ್ನು ವಿಶೇಷ ರೀತಿಯಲ್ಲಿ ಗಮನಿಸುವುದರ ಮೂಲಕ ಬುದ್ಧಿರಹಿತ ಅನುಭವವೊಂದನ್ನು ಪಡೆಯಲು ಸಾಧ್ಯವೆನ್ನುವ ದಾರ್ಶನಿಕ ಜ್ಞಾನ ಕೂಡ ಮೊದಲಿಗೆ ಪ್ರಾಯೋಗಿಕ ಮಾರ್ಗಗಳನ್ನೇ ಅನುಸರಿಸುತ್ತದೆ. ಆದರೆ ಅದರ ಅನುಸರಣೆ ತಾರ್ಕಿಕ ಜ್ಞಾನದಂತಲ್ಲ. **ತಾರ್ಕಿಕ ಜ್ಞಾನ ಪ್ರಯೋಗವನ್ನು ಅವಲಂಬಿಸಿದರೆ ದಾರ್ಶನಿಕ ಜ್ಞಾನ ಅಂತರ್ದೃಷ್ಟಿಯ ಅನುಭವವನ್ನು ಅವಲಂಬಿಸಿದೆ.** ಬೌದ್ಧ ದರ್ಶನದಲ್ಲಿ ಆತ್ಮಸಾಕ್ಷಾತ್ಕಾರವಾಗಬೇಕಾದರೆ ಮೊದಲು ಸರಿಯಾದ ವೀಕ್ಷಣೆ ಅಗತ್ಯವೆಂದು ಹೇಳಿರುವಲ್ಲಿ ಬುದ್ಧಿರಹಿತವಾದ ಅನುಭವವೊಂದನ್ನೇ ಕುರಿತು ಹೇಳಲಾಗಿದೆಯೆಂದು ತಿಳಿಯಬಹುದು.

ದಾರ್ಶನಿಕರ ಪ್ರಕಾರ ನಿಜಸ್ಥಿತಿಯೆಂದರೆ ಇಂದ್ರಿಯಗೋಚರವಾದುದಷ್ಟೇ ಅಲ್ಲ, ಅದರಿಂದಾಚೆಗೂ ಇರುವಂತಹದು. ಹಾಗೆಯೇ ವೀಕ್ಷಣೆ ಎಂದರೆ ಕೇವಲ ಕಣ್ಣಿಂದ ನೋಡುವುದಷ್ಟೇ ಅಲ್ಲ. ಅದನ್ನೂ ಕೂಡಿಕೊಂಡು ಪಡೆಯುವ ಒಂದು ಇಂದ್ರಿಯಾತೀತ ಅನುಭವ. ವೈಜ್ಞಾನಿಕ ಪ್ರಯೋಗ ಮತ್ತು ದಾರ್ಶನಿಕ ಅನುಭವಗಳು ಬಹಳಷ್ಟು ಭಿನ್ನವಾಗಿದ್ದರೂ ಅವುಗಳ ನಡುವೆ ಸಾಮ್ಯವಿರುವುದು ವಿಸ್ಮಯವೆನ್ನಿಸಬಹುದು. ಅತ್ಯಂತ ಉನ್ನತ ತಂತ್ರಜ್ಞಾನವನ್ನು ಉಪಯೋಗಿಸಿ ಒಬ್ಬ ಭೌತವಿಜ್ಞಾನಿ ಅನೇಕ ಪರಿಣಿತರೊಡನೆ ಸೇರಿ ಪ್ರಯೋಗದಲ್ಲಿ ತೊಡಗಿ ಫಲಿತಾಂಶಗಳನ್ನು ಪಡೆದರೆ, ದಾರ್ಶನಿಕನಾದರೋ ಯಾವ ಯಂತ್ರಗಳನ್ನೂ ಬಳಸದೆ ಏಕಾಂತದಲ್ಲಿ ಧ್ಯಾನಮಗ್ನನಾಗಿದ್ದು ಅಂತರ್ದೃಷ್ಟಿಯ ಮೂಲಕ ಅನುಭವಗಳನ್ನು ಪಡೆಯುತ್ತಾನೆ. ವಿಜ್ಞಾನದ ಪ್ರಯೋಗಗಳೋ ಪುನರಾವರ್ತನೀಯ. ಯಾರು ಬೇಕಾದರೂ ಯಾವಾಗ ಬೇಕೆನಿಸಿದರೂ ಮತ್ತೆ ಮತ್ತೆ ನಡೆಸಿ ಒಂದೇ ಫಲಿತಾಂಶಗಳನ್ನು ಪಡೆಯಬಹುದು. ಆದರೆ ದಾರ್ಶನಿಕ ಅನುಭವಗಳು ಹೀಗಲ್ಲ. ಇವು ಕೆಲವರಿಗೆ ಮಾತ್ರ ಕೆಲ ಸಂದರ್ಭಗಳಲ್ಲಷ್ಟೇ ಗೋಚರವಾಗುತ್ತವೆ. ಇಂತಹ ವೈರುಧ್ಯಗಳ ನಡುವೆ ಸಾಮ್ಯವನ್ನು ಗುರುತಿಸುವುದು ಮೇಲ್ನೋಟಕ್ಕೆ ವಿಸ್ಮಯಕ್ಕೆಡೆಮಾಡಬಹುದು. ಆದರೆ ಈ ವ್ಯತ್ಯಾಸಗಳು ಕೇವಲ ಮಾರ್ಗಗಳಲ್ಲಿವೆಯೇ ಹೊರತು ಅಲ್ಲಿನ ಫಲಿತಾಂಶಗಳಲ್ಲಲ್ಲ ಎನ್ನುವುದು ಸೂಕ್ಷ್ಮವಾಗಿ ಗಮನಿಸಿದರೆ ಅರಿವಾಗುತ್ತದೆ.

**5. ಸಾಧಾರಣ ಸಾಮ್ಯಗಳು:** ಇವುಗಳನ್ನು ನಿಜಕ್ಕೂ ಸಾಮ್ಯವೆಂದು ಕಾಪ್ರ ಗುರುತಿಸುವುದಿಲ್ಲ. ಆದರೆ ಎರಡೂ ಜ್ಞಾನಗಳ ಬಗ್ಗೆ ಬರೆಯುವಾಗ ಇವುಗಳನ್ನು ವಿಶೇಷವಾಗಿ ಗಮನಿಸುತ್ತಾರೆ.

**ಪರಿಣತಿಯಿಂದ ಪಕ್ವತೆ:** ಮೊದಲನೆಯ ಸಾಮ್ಯವೊಂದನ್ನು ಕಾಪ್ರ ನಮ್ಮ ಮುಂದಿಡುತ್ತಾರೆ. ಆಧುನಿಕ ಭೌತವಿಜ್ಞಾನದ ಸೂಕ್ಷ್ಮಕಣಗಳನ್ನು ಕುರಿತು

ಪುನರ್‌ಪ್ರಯೋಗ ಮಾಡಬಯಸುವ ಯಾರೇ ಆಗಲಿ ಹಲವಾರು ವರ್ಷಗಳ ತರಬೇತಿ ಪಡೆಯಬೇಕಾಗುತ್ತದೆ. ಆ ನಂತರವೇ ಆ ವ್ಯಕ್ತಿ ನಿರ್ದಿಷ್ಟ ಪ್ರಶ್ನೆಯೊಂದನ್ನು ಕೇಳಿ ಸೂಕ್ತ ಪ್ರಯೋಗ ಮಾಡುವುದರ ಮೂಲಕ ಬಂದ ಫಲಿತಾಂಶದಿಂದ ಉತ್ತರ ಕಂಡುಕೊಳ್ಳಲು, ಪದೇ ಪದೇ ಪ್ರಯೋಗವನ್ನು ಮಾಡಿ ಮೊದಲ ಉತ್ತರವನ್ನು ಮತ್ತೆ ಪಡೆಯಲು ಸಾಧ್ಯ. ಇದೇ ರೀತಿ ದರ್ಶನಾಕಾಂಕ್ಷಿಯೂ ಹಲವಾರು ವರ್ಷ ಗುರುಸಾನ್ನಿಧ್ಯದಲ್ಲಿ ತರಬೇತಿ ಹೊಂದಬೇಕು. ಈ ತರಬೇತಿಯಲ್ಲಿ ನಿರ್ದಿಷ್ಟವಲ್ಲದಿದ್ದರೂ ಯಾವುದೋ ಕ್ಷಣದಲ್ಲಿ ದರ್ಶನವಾಗಿ ಜಯಶೀಲ ವಿದ್ಯಾರ್ಥಿಯೆನಿಸಿದರೆ ಮತ್ತೆ ಮತ್ತೆ ಅದೇ ದರ್ಶನ ಭವಿಷ್ಯದಲ್ಲಿ ಖಂಡಿತ ಪುನರಾವರ್ತನೆಯಾಗುತ್ತದೆ ಎನ್ನುವ ಕಾಪ್ರ ಇದಕ್ಕೆ ಉದಾಹರಣೆಯಾಗಿ ಯಾರೇ ಆಗಲಿ ಕೆಲವೊಮ್ಮೆ ಏನನ್ನೋ ಯಾರ ಹೆಸರನ್ನೋ ಮರೆತು ಎಷ್ಟೇ ಏಕಾಗ್ರತೆಯಿಂದ ಪ್ರಯತ್ನಪಟ್ಟರೂ ಹೊಳೆಯದಿದ್ದುದು ನಂತರ ಆ ಪ್ರಸಂಗವನ್ನೇ ಮರೆತು ಯಾವುದೋ ವಿರಾಮ ಸ್ಥಿತಿಯಲ್ಲೋ ಇನ್ನೇನನ್ನೋ ಮಾಡುತ್ತಿರುವಾಗ ಇದ್ದಕ್ಕಿದ್ದಂತೆ ಕ್ಷಣಮಾತ್ರದಲ್ಲಿ ಜ್ಞಾಪಕಕ್ಕೆ ಬರುವ ಸನ್ನಿವೇಶವನ್ನು ಮುಂದಿಟ್ಟು ಇಂತಹ ನೇರ ಅನುಭವಗಳಂತೆಯೇ ದಾರ್ಶನಿಕ ಅನುಭವಗಳೂ ಕೂಡ ತರಬೇತಿಯಿಂದ ಪಕ್ವಗೊಂಡ ಮನಸ್ಸಿಗೆ ಗೋಚರವಾಗುತ್ತವೆ ಎನ್ನುತ್ತಾರೆ.

**ಭಾಷೆಯ ಮಿತಿ:** ವೈಜ್ಞಾನಿಕ ಸಿದ್ಧಾಂತಗಳು ಮೊದಲೇ ತಿಳಿಸಿದಂತೆ ಖಂಡದೃಷ್ಟಿಯಿಂದ ಪಡೆದ ಜ್ಞಾನವನ್ನಷ್ಟೇ ತಿಳಿಸುವುದರಿಂದ ಮೂಲತಃ ಅವುಗಳಿಗೆ ಮಿತಿಯಿದೆ. ಅಂತೆಯೇ ಅವು ವಿಶ್ವಸ್ಥಿತಿಯ ನೈಜ ಸ್ವರೂಪವನ್ನು ತಿಳಿಸಲಾರವು. ಈ ಸಿದ್ಧಾಂತಗಳನ್ನು ಪರಸ್ಪರ ಜ್ಞಾನವಿನಿಮಯಕ್ಕಾಗಿ ಪ್ರಚಲಿತ ಆಡುಭಾಷೆಯೊಂದನ್ನು ಬಳಸಿ ಹೇಳಬೇಕಾದ ಅನಿವಾರ್ಯತೆ ಇರುವುದರಿಂದ ಆ ಭಾಷೆಯ ಮಿತಿಯಿಂದಾಗಿಯೂ ನಿಜಸ್ಥಿತಿಯ ಸ್ವರೂಪ ತಿಳಿಯಲು ಸಾಧ್ಯವಾಗದಿರಬಹುದು. ದಾರ್ಶನಿಕ ಜ್ಞಾನದಲ್ಲೂ ಇದೇ ತೊಡಕಿದೆ. ನಿಜಸ್ಥಿತಿಯ ಪ್ರತ್ಯಕ್ಷ ಅನುಭವವು ನಮ್ಮ ಆಲೋಚನೆಗಳನ್ನೂ ಅಭಿವ್ಯಕ್ತಿಮಾರ್ಗಗಳನ್ನೂ ದಾಟಿ ನಿಲ್ಲುವುದರಿಂದ, ದರ್ಶನ ಜ್ಞಾನವನ್ನು ಹೇಗೆ ಹೇಳಿದರೂ ಅದು ಪಾರ್ಶ್ವ ಸತ್ಯವಾಗಬಹುದೇ ವಿನಾ ಪರಿಪೂರ್ಣ ಸತ್ಯವಾಗಲಾರದು. ಈ ತೊಡಕನ್ನು ಬಿಡಿಸಲೆಂದೇ ದರ್ಶನ ಮಾರ್ಗಗಳಲ್ಲಿ ಅನೇಕ ತಾಂತ್ರಿಕ ವಿಧಾನಗಳು, ವಿಗ್ರಹಾರಾಧನೆಗಳು, ಅಪರಿಮಿತ ದೇವರ ಕಲ್ಪನೆಗಳು ಹಿಂದೂ, ತಾವೋ ಮುಂತಾದ ಪೌರ್ವಾತ್ಯ ದರ್ಶನಗಳಲ್ಲಿ ಬಳಸಲ್ಪಟ್ಟಿರುವುದನ್ನು ವಿವರಿಸುತ್ತ ಎರಡೂ ಜ್ಞಾನಗಳು ಅಭಿವ್ಯಕ್ತಗೊಳ್ಳುವ ಮಾರ್ಗಗಳಿಂದಾಗಿ ಮಿತಿಗೊಳಗಾಗುವುದನ್ನು ಕಾಪ್ರ ತಿಳಿಸಿದ್ದಾರೆ.

**6. ಪ್ರಮುಖ ಸಾಮ್ಯಗಳು:** ಸಾಧಾರಣವೆಂದು ಗುರುತಿಸಿದ ಮೇಲಿನ ಎರಡೂ ಸಾಮ್ಯಗಳು ಆಯಾ ಜ್ಞಾನಗಳನ್ನು ಪಡೆಯುವಲ್ಲಿ ಮತ್ತು ಅವುಗಳನ್ನು



ಅಭಿವ್ಯಕ್ತಗೊಳಿಸುವಲ್ಲಿ ಕಾಣುತ್ತವೆಯೇ ಹೊರತು ಆ ಜ್ಞಾನಗಳ ಸ್ವರೂಪ ಅಥವಾ ತತ್ವಗಳಿಗೆ ನಿಲುವುಗಳಿಗೆ ಸಂಬಂಧಪಟ್ಟವಲ್ಲ. ಈ ಎರಡನೆಯ ಅಂಶವನ್ನು ಕುರಿತಾಗಿ ಇರುವ ಸಾಮ್ಯಗಳನ್ನೇ ಕಾಪ್ರ ತಮ್ಮ ಕೃತಿಯಲ್ಲಿ ವಿಶಿಷ್ಟವಾಗಿ ಗುರುತಿಸುತ್ತಾರೆ. ಮುಂದಿನ ವಿವರಣೆ ಇವುಗಳನ್ನೇ ಕೇಂದ್ರೀಕರಿಸಿದೆ.

**ದ್ವೈತ ಗುಣ:** ನ್ಯೂಟನ್ನನ ಕಾಲದಿಂದ 19ನೆಯ ಶತಮಾನದ ಅಂತ್ಯದವರೆಗೂ ಪ್ರಚಲಿತವಾಗಿದ್ದ ಭೌತವಿಜ್ಞಾನದ ಸ್ವರೂಪ 20ನೆಯ ಶತಮಾನ ಆರಂಭವಾಗುತ್ತಿದ್ದಂತೆ ಕ್ಷಿಪ್ರ ಬದಲಾವಣೆಗೊಳಪಡಬೇಕಾಯಿತು. ಕೇವಲ ಸ್ಥೂಲರೂಪದ ವಸ್ತುಸ್ಥಿತಿಯನ್ನು ಸರಿಯಾಗಿ ಗ್ರಹಿಸಿದ ಹಿಂದಿನ ಭೌತವಿಜ್ಞಾನಕ್ಕೆ ಸೂಕ್ಷ್ಮರೂಪದ ಭೌತಪ್ರಪಂಚವನ್ನು ತನ್ನ ಹಳೆಯ ಚೌಕಟ್ಟಿನಲ್ಲಿ ಹಿಡಿದಿಡಲಾಗಲಿಲ್ಲ. ಇದಕ್ಕೆ ಮುಖ್ಯ ಕಾರಣ ಸೂಕ್ಷ್ಮಜಗತ್ತಿನ ವಸ್ತುಸ್ಥಿತಿ. ಆ ಹೊತ್ತಿಗಾಗಲೇ ಸ್ಥೂಲಜಗತ್ತಿನ ಪ್ರತಿಯೊಂದು ವಸ್ತುವೂ ಪ್ರತ್ಯಕ್ಷನೋಟಕ್ಕೆ ಕಾಣದಷ್ಟು ಸೂಕ್ಷ್ಮಕಣಗಳಿಂದಾಗಿವೆ ಎನ್ನುವ ಸತ್ಯವನ್ನು ಮುಂದುವರೆದ ತಂತ್ರಜ್ಞಾನವನ್ನು ಬಳಸಿ ನಡೆಸಿದ ಪ್ರಯೋಗಗಳಿಂದ ಪರೋಕ್ಷವಾಗಿ ಗುರುತಿಸಲಾಗಿತ್ತು. ಈ ಕಣಗಳ ವರ್ತನೆ ಸ್ಥೂಲಜಗತ್ತನ್ನು ವಿವರಿಸುವ ಸಿದ್ಧಾಂತಗಳನ್ನು ಪಾಲಿಸುವುದಿರಲಿ ಆ ಸಿದ್ಧಾಂತಗಳ ಮೂಲತತ್ವಗಳನ್ನೇ ಬುಡಮೇಲು ಮಾಡುವಂತೆ ತೋರತೊಡಗಿತು. ಉದಾಹರಣೆಗೆ ಬೆಳಕು ಎಲ್ಲೆಲ್ಲೂ ವ್ಯಾಪಕವಾಗಿ ಹರಡಿರುವ ಅಲೆಯಂತೆಯೂ ಅದೇ ಕ್ಷಣದಲ್ಲಿ ಒಂದೇ ಬಿಂದುವಿನಲ್ಲಿ ಗೋಚರಿಸುವ ಕಣದಂತೆಯೂ ವರ್ತಿಸುತ್ತಿದ್ದುದು ಗಮನಕ್ಕೆ ಬಂತು. ವಸ್ತುವೊಂದು ಕಣರೂಪದಲ್ಲಿದ್ದರೆ ಕಣದಂತೆಯೂ, ಅಲೆಯಾಗಿದ್ದರೆ ಸದಾ ಅಲೆಯಂತೆಯೂ ವರ್ತಿಸುತ್ತದೆ. ಕಣವಾಗಿದ್ದಾಗ ಅಲೆಯ ಗುಣವಾಗಲೀ ಅಲೆಯಾಗಿದ್ದಾಗ ಕಣದ ಗುಣವಾಗಲೀ ಸಾಧ್ಯವಿಲ್ಲವೆಂಬ ಇಂದ್ರಿಯಗೋಚರವೂ ತಾರ್ಕಿಕವೂ ಆದ ಪ್ರಮಾಣವನ್ನು ಮೂಲತತ್ವವನ್ನಾಗಿಸಿಕೊಂಡು ರೂಪಗೊಂಡಿದ್ದ ಹಿಂದಿನ ಭೌತವಿಜ್ಞಾನದ ಸಿದ್ಧಾಂತಕ್ಕೆ ಬೆಳಕಿನ ದ್ವೈತ ವರ್ತನೆ ಕಗ್ಗಂಟಾಗಿ ತೋರಿತು. ಬೆಳಕಿನಂತೆ ಸೂಕ್ಷ್ಮಕಣಗಳು ಕೂಡ ಇಂತಹ ದ್ವೈತ ವರ್ತನೆಯನ್ನು ಹೊಂದಿವೆ ಎನ್ನುವ ಮುಂದುವರೆದ ಪ್ರಾಯೋಗಿಕ ಸತ್ಯವನ್ನು ಹಳೆಯ ಭೌತವಿಜ್ಞಾನ ಅರಗಿಸಿಕೊಳ್ಳಲಾರದೆ ಸೋತಿತು. ಸ್ಥೂಲ ಜಗತ್ತಿನ ವರ್ತನೆಗಳನ್ನು ಕೂಲಂಕುಶವಾಗಿ ಅಧ್ಯಯನಮಾಡಿ ಪಡೆದಿದ್ದ ಜ್ಞಾನವನ್ನೇ ಸತ್ಯವೆಂದು ತಿಳಿದುಕೊಂಡಿದ್ದ ವೈಜ್ಞಾನಿಕ ಮನಸ್ಸಿಗೆ ಸೂಕ್ಷ್ಮಕಣಗಳ ಈ ದ್ವೈತ ವರ್ತನೆ ವಿರೋಧಾಭಾಸಕ್ಕೆ ಎಡೆಮಾಡಿಕೊಟ್ಟು ಸಂದಿಗ್ಧ ಪರಿಸ್ಥಿತಿಗೆ ಸಿಲುಕಿಸಿದುದು ಒಂದು ಮಹತ್ತರ ಸಂಗತಿಯಾಯಿತು. ಸೂಕ್ಷ್ಮಜಗತ್ತಿನ ನಿಜ ವರ್ತನೆಯನ್ನು ಅರಿಯುವುದಕ್ಕಾಗಿ ತಾರ್ಕಿಕವಾಗಿ ಎಷ್ಟೇ ಕಹಿ ಎನಿಸಿದರೂ ಅನಿವಾರ್ಯವಾಗಿ ಹೊಸ ತತ್ವಗಳನ್ನು ಹುಟ್ಟುಹಾಕಲೇಬೇಕಾಯಿತು. ಅಂತೆಯೇ

ಭೌತವಿಜ್ಞಾನದ ಹಳೆಯ ಸಿದ್ಧಾಂತವನ್ನು ಕೈಬಿಟ್ಟು ಪ್ರತಿಯೊಂದು ಕಣಕ್ಕೂ ಈ ದ್ವೈತ ವರ್ತನೆಯಿದೆಯೆನ್ನುವುದನ್ನೇ ಪುರಸ್ಕರಿಸುವಂತಹ ಕ್ವಾಂಟಂ ಮೂಲತತ್ವಗಳನ್ನು ಸೇರಿಸಬೇಕಾಯಿತು. ಅನೇಕ ಹಳೆಯ ಪರಿಕಲ್ಪನೆಗಳ ಜಾಗದಲ್ಲಿ ಹೊಸ ಪರಿಕಲ್ಪನೆಗಳನ್ನು ಸೇರಿಸಿಕೊಂಡು ಬೆಳೆದದ್ದೇ ಆಧುನಿಕ ಭೌತವಿಜ್ಞಾನ. ಹೀಗೆ ಕಟ್ಟಿದ ಆಧುನಿಕ ಭೌತವಿಜ್ಞಾನದಲ್ಲಿ ದ್ವೈತವರ್ತನೆ ವಸ್ತುಸ್ಥಿತಿಯ ನಿಜಗುಣವೆನ್ನುವುದು ಪ್ರಮುಖ ಮೂಲತತ್ವಗಳಲ್ಲಿ ಒಂದೆನಿಸಿತು.

ದ್ವೈತವರ್ತನೆ ಪಾಶ್ಚಿಮಾತ್ಯ ವೈಜ್ಞಾನಿಕ ಚಿಂತನೆಗೆ ಹೊಸದೆನಿಸಿ ವಿರೋಧಾಭಾಸಕ್ಕೆ ಎಡೆಮಾಡಿಕೊಟ್ಟು, ನಂತರ ಅದನ್ನೇ ಸತ್ಯವೆಂದು ಸ್ವೀಕರಿಸಬೇಕಾದ ಅನಿವಾರ್ಯತೆಗೆ ಎಡೆಮಾಡಿಕೊಟ್ಟರೆ, ಪೌರ್ವಾತ್ಯ ದರ್ಶನಗಳು ವಿಶ್ವದಲ್ಲಿನ ವರ್ತನೆಗಳನ್ನು ಅನುಭವಿಸಿ ಪಡೆದ ದರ್ಶನಗಳಲ್ಲೂ ದ್ವೈತವರ್ತನೆ ಅಥವಾ ಗುಣವಿರುವುದನ್ನು ಗುರುತಿಸಿದ್ದವು. ದಾರ್ಶನಿಕರು ಇಂತಹ ದ್ವೈತ ವರ್ತನೆಗಳನ್ನು ವಿರೋಧಾಭಾಸಗಳೆಂದು ಭಾವಿಸದೆ ಸಹಜ ಅನುಭವಗಳೆಂದು ಸ್ವೀಕರಿಸಿ ಅವುಗಳ ಆಂತರ್ಯದಲ್ಲಿದ್ದ ಅಂಶಗಳನ್ನು ಅನುಭವಿಸಿ ನಿಜಸ್ಥಿತಿಯ ಸಾಕ್ಷಾತ್ಕಾರ ಪಡೆಯಲು ಪ್ರಯತ್ನಿಸಿದರು. ದಾರ್ಶನಿಕ ಉಕ್ತಿಗಳಲ್ಲಿ ವಿರೋಧಾಭಾಸವೆನಿಸುವ ಹೇಳಿಕೆಗಳು ಹೇರಳವಾಗಿ ತುಂಬಿರುವುದನ್ನು ನೋಡಿದರೆ ಅವು ಅನುಭವಗಳ ವಿಶೇಷ ನೆಲೆಗಳನ್ನು ಸೂಚಿಸುವಂತಿವೆ. ಉದಾಹರಣೆಗೆ ಝೆನ್ ಗುರು ಡೈಟೊ ಚಕ್ರವರ್ತಿ ಗೊಡೈಗೋಗೆ ಹೇಳುವುದನ್ನು ಗಮನಿಸಿ. "ಕಲ್ಪಗಳ ಹಿಂದೆಯೇ ನಾವಿಬ್ಬರೂ ವಿದಾಯ ಹೇಳಿದೆವು, ಆದರೆ ಒಂದು ಕ್ಷಣವೂ ಅಗಲಿರಲಿಲ್ಲ. ದಿನವಿಡೀ ಮುಖಾಮುಖಿಯಾಗಿ ಕುಳಿತಿದ್ದೇವೆ ಆದರೆ ಸಂಧಿಸುತ್ತಲೇ ಇಲ್ಲ". ಚೀನಾದ ಯಿಂಗ್ ಮತ್ತು ಯಾಂಗ್ ಒಂದಕ್ಕೊಂದು ಪೂರಕವಾಗಿ ಸೇರಿ ಸೃಷ್ಟಿಯ ಪರಿಪೂರ್ಣತೆಯನ್ನು ಪ್ರತಿನಿಧಿಸುತ್ತವೆ. ಹಿಂದೂ ದರ್ಶನದಲ್ಲಂತೂ ದ್ವೈತದ ಅನುಭವ ಅರ್ಧನಾರೀಶ್ವರ, ಹರಿ-ಹರ, ಪ್ರಕೃತಿ-ಪುರುಷ, ಆತ್ಮ-ಪರಮಾತ್ಮ ಹೀಗೆ ಹಲವು ರೀತಿಯಲ್ಲಿ ಪ್ರಕಟಗೊಂಡಿದೆ. ಸೃಷ್ಟಿಯ ಸೂಕ್ಷ್ಮಪ್ರಪಂಚವನ್ನು ಪ್ರವೇಶಿಸಿದ ಭೌತ ಸಂಶೋಧನೆ ಅಲ್ಲಿನ ಸತ್ಯವನ್ನು ತಿಳಿಯುವುದಕ್ಕಾಗಿ ತಾನೇ ಕಟ್ಟಿದ್ದ ತಾರ್ಕಿಕ ನೆಲೆಗಟ್ಟನ್ನು ದಾಟಿ ಹೊಸ ತತ್ವಗಳ ಬೆಳಕಿನಲ್ಲಿ ಸಾಕ್ಷಾತ್ಕರಿಸಿಕೊಂಡ ಒಂದು ಜ್ಞಾನವೆಂದರೆ ಸೃಷ್ಟಿಗೆ ದ್ವೈತವರ್ತನೆಯಿದೆ ಎನ್ನುವುದು. ಪೌರ್ವಾತ್ಯ ದಾರ್ಶನಿಕರು ತಮ್ಮ ಒಳನೋಟದಲ್ಲಿ ಪಡೆದಿದ್ದ ಅನುಭವವೂ ಇದೇ ಎನ್ನುವಲ್ಲಿ ಕಾಪ್ರ ಎರಡೂ ಜ್ಞಾನಗಳ ಮೊದಲ ಸಾಮ್ಯವನ್ನು ತೋರುತ್ತಾರೆ.

**ಸಂಬಂಧಿತ ಸೃಷ್ಟಿ, ಸ್ವರೂಪ ಮತ್ತು ಸಾಪೇಕ್ಷ ಗುಣ:** 20ನೆಯ ಶತಮಾನದ ಪೂರ್ವದ ಭೌತವಿಜ್ಞಾನ ವಿಶ್ವದ ವಿವಿಧ ವಸ್ತುಸ್ಥಿತಿಗಳನ್ನು ನಿರೂಪಿಸುವಾಗ ಕಾಲ ದೇಶ ಮುಂತಾದ ಅನೇಕ ಗುಣಗಳನ್ನು ಪ್ರತ್ಯೇಕವೆಂದೂ ಸ್ವತಂತ್ರ ಅಸ್ತಿತ್ವವುಳ್ಳವೆಂದೂ



ಗುರುತಿಸಿತ್ತು. ಇಡೀ ವಿಶ್ವಕ್ಕೆ ಒಂದೇ ಗಡಿಯಾರವೆಂದು ನ್ಯೂಟನ್ ಕಾಲದಲ್ಲಿ ತಿಳಿಯಲಾಗಿತ್ತು. ವಸ್ತು ಆಕ್ರಮಿಸುವ ದೇಶ ಅಥವಾ ಜಾಗವೂ ಕಾಲದಂತೆಯೇ ಸ್ವತಂತ್ರ. ತಕ್ಕಡಿಯಲ್ಲಿ ತೂಗಿದಾಗ ಒಂದು ವಸ್ತುವಿಗಿರುವ ದ್ರವ್ಯರಾಶಿ ಹಾಗೂ ಚಲಿಸುತ್ತಿದ್ದಾಗ ವಸ್ತುವಿಗಿರುವ ಶಕ್ತಿ ಕೂಡ ಕಾಲ ದೇಶಗಳಂತೆಯೇ ಸ್ವತಂತ್ರ ನಿರಪೇಕ್ಷ ಪರಿಮಾಣಗಳೆಂದು ಗುರುತಿಸಲ್ಪಟ್ಟಿದ್ದವು. ಆದರೆ 20ನೆಯ ಶತಮಾನದ ಆರಂಭದಲ್ಲಿಯೇ ಪ್ರಚುರಗೊಂಡ ಐನ್‌ಸ್ಟೈನರ ಸಾಪೇಕ್ಷತಾ ಸಿದ್ಧಾಂತ ಈ ಪರಿಮಾಣಗಳೆಲ್ಲವೂ ಸಾಪೇಕ್ಷವೆಂದೂ ಸ್ವತಂತ್ರವಲ್ಲವೆಂದೂ ಸಾರಿತು. ದ್ರವ್ಯರಾಶಿ ಮತ್ತು ಶಕ್ತಿ ಎನ್ನುವುದು ಒಂದೇ ಗುಣದ ಎರಡು ಹೆಸರುಗಳೆಂದಿತು. ಕಾಲ ದೇಶವನ್ನು ದೇಶ ಕಾಲವನ್ನು ಅವಲಂಬಿಸಿವೆಯೆಂದಿತು. ಈ ಸಿದ್ಧಾಂತವನ್ನು ತನ್ನ ಭಾಗವಾಗಿಸಿಕೊಂಡು ರೂಪುಗೊಂಡ ಆಧುನಿಕ ಭೌತವಿಜ್ಞಾನ ವಸ್ತುಸ್ಥಿತಿಯ ವರ್ತನೆಗಳನ್ನು ನಿರ್ದೇಶಿಸುವ ಅನೇಕ ಗುಣಗಳು ಒಂದನ್ನೊಂದು ಅವಲಂಬಿಸಿವೆಯೆಂದು ತೀರ್ಮಾನಿಸಿತು.

20ನೆಯ ಶತಮಾನದ ಕಾಲಚಕ್ರ ಉರುಳುತ್ತಿದ್ದಂತೆಯೇ ಆಧುನಿಕ ಭೌತವಿಜ್ಞಾನದಲ್ಲೂ ಸಾಕಷ್ಟು ಪ್ರಗತಿಯುಂಟಾಯಿತು. ಕ್ವಾಂಟಂ ಸಿದ್ಧಾಂತಕ್ಕೆ ಸಾಪೇಕ್ಷತಾ ಸಿದ್ಧಾಂತವನ್ನು ಅಳವಡಿಸಿ ಸಾಪೇಕ್ಷ ಕ್ವಾಂಟಂ ಸಿದ್ಧಾಂತವನ್ನು ಕಟ್ಟಿ ಇನ್ನಷ್ಟು ಸಂಶೋಧನೆಗಳನ್ನು ಕೈಗೊಳ್ಳಲಾಯಿತು. ಕಣಕ್ಕೊಂದು ಪ್ರತಿಕಣವಿದೆ, ಬಲಕ್ಷೇತ್ರಗಳೇ ಎಲ್ಲೆಲ್ಲೂ ವ್ಯಾಪಕವಾಗಿ ಹರಡಿ ವಿಶ್ವಸೃಷ್ಟಿಯಲ್ಲಿನ ಸಕಲ ಕಣಗಳೂ ಈ ಬಲಕ್ಷೇತ್ರಗಳ ಅವತಾರಗಳೇ ಎಂದೂ ಈ ಕ್ಷೇತ್ರಗಳಲ್ಲಿ ಅಂತರ್ಗತವಾದ ಶಕ್ತಿಯೇ ಕಣ ಪ್ರತಿಕಣಗಳಾಗಿ ಕಾಣಿಸಿಕೊಳ್ಳಲು ಸಾಧ್ಯವೆಂದೂ ಪ್ರಾಯೋಗಿಕವಾಗಿ ಗ್ರಹಿಸಲಾಯಿತು. ಹೀಗೆ ನ್ಯೂಟನ್ ಕಾಲದ ತರ್ಕಾಧಾರಿತ ಜ್ಞಾನಕ್ಕೆ ವಿರುದ್ಧ ನಿರ್ಣಯ ತಾಳಿದ ಆಧುನಿಕ ಭೌತವಿಜ್ಞಾನ ಇಡೀ ಸೃಷ್ಟಿಯೇ ಒಂದು ತೆರನಾದ ಒಳಸಂಬಂಧವನ್ನು ಹೊಂದಿದ್ದು ವಸ್ತುಸ್ಥಿತಿಯ ಅನೇಕ ವರ್ತನೆಗಳು ಒಂದನ್ನೊಂದು ಅವಲಂಬಿಸಿವೆಯೆಂಬ ಅರಿವನ್ನು ಸಾರಿತು.

ಸೃಷ್ಟಿಯ ಬಗೆಗೆ ಇಂತಹದೇ ಅನುಭವವನ್ನು ದರ್ಶನಗಳೂ ಕಂಡಿವೆ ಎನ್ನುತ್ತ ಎರಡನೆಯ ಸಾಮ್ಯವನ್ನು ಕಾಣುವ ಕಾಪ್ರ ಉದಾಹರಣೆಯಾಗಿ ಹಿಂದೂ ದರ್ಶನ **ಸೃಷ್ಟಿಯ ಅತ್ಯುನ್ನತ ನಿಜಸ್ಥಿತಿಯೇ ಬ್ರಹ್ಮ, ಉಳಿದೆಲ್ಲವೂ ಈ ಬ್ರಹ್ಮದ ಭಿನ್ನ ರೂಪಗಳು, ಅವತಾರಗಳು** ಎಂದು ನಿರ್ಣಯಿಸಿದೆ ಎನ್ನುತ್ತಾರೆ. ಇದನ್ನೇ ಪ್ರತಿಬಿಂಬಿಸುವ ಇನ್ನಿತರ ದರ್ಶನಗಳ ನಿರ್ಣಯಗಳನ್ನೂ ದಾಖಲಿಸುವ ಕಾಪ್ರ ಕೃತಿಯ ಒಂದು ಕಡೆ ದಾರ್ಶನಿಕರು ಬೇರೆ ಬೇರೆ ಪ್ರದೇಶಗಳಲ್ಲಿ, ಭಿನ್ನ ಕಾಲಘಟ್ಟಗಳಲ್ಲಿ, ಭಿನ್ನ ಸಾಮಾಜಿಕ, ಸಾಂಸ್ಕೃತಿಕ ನೆಲೆಗಟ್ಟುಗಳಲ್ಲಿದ್ದರೂ ಅವರ ದರ್ಶನಗಳು ಸರಿಸುಮಾರು ಒಂದೇ ಆಗಿರುವುದನ್ನೂ ಗುರುತಿಸುತ್ತಾರೆ.

**ಜಗವೇ ನಾಟಕ ರಂಗ :** ಸ್ಥೂಲ ಜಗತ್ತಿನ ಕೆಲವು ಕ್ರಿಯೆಗಳಲ್ಲಿ ಇನ್ನಿತರ ವಸ್ತುಗಳ ಜೊತೆ ಪ್ರತ್ಯಕ್ಷವಾಗಿ ಭಾಗವಹಿಸಿ ಅಲ್ಲಿನ ಬದಲಾವಣೆಗಳಿಗೆ ನಾವೂ ಕಾರಣರಾಗುತ್ತೇವೆ. ನಾವು ಭಾಗವಹಿಸದೆ ಕೇವಲ ಪ್ರೇಕ್ಷಕರಾಗಿ ನೋಡುವಂತಹ ಕ್ರಿಯೆಗಳೂ ಇವೆಯೆಂದು ತಿಳಿದಿದ್ದೇವೆ. ಆಕಾಶದಲ್ಲಿ ಹಾರುತ್ತಿರುವ ವಿಮಾನವೊಂದನ್ನು ನೆಲದ ಮೇಲೆ ನಿಂತು ನೋಡುವ ಅದರ ಶಬ್ದವನ್ನು ಕೇಳುವ ಸಂದರ್ಭದಲ್ಲಿ ನಮ್ಮ ನೋಡುವಿಕೆಯ ಕಾರಣದಿಂದಾಗಿ ವಿಮಾನದ ಹಾರುವ ಗತಿ ಬದಲಾಗುವುದಿಲ್ಲವೆಂದು ಗೊತ್ತು. ನೋಡುತ್ತಿರುವ ನಾವು ಮತ್ತು ಹಾರುತ್ತಿರುವ ವಿಮಾನ ಎರಡೂ ಪ್ರತ್ಯೇಕ ಸ್ವತಂತ್ರ ವಸ್ತುಸ್ಥಿತಿಗಳೆಂಬುದು ನಮ್ಮ ಸಾಮಾನ್ಯ ತಿಳುವಳಿಕೆ. ಭೌತವಿಜ್ಞಾನದ ಪ್ರಕಾರ ನಾವು ನೋಡುವ ನೋಟಕ್ಕೆ ಅಥವಾ ಕೇಳುವ ಧ್ವನಿಗೆ ಮಾಧ್ಯಮವೊಂದರ ಅಗತ್ಯವಿದೆ. ಈ ಗ್ರಹಿಕೆಯ ಕ್ರಿಯೆಯಲ್ಲಿ ವಸ್ತು, ವೀಕ್ಷಕ ಮತ್ತು ಮಾಧ್ಯಮ ಮೂರೂ ಇವೆ. ವಿಮಾನ ಸ್ಥೂಲಕಾಯವಾದ ಕಾರಣ ನಮ್ಮ ನೋಡುವ ಕ್ರಿಯೆಯಿಂದ ಗತಿ ಬದಲಾಯಿಸಲಿಲ್ಲವೆಂಬುದು ತಾರ್ಕಿಕ ಅರಿವು. ಸೂಕ್ಷ್ಮ ಜಗತ್ತಿನಲ್ಲಿಯೂ ಕ್ರಿಯೆಗಳನ್ನು ಅರಿತುಕೊಳ್ಳಲು ವಸ್ತು, ವೀಕ್ಷಕ ಮತ್ತು ಮಾಧ್ಯಮಗಳು ಬೇಕು. ಆದರೆ ಸ್ಥೂಲ ಜಗತ್ತಿನಂತೆ ಇಲ್ಲಿ ನಾವು ಅಥವಾ ನಾವು ನೋಡಬಯಸಲು ಉಪಯೋಗಿಸುವ ಸೂಕ್ಷ್ಮದರ್ಶಕ ಕೇವಲ ವೀಕ್ಷಕರಾಗಿಯಷ್ಟೇ ಇರುತ್ತೇವೆ. ಚಲಿಸುತ್ತಿರುವ ಎಲೆಕ್ಟ್ರಾನೊಂದನ್ನು ಅದರ ಗತಿ ಬದಲಿಸದೆ ಕೇವಲ ನೋಡುತ್ತೇವೆ ಎನ್ನುವುದು ಸಾಧ್ಯವಿಲ್ಲ. ನೋಡುವುದಕ್ಕಾಗಿ ಬಳಸುವ ಮಾಧ್ಯಮ ಎಲೆಕ್ಟ್ರಾನಿನ ಸ್ಥಿತಿಯನ್ನೇ ಬದಲಿಸಿಬಿಡುತ್ತದೆ. ಕ್ವಾಂಟಂ ಭೌತವಿಜ್ಞಾನ ಈ ಸತ್ಯವನ್ನೇ ತನ್ನ ಮೂಲತತ್ವಗಳಲ್ಲಿ ಅಳವಡಿಸಿಕೊಂಡಿದೆ. ಇಷ್ಟೇ ಅಲ್ಲದೆ ಒಂದು ಗುಣವನ್ನು ಅಳೆಯುವ ವ್ಯವಸ್ಥೆಯಲ್ಲಿ ಅಳೆಯಲಾಗದ ಪ್ರತಿಗುಣವೊಂದಿದೆ. ಸೃಷ್ಟಿಯಲ್ಲಿಯೇ ಅಂತರ್ಗತವಾಗಿರುವ ಇಂತಹ ಅನಿಶ್ಚಯತೆಯನ್ನು ಗುರುತಿಸುವುದೂ ವೀಕ್ಷಕನೇ. ಈ ವಿವೇಕವನ್ನು ಬಳಸಿ ಸೂಕ್ತ ವ್ಯವಸ್ಥೆಯನ್ನು ರೂಪಿಸಿ ಎಷ್ಟರ ಮಟ್ಟಿಗೆ ತಾನು ಅಭ್ಯಸಿಸುವ ಕ್ರಿಯೆಯನ್ನು ತನ್ನ ಉಪಕರಣಗಳಿಂದ ನಗಣ್ಯವೆನಿಸುವಷ್ಟು ಕ್ಷೀಣ ಪ್ರಭಾವಕ್ಕೆ ಒಳಪಡಿಸಿ ಎಷ್ಟು ನಿಖರವಾಗಿ ಪರಿಮಾಣಗಳನ್ನು ಅಳೆಯಬಹುದೆಂದು ನಿರ್ಧರಿಸುವ ಸಾಮರ್ಥ್ಯವೂ ಇವನದೇ ಎನ್ನುವುದನ್ನು ಕ್ವಾಂಟಂ ವಿಜ್ಞಾನ ತನ್ನ ಸಿದ್ಧಾಂತದ ಮೂಲಕ ವ್ಯಕ್ತಗೊಳಿಸುತ್ತದೆ. ಹೀಗೆ ಆಧುನಿಕ ಭೌತವಿಜ್ಞಾನ ತನ್ನ ಮುಂದುವರಿದ ಅಧ್ಯಯನದಲ್ಲಿ ವೀಕ್ಷಕರೂ ಕ್ರಿಯೆಯ ಅವಿಭಾಜ್ಯ ಭಾಗವಾಗಿ ಇಡೀ ಸೃಷ್ಟಿಯೇ ವಸ್ತುಸ್ಥಿತಿಗಳನ್ನೂ ನೋಡುಗರನ್ನೂ ಪ್ರತ್ಯಕ್ಷವಾಗಿ ಒಳಗೊಂಡಂತಹ ಕ್ರಿಯಾಸಮುಚ್ಚಯವೆಂದು ಗುರುತಿಸಿದೆ. ದರ್ಶನಗಳಂತೂ ತಮ್ಮೊಳಗೆ ಅನೇಕ ಪ್ರಭೇದಗಳನ್ನು ಹೊಂದಿದ್ದರೂ ಮೇಲಿನ ಅನುಭವವನ್ನೇ ಒಕ್ಕೊರಲಿನಿಂದ ಸಾರಿವೆ. ಜಗತ್ತೇ ನಾಟಕರಂಗ, ನಾವೇ ಪಾತ್ರಧಾರಿಗಳು,



ನಾವೇ ವೀಕ್ಷಕರು ಎನ್ನುವುದೇ ಹಿಂದೂ ಬೌದ್ಧ ದರ್ಶನಗಳ ಅನುಭವಸಾರ. ಕಾಪ್ರ ಇದನ್ನೇ ಎರಡೂ ಜ್ಞಾನಗಳಲ್ಲಿರುವ ಮತ್ತೊಂದು ಸಾಮ್ಯವೆಂದು ಗುರುತಿಸಿ ಪೌರ್ವಾತ್ಯ ದರ್ಶನಗಳು ಒಂದು ಹೆಜ್ಜೆ ಮುಂದೆ ಸಾಗಿ ಸೃಷ್ಟಿಯ ಈ ಸಮ್ಯಕ್ ರಚನೆಯಲ್ಲಿ ಮಾನವ ವಿವೇಕವೂ ಮಿಳಿತವಾಗಿದೆ. ಆದರೆ ವಿಜ್ಞಾನಕ್ಕಿನ್ನೂ ವಿವೇಕವನ್ನು ಒಂದು ಪರಿಮಾಣಾತ್ಮಕ ಗುಣವನ್ನಾಗಿ ನೋಡಲು, ಸೃಷ್ಟಿಯೊಳಗೆ ಅಂತರ್ಗತವಾಗಿದೆಯೆಂದು ತಿಳಿಯಲು ಸಾಧ್ಯವಾಗಿಲ್ಲವೆಂದು ಅಭಿಪ್ರಾಯಪಡುತ್ತಾರೆ.

**ನಿರಂತರ ಬದಲಾವಣೆ** ಪ್ರಕೃತಿಯ ಶಾಶ್ವತ ಸ್ವರೂಪವೆಂದರೆ ನಿರಂತರ ಕ್ರಿಯಾತ್ಮಕ ಬದಲಾವಣೆ ಎಂದು ತಾವೋ ಗ್ರಹಿಸಿದರೆ ಬಲಕ್ಷೇತ್ರಗಳ ನಿರಂತರ ಅಂತರ್‌ಕ್ರಿಯೆ ಎಂದು ಆಧುನಿಕ ಭೌತವಿಜ್ಞಾನ ಗ್ರಹಿಸುತ್ತದೆ.

**ಅಪಭ್ರಂಶ ನೋಟ:** ಸೃಷ್ಟಿಯ ನೈಜರೂಪದ ದರ್ಶನವಾಗಬೇಕಾದರೆ ವಿಶೇಷ ಅಂತರ್ದೃಷ್ಟಿಯಿಂದ ಸಾಧ್ಯ. ಸಾಮಾನ್ಯ ದೃಷ್ಟಿಗೆ ಗೋಚರವಾಗುವುದು ಸೃಷ್ಟಿಯ ನೈಜರೂಪವಲ್ಲ ಕೇವಲ ಅದರ ಅಪಭ್ರಂಶವೆಂದು ಸುಮಾರು ಎಲ್ಲ ದರ್ಶನಗಳೂ ಅರುಹುತ್ತವೆ. ಆಧುನಿಕ ಭೌತವಿಜ್ಞಾನದಲ್ಲಿನ ಸಾಪೇಕ್ಷ ಸಿದ್ಧಾಂತವೂ ಕೂಡ ಸೃಷ್ಟಿಯ ಘಟನೆಗಳನ್ನು ಕಾಲದೇಶಗಳೆರಡನ್ನೂ ಒಳಗೊಂಡ 4 ದಿಶೆಯ ಚೌಕಟ್ಟಿನಲ್ಲಿ ಸರಿಯಾಗಿ ಗ್ರಹಿಸಬಹುದು ಎನ್ನುತ್ತ ನಮ್ಮ ಸಾಮಾನ್ಯ ಗ್ರಹಿಕೆ 3 ದಿಶೆಯ ದೇಶವನ್ನುಳ್ಳ ಚೌಕಟ್ಟನ್ನು ಆಧರಿಸಿದೆ, ಇದರಿಂದಾಗಿ ನಮ್ಮ ವಿವರಣೆ ನಿಖರವಾಗಿರದೆ ಅಂದಾಜಾಗಿದ್ದು ಅನೇಕ ಸಾರಿ ಅಪೂರ್ಣವೂ ದೋಷಯುಕ್ತವೂ ಆಗಿರುತ್ತದೆ ಎಂದು ಹೇಳುವ ಮೂಲಕ ದರ್ಶನಗಳ ಅನುಭವವನ್ನೇ ವಿಜ್ಞಾನವೂ ಪ್ರತಿಧ್ವನಿಸಿದೆ ಎನ್ನಿಸುತ್ತದೆ.

**7. ಸಾರಾಂಶ** ಆಧುನಿಕ ಭೌತವಿಜ್ಞಾನಕ್ಕೂ ಪೌರ್ವಾತ್ಯ ದರ್ಶನಗಳಿಗೂ ಇರುವ ಸಾಮ್ಯಗಳನ್ನು ಕಾಪ್ರ ತಮ್ಮ ಕೃತಿಯಲ್ಲಿ ಗುರುತಿಸಿದ್ದನ್ನು ಕುರಿತು ಇಲ್ಲಿ ಪ್ರಸ್ತಾಪಿಸಿದೆ. ತಾರ್ಕಿಕ ನೋಟವನ್ನು ಬೀರಿ ವಿಜ್ಞಾನಿ ಹೊರಜಗತ್ತಿನ ವಿಶ್ಲೇಷಣೆ ಮಾಡಿದರೆ ದಾರ್ಶನಿಕರು ಭಾವನಾತ್ಮಕ ಒಳನೋಟಗಳನ್ನು ಬೆಂಬತ್ತಿ ಅನುಭವಗಳನ್ನು ಪಡೆದಿದ್ದಾರೆ. ಭಿನ್ನದಾರಿಗಳಲ್ಲಿ ಸಾಗಿದರೂ ವಿಶ್ವಕ್ಕೊಂದು ನೈಜಸ್ಥಿತಿಯಿದೆ. ಅದನ್ನು ಪರಿಪೂರ್ಣವಾಗಿ ಕಾಣಬೇಕೆನ್ನುವುದೇ ಇಬ್ಬರ ಏಕೈಕ ಆಂತಿಕ ಗುರಿ. ಒಂದು ಹೋಲಿಕೆಯಿಟ್ಟು ಹೇಳುವುದಾದರೆ ವಿಶ್ವವೆಂಬ ವೃಕ್ಷವನ್ನು ಅರಿಯಲು ವಿಜ್ಞಾನಿಗಳು ರೆಂಬೆ ಕೊಂಬೆಗಳನ್ನು ಅಧ್ಯಯನ ಮಾಡಿದರೆ ದಾರ್ಶನಿಕರು ಬೇರುಗಳನ್ನು ಹಿಡಿದರೆನ್ನಬಹುದು. 20ನೆಯ ಶತಮಾನದ ಪೂರ್ವದಲ್ಲಿದ್ದ ಭೌತವಿಜ್ಞಾನವೂ ಇದೇ ಗುರಿಯನ್ನಿಟ್ಟುಕೊಂಡು ಸಾಗಿತ್ತಾದರೂ ಮುಂದುವರಿದ ವೈಜ್ಞಾನಿಕ ಪ್ರಯೋಗಗಳೇ ಅದರ ತತ್ವಗಳಲ್ಲಿನ ದೋಷಗಳನ್ನೂ ಮಿತಿಗಳನ್ನೂ ಪ್ರಮಾಣಿಸಿ ತೋರಿಸಿದವು. ಆದರೆ ಆ ಸಂದರ್ಭದಲ್ಲಿಯೇ ಸಂಕ್ರಮಣ ಸ್ಥಿತಿಯಲ್ಲಿಯೇ ರೂಪುಗೊಂಡ ಆಧುನಿಕ ಭೌತವಿಜ್ಞಾನ

ತನ್ನ ಹೊಚ್ಚ ಹೊಸ ಹಾಗೂ ಪರಿಷ್ಕೃತ ನಿಯಮಗಳ ಬೆಳಕಿನಲ್ಲಿ ಜಗತ್ತಿನ ಸೂಕ್ಷ್ಮ ಹಾಗೂ ಸ್ಥೂಲ ರಚನೆಗಳೆಲ್ಲವನ್ನೂ ಅರಿತುಕೊಳ್ಳುವ ಪ್ರಯತ್ನಗಳಿಗೆ ಕೈಹಾಕಿ ಯಶಸ್ಸು ಗಳಿಸಲಾರಂಭಿಸಿತು. ಇಂತಹ ಯಶಸ್ಸಿಗೆ ಕಾರಣರಾದ ಅನೇಕ ವಿಜ್ಞಾನಿಗಳು ಪೌರ್ವಾತ್ಯ ದರ್ಶನಗಳನ್ನು ಅಧ್ಯಯನ ಮಾಡಿದಾಗ ಅಲ್ಲಿನ ಅನುಭವಗಳಲ್ಲೂ ವೈಜ್ಞಾನಿಕ ನಿಲುವುಗಳಲ್ಲೂ ಸಾಮ್ಯಗಳೆಂದು ತೋರಿದ್ದನ್ನು ವಿವಿಧ ಸಂದರ್ಭಗಳಲ್ಲಿ ಪ್ರಾಸಂಗಿಕವಾಗಿ ಪ್ರಸ್ತಾಪಿಸಿದ್ದರು. ಆಧುನಿಕ ಭೌತವಿಜ್ಞಾನದಲ್ಲೇ ಸಾಕಷ್ಟು ಸಂಶೋಧನೆಗೈದಿದ್ದ ಕಾಪ್ರ ಹಲವು ವರ್ಷಗಳ ಕಾಲ ಎರಡೂ ಜ್ಞಾನದಾಗರಗಳನ್ನು ಆಸಕ್ತಿಯಿಂದ ಅಧ್ಯಯನ ಮಾಡಿ ಹಿರಿಯ ವಿಜ್ಞಾನಿಗಳಲ್ಲದೆ ಸ್ವತಃ ತಾವೂ ಕಂಡ ಸಾಮ್ಯಗಳನ್ನು ವಿವರಣಾತ್ಮಕವಾಗಿ 'ದಿ ತಾವೋ ಆಫ್ ಫಿಸಿಕ್ಸ್' ಕೃತಿಯಲ್ಲಿ ದಾಖಲಿಸಿದ್ದಾರೆ. ಎರಡೂ ಜ್ಞಾನಗಳಲ್ಲಿನ ತಾತ್ವಿಕ ನೆಲೆಗಟ್ಟುಗಳನ್ನು ಓದುಗರಿಗೆ ಪರಿಚಯಿಸಿ ಸಾಮ್ಯಗಳನ್ನು ವ್ಯಾಖ್ಯಾನಿಸಿದ್ದೇನೆಯೇ ಹೊರತು ಕಟ್ಟುನಿಟ್ಟಾಗಿ ಪ್ರಮಾಣೀಕರಿಸಿಲ್ಲವೆಂದು ವಿನೀತವಾಗಿ ಹೇಳುವ ಕಾಪ್ರ ತಮ್ಮ ಅನುಭವವೇ ಓದುಗರಿಗೂ ಆಗಬಹುದೆಂಬ ವಿಶ್ವಾಸ ಹೊಂದಿದ್ದಾರೆ. ಸಾಮ್ಯಗಳನ್ನು ಪರಿಶೋಧಿಸುವ ಉದ್ದೇಶದಿಂದ ಹೊರಡುವ ಕಾಪ್ರ ತಮ್ಮ ಕೃತಿಯಲ್ಲೊಂದು ಕಡೆ ವಿಜ್ಞಾನ ಮತ್ತು ದರ್ಶನ ಮನಸ್ಸಿನ ಅಥವಾ ವಿವೇಕದ ಪರಸ್ಪರ ಪೂರಕ ರೂಪಗಳು. ವಿಜ್ಞಾನಕ್ಕೆ ದರ್ಶನ ಬೇಕಿಲ್ಲ, ದರ್ಶನಕ್ಕೆ ವಿಜ್ಞಾನ ಬೇಕಿಲ್ಲ ಎಂದು ವಿಜ್ಞಾನಿಯಂತೆ ನಿರ್ಭಾವುಕರಾಗಿ ಖಡಾಖಂಡಿತವಾಗಿ ನುಡಿದರೂ, ಮಾನವರಿಗೆ ಆಂತರ್ಯದ ಸ್ವರೂಪವನ್ನು ತಿಳಿಯಲು ದರ್ಶನ ಬೇಕು, ಆಧುನಿಕ ಬದುಕಿಗಾಗಿ ವಿಜ್ಞಾನ ಬೇಕು ಎನ್ನುವಲ್ಲಿ ದಾರ್ಶನಿಕರಂತೆ ನುಡಿಯುತ್ತಾರೆ ಎನಿಸುತ್ತದೆ. ವೈಜ್ಞಾನಿಕಭಾವವು ತಾರ್ಕಿಕ, ಆಕ್ರಮಣಕಾರಕ ಮತ್ತು ಪುರುಷ ಪ್ರವೃತ್ತಿಯುಳ್ಳದ್ದಾದರೆ ದಾರ್ಶನಿಕಭಾವವು ಸಹೃದಯತೆಯ, ಮೃದುತ್ವದ ಹಾಗೂ ಸ್ತ್ರೀ ಪ್ರವೃತ್ತಿಯುಳ್ಳದ್ದೆಂದು ಪರಿಗಣಿಸುವ ಕಾಪ್ರ ವೈಜ್ಞಾನಿಕ ಮನೋಭಾವನೆಯನ್ನೇ ಮುಂದಿಟ್ಟುಕೊಂಡು ಯಾಂತ್ರಿಕವೂ ವಿಭಜಿತವೂ ಆಗಿರುವಂತಹ ಸಾಮಾಜಿಕ ವ್ಯವಸ್ಥೆಯೆಡೆಗೆ ಇಡೀ ಸಮಷ್ಟಿಯ ಬದುಕು ಧಾವಿಸುತ್ತಿದೆ. ದಾರ್ಶನಿಕ ಭಾವವನ್ನೂ ಒಳಗೊಂಡಂತಹ ನಡತೆಗಳನ್ನು ಅಳವಡಿಸಿಕೊಂಡು ಸಾಗುವಂತಾದರೆ ಪ್ರಕೃತಿಯಲ್ಲಿನ ಪರಿಪೂರ್ಣತೆಯನ್ನೂ ನಮ್ಮೆಲ್ಲರ ಬದುಕಿನಲ್ಲಿ ಸಾಮರಸ್ಯವನ್ನೂ ಕಾಣಲು ಸಾಧ್ಯವೆಂಬ ಆಶಾಭಾವನೆಯನ್ನು ಕೃತಿಯ ಕೊನೆಯಲ್ಲಿ ವ್ಯಕ್ತಪಡಿಸುತ್ತಾರೆ.

ಹನ್ನೆರಡನೆಯ ಶತಮಾನದಲ್ಲೊಂದು ಕ್ರಾಂತಿಯಾಗಿ ಬಸವಣ್ಣ ಅಲ್ಲಮ ಅಕ್ಕಮಹಾದೇವಿಯವರೇ ಮುಂತಾದವರಿಂದ ಹೊಸ ದರ್ಶನವೊಂದು ಈ ನಾಡಿನಲ್ಲಿ ಮೈದಳೆದಿತ್ತು. ಮುಕ್ತ ಚಿಂತನೆಗಳ ಮೂಲಕ ಲೌಕಿಕದಲ್ಲಿ ಕಾಯಕನಿಷ್ಠರಾಗಿ ವೈಚಾರಿಕ



ದಾರ್ಶನಿಕ ನಿಲುವುಗಳೆರಡನ್ನೂ ಅನುಭವಮಂಟಪದ ಅಂಗಳದಲ್ಲಿ ಮುಖಾಮುಖಿಯಾಗಿಸಿ, ಜಂಗಮಕ್ಕೆ ತಮ್ಮನ್ನು ಅರ್ಪಿಸಿಕೊಂಡು ಶರಣತ್ವ ಪಡೆದ ಈ ಮಹಾಚೇತನಗಳು, ಕಾಲವನ್ನು ಬದಿಗಿಟ್ಟು ನೋಡುವುದಾದರೆ, ಕಾಪ್ರರ ಆಶಯಗಳಿಗೆ ಸಾಕ್ಷಿಯೆಂಬಂತೆ ಪರಿಪೂರ್ಣವಾಗಿ ಬದುಕಿದ್ದರು ಎನ್ನುವುದಕ್ಕೆ ಇತಿಹಾಸವೇ ಸಾಕ್ಷಿಯಾಗಿದೆ. ಎರಡೂ ಜ್ಞಾನಗಳು ಶರಣರ ಬದುಕಿನಲ್ಲಿ ಸಮ್ಮಿಳಿತವಾಗಿತ್ತು ಎನ್ನುವುದಕ್ಕೆ ಬಸವಣ್ಣನವರ ಮುಂದಿನ ವಚನವನ್ನೇ ಗಮನಿಸಬಹುದು. **'ಅಯ್ಯಾ ನೀನು ನಿರಾಕಾರವಾಗಿದ್ದಲ್ಲಿ ನಾನು ಜ್ಞಾನವೆಂಬ ವಾಹನವಾಗಿದ್ದೆ ಕಾಣಾ, ಅಯ್ಯಾ ನೀನು ಆಕಾರವಾಗಿದ್ದಲ್ಲಿ ನಾನು ವೃಷಭನೆಂಬ ವಾಹನವಾಗಿದ್ದೆ ಕಾಣಾ, ಅಯ್ಯಾ ನೀನು ನಾಟ್ಯಕ್ಕೆ ನಿಂದಲ್ಲಿ ನಾನು ಚೈತನ್ಯವೆಂಬ ವಾಹನವಾಗಿದ್ದೆ ಕಾಣಾ, ಅಯ್ಯಾ ನೀನೆನ್ನ ಭವವ ಕೊಂದಹೆನೆಂದು ಜಂಗಮ ಲಾಂಛನವಾಗಿ ಬಂದಲ್ಲಿ, ನಾನು ಭಕ್ತನೆಂಬ ವಾಹನವಾಗಿದ್ದೆ ಕಾಣಾ, ಕೂಡಲಸಂಗಮದೇವಾ'**. ಹಾಗೆಯೇ **'ಕ್ಷಯಿಸೆ ಶಿವೇತರ ಕೃತಿ ಕೃತಿಯಲ್ಲಿ, ಮೂಡಲಿ ಮಂಗಳ ಮತಿ ಮತಿಯಲ್ಲಿ, ಕವಿ ಋಷಿ ಸಂತರ ಆದರ್ಶದಲಿ ಸರ್ವೋದಯವಾಗಲಿ ಸರ್ವರಲಿ'** ಎಂದು ರಾಷ್ಟ್ರಕವಿ ಕುವೆಂಪು ಹೊಂದಿದ್ದ ಆಶಯವನ್ನೇ ಕಾಪ್ರ ತಾವೂ ಪುನರುಚ್ಚರಿಸಿದ್ದಾರೆ ಎನ್ನಿಸುತ್ತದೆ.

ಆಸೆ ರೋಷ ಹರುಷಾದಿಗಳೆಂಬ ಕರಣೇಂದ್ರಿಯವ ಮುಟ್ಟಲೀಯದೆ
ಆಚಾರವ ಶಿವಾಚಾರವ ಮಾಡುವೆ ;
ಭಯಭಕ್ತಿಯಿಂದ ತೋಱುವೆ ಮನದಲ್ಲಿ ವಂಚನೆಯಿಲ್ಲದೆ ;
ಭಾವಶುದ್ಧಪೂಜೆಯ ಮಾಡುವೆ
ಎನ್ನ ಪ್ರಾಣಶಕ್ತಿಯಿಂದ ಕೂಡುವೆ
ಕೂಡಲಸಂಗಮದೇವರ.

-ಬಸವಣ್ಣ

# ಮೈಸೂರು ಜಿಲ್ಲೆಯ ವೀರಶೈವ ಮಠಗಳ ಸಾಂಸ್ಕೃತಿಕ ಕೊಡುಗೆ

ವೀರಭದ್ರಸ್ವಾಮಿ

ಸಮಾಜದಲ್ಲಿ ಈ ಅನಿಷ್ಟ ಪದ್ಧತಿಗಳನ್ನು ತಿದ್ದಿ ಜನತೆಯನ್ನು ಸನ್ಮಾರ್ಗಕ್ಕೆ ತರುವುದರಲ್ಲಿ ಮಠಗಳ ಪಾತ್ರ ತುಂಬಾ ಮಹತ್ತರವಾದುದು. ಈ ದಿಶೆಯಲ್ಲಿ ವೀರಶೈವ ಮಠಗಳು ಶತಶತಮಾನಗಳಿಂದಲೂ ಜನತೆಯ ಭೌತಿಕ ಮತ್ತು ಪಾರಮಾರ್ಥಿಕ ಬಾಳನ್ನು ಬೆಳಗಿಸಿ, ಮಾನವನ ಕಲ್ಯಾಣಕ್ಕೆ ಮೀಸಲಾಗಿರುವುದನ್ನು ಗಮನಿಸಬಹುದು. ಅಕ್ಷರ ಜ್ಞಾನ, ನೈತಿಕ, ಸಾಂಸ್ಕೃತಿಕ ಹಾಗೂ ಧಾರ್ಮಿಕ ಶಿಕ್ಷಣವನ್ನು ಕೊಡುವ ಕಾರ್ಯವನ್ನು ಮಠಗಳು ಪ್ರತಿ ಹಳ್ಳಿ ಹಳ್ಳಿಯಲ್ಲೂ ಮಾಡುತ್ತಲೇ ಬಂದಿವೆ. ಅಂತಹ ಮಠಗಳಲ್ಲಿ ಮೈಸೂರು ಪ್ರಾಂತ್ಯಕ್ಕೆ ಸೇರಿದ ಶ್ರೀ ಸುತ್ತೂರು ಮಠ, ಶ್ರೀ ದೇವನೂರು ದಾಸೋಹ ಮಠ, ಶ್ರೀ ಹೊಸ ಮಠ, ಶ್ರೀ ಮಲ್ಲನಮೂಲೆ ಮಠ, ಮಾಡ್ರಳ್ಳಿ ಮಠ, ಶ್ರೀ ವಾಟಾಳು ಮಠ ಹೀಗೆ ಇನ್ನೂ ಹಲವಾರು ಮಠಗಳು ಈ ಕಾಯಕವನ್ನು ನಿರಂತರವಾಗಿ ನಡೆಸುತ್ತ ಸಮಾಜದಲ್ಲಿನ ರಜೋಗುಣವನ್ನು ಹೋಗಲಾಡಿಸುವತ್ತ ಗಮನವನ್ನು ಕೇಂದ್ರೀಕರಿಸಿವೆ.

ಧಾರ್ಮಿಕ ಮತ್ತು ಸಾಮಾಜಿಕ ಬದಲಾವಣೆಗೆ ನೈತಿಕ ಮೌಲ್ಯ, ಗುಣಾತ್ಮಕ ಜೀವನ, ಮುಂತಾದ ಬದುಕಿನ ಮಾನವೀಯ ಮೌಲ್ಯಗಳನ್ನು ಬಿತ್ತರಿಸುವ ಮತ್ತು ಆಚರಿಸುವ ಕಾರ್ಯವನ್ನು ಯಶಸ್ವಿಯಾಗಿ ಈ ಮಠಗಳು ಮಾಡುತ್ತಿವೆ. ಯಾವುದೇ ಒಂದು ದೇಶ ಬಲಿಷ್ಠವಾಗಿ ಸದೃಢವಾಗಬೇಕಾದರೆ ಅದು ಧಾರ್ಮಿಕವಾಗಿ, ಸಾಮಾಜಿಕವಾಗಿ, ಆರ್ಥಿಕವಾಗಿ ಮತ್ತು ರಾಜಕೀಯವಾಗಿ ಈ ನಾಲ್ಕು ಮುಖಗಳಲ್ಲಿಯೂ ಅಭಿವೃದ್ಧಿ ಯನ್ನು ಹೊಂದಬೇಕಾಗುತ್ತದೆ. ಇವುಗಳು ಒಂದಕ್ಕೊಂದು ಸಮತೋಲನ ಕಾಪಾಡಿ ಕೊಂಡು ಹೋದಾಗ ಮಾತ್ರ ಸ್ವಸ್ಥ ಸಮಾಜ ನಿರ್ಮಾಣವಾಗುತ್ತದೆ; ಇಲ್ಲದೆ ಹೋದರೆ ನಮ್ಮ ಸಮಾಜದ ಜೀವನದ ಗತಿಯೇ ಬದಲಾಗಿಬಿಡುತ್ತದೆ. ಆದಕಾರಣ ನಾವು ನಮ್ಮ ಧಾರ್ಮಿಕ ಮತ್ತು ಸಾಮಾಜಿಕ ಪರಂಪರೆಗಳ ಕಡೆಗೆ ಸಿಂಹಾವಲೋಕನ ಮಾಡುವ ಜವಾಬ್ದಾರಿಯನ್ನು ರೂಢಿಸಿಕೊಳ್ಳಬೇಕಾಗುತ್ತದೆ. ಪಾಪಭೀತಿ, ಧರ್ಮಶ್ರದ್ಧೆಯಿಲ್ಲದೆ ಹೆಚ್ಚು ಹೆಚ್ಚು ತಪ್ಪು ಮಾಡುವುದು ಮಾನವಸಹಜವಾದ ಗುಣವಾಗಿರುವುದರಿಂದ ಪ್ರಜ್ಞಾವಂತರ ಮನಸ್ಸು ಆಗಾಗ ತಂತಾನೇ ಧಾರ್ಮಿಕ ಮತ್ತು ಸಾಮಾಜಿಕ ಚಿಂತನೆಗಳಿಗೆ ತೊಡಗುವುದುಂಟು.



ಇತ್ತೀಚೆಗೆ ಜನರಲ್ಲಿ ಧಾರ್ಮಿಕ ಅಂಧಾನುಕರಣೆ ಮೌಢ್ಯತೆ ಜಾಸ್ತಿಯಾಗಿ ನೈತಿಕ ಮೌಲ್ಯಗಳು ಕಣ್ಮರೆಯಾಗಿವೆ. ಅದಲ್ಲದೆ ಸಾಮಾಜಿಕವಾಗಿ ಮಾನವರಲ್ಲಿ ನಂಬಿಕೆ, ಸತ್ಯ, ಅಹಿಂಸೆ ನಾಶವಾಗಿವೆ. ಇಂಥ ವಿಪ್ಲವ ಕಾಲದಲ್ಲಿ ನಮ್ಮ ಮಠಗಳು ಮನುಷ್ಯನಲ್ಲಿ ಮೃಗೀಯ ಗುಣವನ್ನು ಹೋಗಲಾಡಿಸಿ ಧಾರ್ಮಿಕ ಮತ್ತು ಸಾಮಾಜಿಕ ಬೆಳವಣಿಗೆಗೆ ಸೂಕ್ತ ವಾತಾವರಣ ಕಲ್ಪಿಸಿ ಹಂಚಿತಿನ್ನುವ, ಸಹಬಾಳ್ವೆ ಮಾಡುವ ದಾಸೋಹದ ಕಲ್ಪನೆ ಹಾಗೂ ಕಾಯಕದ ಕಲ್ಪನೆಗಳನ್ನು ಮೂಡಿಸುವಲ್ಲಿ ಜಾಗೃತವಾಗಿವೆ.

ವೀರಶೈವ ಮಠಗಳು ಹಿಂದಿನಿಂದಲೂ ಸಮಾಜದ ಅವಿಭಾಜ್ಯ ಅಂಗಗಳಾಗಿ ಸಮಾಜದ ಸದಸ್ಯರೊಡನೆ ವಿವಿಧ ಸಂಬಂಧಗಳನ್ನು ಹೊಂದಿದ್ದವು. ಸಾಮಾಜಿಕ ಜೀವನವು ವಿಕಾಸವಾಗುತ್ತಾ ಹೋದಂತೆ ಮಠಗಳ ಕಾರ್ಯಕ್ಷೇತ್ರವು ಬೆಳೆಯುತ್ತಾ ಹೋಯಿತು. ಜೀವನವು ಸರಳವಿದ್ದಾಗ, ಮಠಗಳ ಕಾರ್ಯಕ್ಷೇತ್ರವೂ ಬಹುತೇಕವಾಗಿ ಧಾರ್ಮಿಕ ವಿಷಯಗಳಿಗೆ ಮಾತ್ರ ಸೀಮಿತವಾಗಿತ್ತು. ಜನರ ಬಯಕೆಗಳು ಹೆಚ್ಚಿದಂತೆ, ಲೌಕಿಕ ಜೀವನದ ಅಗತ್ಯತೆಗಳು ಬೆಳೆದಂತೆ, ಸಾಮಾಜಿಕ ಜೀವನವು ಸಂಕೀರ್ಣವಾಯಿತು. ಹೀಗೆ ಸಾಮಾಜಿಕ ಜೀವನವು ಸರಳತೆಯಿಂದ ಸಂಕೀರ್ಣತೆಗೆ ವಿಕಾಸವಾದಂತೆ, ವೀರಶೈವ ಮಠಗಳ ಕಾರ್ಯಕ್ಷೇತ್ರವೂ ವಿಕಾಸವಾಗಬೇಕಾಗಿ ಬಂತು.

ಮೈಸೂರು ಜಿಲ್ಲೆಯಲ್ಲಿ ಹೆಸರಾಂತ ವೀರಶೈವ ಮಠಗಳು ಧಾರ್ಮಿಕವಾಗಿ ಮತ್ತು ಸಾಮಾಜಿಕವಾಗಿ ನೀಡಿರುವ ಕೊಡುಗೆ ಅನನ್ಯವಾದುದು. ಸಾಮೂಹಿಕ ದೀಕ್ಷೆ ನೀಡಿ ಸಮಾಜದಲ್ಲಿನ ಮೇಲು ಕೀಳಿನ ಅಂತರ ಕಡಿಮೆ ಮಾಡಲು ಕಾರ್ಯಕ್ರಮ ನಡೆಸಿವೆ. ಅಲ್ಲದೆ ಈ ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವಂಥ ಹಬ್ಬಹರಿದಿನಗಳನ್ನು ಮಠಾಧಿಪತಿಗಳ ಸಮ್ಮುಖದಲ್ಲಿ ಜಾತಿ ಮತ ಭೇದವಿಲ್ಲದೆ ಆಚರಿಸುತ್ತಿರುವುದನ್ನು ಆ ಮೂಲಕ ಜನರಲ್ಲಿ ಸೌಹಾರ್ದಯುತ ಭಾವನೆ ಬೆಳೆಸುತ್ತಿರುವುದನ್ನೂ ನಾವು ಗಮನಿಸಬಹುದು. ಪೀಠದ ಹಿರಿಯ ಶ್ರೀಗಳ ಜಯಂತಿ ಮತ್ತು ಆರಾಧನಾ ಉತ್ಸವಗಳು, ಇದರ ಸ್ಮರಣಾರ್ಥ ನಡೆಸುವ ರಕ್ತದಾನ ಶಿಬಿರ, ಆರೋಗ್ಯ ತಪಾಸಣಾ ಶಿಬಿರ ಮುಂತಾದ ಸೇವೆಗಳ ಮೂಲಕ ನಿರೋಗ ಸಮಾಜವನ್ನು ಕಟ್ಟುವ ಕೆಲಸವನ್ನು ಮಾಡುತ್ತಿವೆ.

ಸುತ್ತೂರಿನ ಜಗದ್ಗುರು ಶ್ರೀ ಶಿವರಾತ್ರೀಶ್ವರ ಮಠವು ವೀರಶೈವ ಧರ್ಮ ಸಂಸ್ಕೃತಿ ಯನ್ನು ಬೆಳೆಸುವಲ್ಲಿ ಪ್ರಮುಖ ಪಾತ್ರ ವಹಿಸಿದೆ. ಮೈಸೂರು ಪ್ರಾಂತ್ಯದ ಸುತ್ತಮುತ್ತ ಇರುವ ವೀರಶೈವ ಧರ್ಮದವರಿಗೆ ಲಿಂಗಧಾರಣೆಗಾಗಿ ಸಾಮೂಹಿಕ ದೀಕ್ಷಾ ಕಾರ್ಯಕ್ರಮ ವನ್ನು ಆಯೋಜಿಸುತ್ತಿದೆ. ಯುವಕರಲ್ಲಿ ಧರ್ಮದ ಬಗ್ಗೆ, ಕಾಯಕದ ಬಗ್ಗೆ ಅರಿವು ಮೂಡಿಸುವಂತ ಕೆಲಸ ಮಾಡುತ್ತಿದೆ. ಸಾಮೂಹಿಕ ವಿವಾಹ, ಶ್ರಾವಣಮಾಸದ ಪ್ರವಚನ, ವಸ್ತುಪ್ರದರ್ಶನ, ಶರಣ ಸಂದೇಶ, ಇತ್ಯಾದಿ ಧಾರ್ಮಿಕ, ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳು ವರ್ಷಕ್ಕೆ ಎರಡು ಮೂರು ಬಾರಿಯಾದರು ಈ ಮಠಗಳ

ಆಶ್ರಯದಲ್ಲಿ ನಡೆಯುವುದನ್ನು ಗಮನಿಸಬಹುದು.

ಶ್ರೀಮಠದ ಮೈಸೂರು ಶಾಖೆ ಪ್ರತಿ ತಿಂಗಳು ಹುಣ್ಣಿಮೆ ದಿನದಂದು ಪ್ರಸಿದ್ಧ ಸಂಗೀತ ವಿದ್ವಾಂಸರಿಂದ ಬೆಳದಿಂಗಳ ಸಂಗೀತ ಕಾರ್ಯಕ್ರಮವನ್ನು ಅನೇಕ ವರ್ಷಗಳಿಂದಲೂ ನಿರಂತರವಾಗಿ ನಡೆಸಿಕೊಂಡು ಬರುತ್ತಿದೆ. ಪ್ರತಿ ವರ್ಷ ಶ್ರೀಮಠದ ವತಿಯಿಂದ ಅದ್ದೂರಿಯಾಗಿ ಸುತ್ತೂರು ಜಾತ್ರಾ ಮಹೋತ್ಸವವು ಆರು ದಿನಗಳ ಕಾಲ ವಿಜೃಂಭಣೆಯಿಂದ ನಡೆಯುತ್ತದೆ. ಹಾಲರವಿ ಉತ್ಸವ, ಶ್ರೀ ವೀರಭದ್ರೇಶ್ವರ ಕೊಂಡೋತ್ಸವ, ಶ್ರೀ ಸೋಮೇಶ್ವರಸ್ವಾಮಿ ಕುಂಭಾಭಿಷೇಕ ಮತ್ತು ಉತ್ಸವ ಹಾಗೂ ಸಾಮೂಹಿಕ ವಿವಾಹ, ರಥೋತ್ಸವ, ತೆಪ್ಪೋತ್ಸವ ಮತ್ತು ಕೊನೆಯಲ್ಲಿ ಅನ್ನಬ್ರಹ್ಮೋತ್ಸವ ಇತ್ಯಾದಿ. ಸುತ್ತೂರು ಜಾತ್ರಾ ಸಂದರ್ಭದಲ್ಲಿ ಸಾಮಾಜಿಕ ಮತ್ತು ಧಾರ್ಮಿಕ ಕ್ಷೇತ್ರಕ್ಕೆ ಸಂಬಂಧಿಸಿದ ಅನೇಕ ಚಟುವಟಿಕೆಗಳು ನಡೆಯುತ್ತವೆ. ದನಗಳ ಪರಿಷೆಯನ್ನು ಏರ್ಪಡಿಸಿ ಉತ್ತಮ ರಾಸುಗಳಿಗೆ ಬಹುಮಾನ ನೀಡಲಾಗುತ್ತದೆ. ಅಲ್ಲದೆ ಈ ಜಾತ್ರೆಯಲ್ಲಿ ಪ್ರಸಿದ್ಧವಾದ ವಸ್ತುಪ್ರದರ್ಶನ, ಕಲೆ, ಸಾಹಿತ್ಯ, ಸಂಗೀತ ಮತ್ತು ಕೃಷಿಗೆ ಸಂಬಂಧಿಸಿದ ಅನೇಕ ಮಾದರಿಗಳನ್ನು ರೈತರಿಗೆ ಪರಿಚಯಿಸಲಾಗುತ್ತದೆ. ಇದೇ ಸಂದರ್ಭದಲ್ಲಿ ನಾಡಿನ ಪ್ರಸಿದ್ಧ ಮಠಾಧೀಶರು ಮತ್ತು ಚಿಂತಕರಿಂದ ಧಾರ್ಮಿಕ ಉಪನ್ಯಾಸ ಗೋಷ್ಠಿ ಏರ್ಪಡಿಸಲಾಗುತ್ತದೆ. ಅಲ್ಲದೆ ಈ ಸಂದರ್ಭದಲ್ಲಿ ಸಾಮೂಹಿಕ ವಿವಾಹ ಏರ್ಪಡಿಸಿ ಸರಳ ವಿವಾಹಕ್ಕೆ ಪ್ರೋತ್ಸಾಹ ನೀಡುತ್ತಿದೆ. ತೆಪ್ಪೋತ್ಸವದ ದಿನ ಸಿಡಿಸುವ ಸಿಡಿಮದ್ದು ಮತ್ತು ಪಟಾಕಿ ಚಿತ್ತಾರ ಭಕ್ತರ ಮನದಲ್ಲಿ ಅಚ್ಚಳಿಯದಂತಿದೆ.

ಪ್ರತಿ ತಿಂಗಳ ಹತ್ತನೇ ತಾರೀಖಿನಂದು ಶ್ರೀಮಠ ಸುತ್ತೂರು ಕ್ಷೇತ್ರದಲ್ಲಿ ಸಾಮೂಹಿಕ ವಿವಾಹ ಏರ್ಪಡಿಸುತ್ತಾ ಬಂದಿದೆ. ಪ್ರತಿ ಅಮಾವಾಸ್ಯೆಯ ದಿನಗಳಲ್ಲಿ ವಿಶೇಷ ಪೂಜೆ ಏರ್ಪಡಿಸಲಾಗುತ್ತದೆ.

ಪ್ರತಿವರ್ಷ ಶ್ರಾವಣ ಮಾಸದಲ್ಲಿ ವಿಶೇಷಪೂಜೆ ಮೈಸೂರು ಮತ್ತು ಸುತ್ತೂರು ಮಠದಲ್ಲಿ ಏಕಕಾಲಕ್ಕೆ ಆರಂಭವಾಗುತ್ತದೆ. ಈ ಸಂದರ್ಭದಲ್ಲಿ ವಿಶೇಷ ಪ್ರವಚನ ಏರ್ಪಡಿಸಿ ಶರಣ ಭಕ್ತರ ಧಾರ್ಮಿಕ ಹಸಿವನ್ನು ಹಿಂಗಿಸುವ ಕಾರ್ಯ ಮಾಡುತ್ತಿದೆ.

ಆಗಸ್ಟ್ ತಿಂಗಳು ಸುತ್ತೂರು ಮಠದಲ್ಲಿ ಮರೆಯಲಾರದ ತುಂಬಾ ಮುಖ್ಯವಾದ ಮಾಸ. ಈ ಮಾಸದಲ್ಲೆ ಶ್ರೀ ಸುತ್ತೂರು ಪೀಠದ 23ನೇ ಜಗದ್ಗುರುಗಳಾದ ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳ ಜಯಂತಿ ಮಹೋತ್ಸವ, ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮಿಗಳವರ ಸಂಸ್ಮರಣ ಸಂಗೀತ ಸಮ್ಮೇಳನ, ಮೈಸೂರು ನಗರದ ಸಂಗೀತ ರಸಿಕರಿಗೆ ರಸದೌತಣ ನೀಡುವ ಕಾರ್ಯಕ್ರಮವಾಗಿರುತ್ತದೆ. ನಾಡಿನ, ರಾಷ್ಟ್ರದ ಶ್ರೇಷ್ಠ ಕಲಾವಿದರು ಇದರಲ್ಲಿ ಭಾಗವಹಿಸುತ್ತಾರೆ. ಸಂಗೀತ ಕ್ಷೇತ್ರದ ಬಹುದೊಡ್ಡ ಸಾಧಕರಿಗೆ ಪ್ರಶಸ್ತಿ ಪ್ರದಾನವೂ ನಡೆಯುತ್ತದೆ.



ಕಾರ್ತಿಕ ಮಾಸದ ನಂತರ ಬರುವ ಶಿವದೀಪೋತ್ಸವ ಕಾರ್ಯಕ್ರಮವನ್ನು ಧಾರ್ಮಿಕ ವಿಧಿವಿಧಾನಗಳಿಗನುಗುಣವಾಗಿ ಆಚರಿಸಲಾಗುತ್ತದೆ. ನಂತರದ ದಿನಗಳಲ್ಲಿ ಶ್ರೀಮಠದಲ್ಲಿ ಧನುರ್ಮಾಸ ವಿಶೇಷ ಪೂಜಾರಂಭವಾಗಿ ಒಂದು ತಿಂಗಳ ಕಾಲ ವಿಶೇಷ ಪೂಜೆ ಕಾರ್ಯಕ್ರಮ ನೆರವೇರುತ್ತದೆ.

ಧನುರ್ಮಾಸ ಮುಗಿಯುತ್ತಿದ್ದಂತೆ ಶ್ರೀಮಠದ ಇತಿಹಾಸವನ್ನು ಸಾರುವ ಆದಿಜಗದ್ಗುರು ಶ್ರೀಶಿವರಾತ್ರೀಶ್ವರರ ಜಯಂತಿ ಮಹೋತ್ಸವ ಪ್ರಾರಂಭವಾಗು ತ್ತದೆ. ಮೂಲದಲ್ಲಿ ಶ್ರೀ ಸುತ್ತೂರಿನಲ್ಲೆ ಆಚರಿಸುತ್ತಿದ್ದ ಈ ಜಯಂತಿ ಮಹೋತ್ಸವ ನಂತರದಿನಗಳಲ್ಲಿ ಮೈಸೂರು, ಬೆಂಗಳೂರು, ಗುಂಡ್ಲುಪೇಟೆ, ನರಸೀಪುರ, ಚಾಮರಾಜ ನಗರ, ಯಳಂದೂರು, ನಂಜನಗೂಡು ಪಿರಿಯಾಪಟ್ಟಣ, ಕೃಷ್ಣರಾಜನಗರ, ಹುಣಸೂರು ಮುಂತಾದ ಕಡೆಯೂ ಆಚರಿಸಲಾಯಿತು. ಈ ಸಂದರ್ಭದಲ್ಲಿ ಆಯಾ ಪರಿಸರ ಸಾಹಿತ್ಯ ಕಲೆ ಧರ್ಮಗಳನ್ನು ಪರಿಚಯಿಸುವುದರ ಜೊತೆಗೆ ನಾಡಿನ ಪ್ರಖ್ಯಾತ ವಿದ್ವಾಂಸರಿಂದ ಧಾರ್ಮಿಕ ಗೋಷ್ಠಿ ಮತ್ತು ಚಿಂತನ ಕಾರ್ಯಕ್ರಮ, ಸಾಮಾಜಿಕ ಬದುಕಿನ ಚಿತ್ರಣ ಮತ್ತು ನಾಗರಿಕ ಸಮಾಜ ನಿರ್ಮಾಣದ ಅರಿವು ಮೂಡಿಸುವ ಕಾರ್ಯ ಮಾಡಲಾಗುತ್ತದೆ.

ಅಲ್ಲದೆ ಫೆಬ್ರವರಿ ತಿಂಗಳಲ್ಲಿ ಮುಡುಕುತೊರೆ ಜಾತ್ರೆಯ ನಂತರ ಶ್ರೀಮಠದ ಶಾಖಾ ಮಠವಾದ ಮುಡುಕುತೊರೆ ನಾಡಮಠದಲ್ಲಿ ಪ್ರತಿವರ್ಷ ಧಾರ್ಮಿಕ ಸಭೆ ನಡೆಸಿ ಸಾಮಾಜಿಕ ಸಂಚಲನವನ್ನು ಮೂಡಿಸುತ್ತಿದ್ದಾರೆ.

* *

**ಶ್ರೀ ಹೊಸಮಠ, ಮೈಸೂರು :** ನಾಲ್ಕು ಶತಮಾನಗಳಷ್ಟು ಇತಿಹಾಸವುಳ್ಳ ತಮ್ಮ ಮಠದ ಗುರುಪರಂಪರೆಯವರು ಎಂದಿನಿಂದಲೂ ರೂಢಿಸಿ ಆಚರಿಸುತ್ತ ಬಂದಿರುವ ಧರ್ಮ ಸಂಸ್ಕೃತಿ ಪರವಾದ ಚಟುವಟಿಕೆ ಕಾರ್ಯಗೌರವಗಳನ್ನು ಪ್ರಸ್ತುತ ಶ್ರೀ ಹೊಸಮಠದ ಪೀಠಾಧ್ಯಕ್ಷರಾಗಿರುವ ಪೂಜ್ಯಶ್ರೀ ಚಿದಾನಂದ ಸ್ವಾಮಿಗಳವರು 1984ರಲ್ಲಿ ಸ್ಥಾಪಿಸಿರುವ ಶ್ರೀ ನಟರಾಜ ಪ್ರತಿಷ್ಠಾನದ ಮೂಲಕ ವ್ಯವಸ್ಥಿತವಾಗಿ ಮುನ್ನಡೆಸುತ್ತಿದ್ದಾರೆ. ಈ ಪ್ರತಿಷ್ಠಾನವು ಶಿಕ್ಷಣಕ್ಕೆ ಆದ್ಯತೆಯನ್ನಿತ್ತು ಶ್ರೀಮಠದ ಇನ್ನಿತರ ಉದ್ದೇಶಿತ ಕಾರ್ಯಗಳೆಲ್ಲವನ್ನು ಮುನ್ನಡೆಸುವ ಸಲುವಾಗಿ ತೆರೆಯಲಾಗಿರುವ ಒಂದು ಅಂಗಸಂಸ್ಥೆಯಾಗಿದೆ. ಈ ಪ್ರತಿಷ್ಠಾನ ಅನೇಕ ರಂಗಗಳಲ್ಲಿ ಸೇವೆ ಸಲ್ಲಿಸುತ್ತಿದೆ. ಈ ಪೀಠವನ್ನು ಅಲಂಕರಿಸಿರುವವರೆಲ್ಲರು ಮಹಾನ್ ತಪಸ್ವಿಗಳೂ, ಶ್ರೇಷ್ಠ ತತ್ವಜ್ಞಾನಿ ಗಳೂ, ಧರ್ಮಪರಾಯಣರೂ, ಘನವಿದ್ವಾಂಸರೂ, ಸಮಷ್ಟಿಹಿತಚಿಂತಕರಾದ ವರಾಗಿದ್ದ ರೆಂದು ತಿಳಿದು ಬರುತ್ತದೆ. ಬಹಳ ಹಿಂದಿನಿಂದಲೂ ಶ್ರೀಮಠದ ಆಶ್ರಯದಲ್ಲಿ ಧರ್ಮ, ಸಂಸ್ಕೃತಿ, ಸಾಮಾಜಿಕ ಪರವಾದ ಕಾರ್ಯಗಳು ಜರಗುತ್ತಲೇ ಬಂದಿವೆ. ಶ್ರೀಮಠದ 18ನೇ

ಪೀಠಾಧಿಪತಿಗಳಾದ ಶ್ರೀ ಬಸವಲಿಂಗಸ್ವಾಮಿಗಳು (1880-1952) ತಮ್ಮ ಹಿಂದಿನ ಗುರುಪರಂಪರೆಯವರ ಹೆಸರು ಅವರ ಕಾರ್ಯಸಾಧನೆಗಳೆಲ್ಲವನ್ನು ಕುರಿತು ಸ್ವಹಸ್ತಾಕ್ಷರದಲ್ಲಿ ಬರೆದಿರುವ ಕಾವ್ಯ ಮಾಲಿಕೆಯಲ್ಲಿ ಶ್ರೀಮಠದ ಬಗ್ಗೆ ಹೆಚ್ಚು ಹೆಚ್ಚು ವಿಚಾರ ತಿಳಿಯಬಹುದಾಗಿದೆ. ಸಾತ್ವಿಕ ಸ್ವಭಾವದವರು, ಸದ್ಗುಣಸಂಪನ್ನ ಆಚಾರನಿಷ್ಠೆಗೆ ಪ್ರಸಿದ್ಧಿಯಾದ ಈ ಗುರುಗಳ ನಡವಳಿಕೆಗಳನ್ನು ಗಮನಿಸಿದ್ದ ಭಕ್ತಸಮೂಹ ಇವರನ್ನು ಮಡಿಸ್ವಾಮಿಗಳೆಂದೇ ಕರೆಯುತ್ತಿದ್ದರು. ಶ್ರೀಗಳು ಸ್ವತಃ ಕವಿಗಳು, ಸಾಹಿತಿಗಳು, ಚಿಂತಕರು ಆಗಿದ್ದರಿಂದ ಇವರ ಪ್ರತಿಭೆಯನ್ನು ಮೆಚ್ಚಿ, ಮೈಸೂರಿನ ಪ್ರಸಿದ್ಧ ಒಡೆಯರಾದ ನಾಲ್ವಡಿ ಕೃಷ್ಣರಾಜ ಒಡೆಯರ್‌ರವರು ತಮ್ಮ ಆಸ್ಥಾನದ ವಿದ್ವಾಂಸರನ್ನಾಗಿ ನೇಮಿಸಿಕೊಂಡಿದ್ದರು. ಇವರು ಶ್ರೀಮಠದಲ್ಲಿ ನಾನಾ ರೀತಿಯ ಧಾರ್ಮಿಕ, ಸಾಮಾಜಿಕ, ಸಾಂಸ್ಕೃತಿಕ ಮತ್ತು ಸಾಹಿತ್ಯಕ ಪರವಾದ ಕಾರ್ಯಕ್ರಮಗಳನ್ನು ಜರುಗಿಸಿದ ಖ್ಯಾತಿಗೆ ಒಳಗಾದರು. ಇವರ ನಂತರದ 19ನೇ ಗುರುಗಳಾದ ಪೂಜ್ಯಶ್ರೀ ಗುರುಶಾಂತ ವೀರ ಸ್ವಾಮಿಗಳೂ ಕೂಡ ಸಂಸ್ಕೃತ ಭಾಷೆಯ ಅಗಾಧವಾದ ಪಾಂಡಿತ್ಯ ಪಡೆದು ಮಹಾರಾಜ ಕಾಲೇಜಿನಲ್ಲಿ ಸಂಸ್ಕೃತ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದ್ದವರಾಗಿದ್ದಾರೆ. ಶ್ರೀಮಠದಲ್ಲಿ ನಡೆಯುವಂತಹ ಧಾರ್ಮಿಕ ಕಾರ್ಯಕ್ರಮಗಳು ವ್ಯವಸ್ಥಿತವಾಗಿ ಜರುಗುವಂತೆ ಮಾಡುವಲ್ಲಿ ತುಂಬಾ ಶ್ರಮಿಸಿದವರಾಗಿದ್ದಾರೆ. ಇದಕ್ಕಾಗಿಯೇ ಅವರು ಪ್ರತ್ಯೇಕವಾದ ಸಭಾಭವನ ಶ್ರೀ ನಟರಾಜ ಮಂದಿರವನ್ನು ನಿರ್ಮಿಸಿ ತಮ್ಮ ನಿಕಟಪೂರ್ವ ಗುರುಗಳಾಗಿದ್ದ ಪೂಜ್ಯ ಶ್ರೀ ಬಸವಲಿಂಗ ಸ್ವಾಮಿಗಳ ಪುಣ್ಯಾರಾಧನೆಯನ್ನು ಪ್ರತೀ ವರ್ಷ ಮಾರ್ಚ್ ತಿಂಗಳಲ್ಲಿ ಆಚರಿಸಿ ಅನ್ನಸಂತರ್ಪಣೆ ಮಾಡುವುದನ್ನು ರೂಢಿಸಿದ ವರಾಗಿರುವುದನ್ನು ನಾವು ಗಮನಿಸಬಹುದು.

ಪ್ರಸ್ತುತ ಶ್ರೀ ಹೊಸಮಠದ 20ನೇ ಪೀಠಾಧಿಪತಿಗಳು, ಉತ್ತಮ ಸಂಘಟನಾಕಾರರು ಆಗಿರುವ ಶ್ರೀ ಚಿದಾನಂದ ಸ್ವಾಮಿಗಳು ಪದವೀಧರರೂ ಶ್ರೀಮಠದ ಪರಂಪರೆಯ ಎಲ್ಲ ಆಯಾಮಗಳ ಅರಿವುಳ್ಳವರೂ ಆಗಿದ್ದು ತಮ್ಮ ಗುರುಪರಂಪರೆಯು ಆಚರಿಸಿ ರೂಢಿಗೆ ತಂದಿರುವ ಎಲ್ಲಾ ಕಾರ್ಯಕ್ರಮಗಳನ್ನು ತಾವು ಸಂಸ್ಥಾಪಿಸಿರುವ ಶ್ರೀ ನಟರಾಜ ಪ್ರತಿಷ್ಠಾನದ ಮೂಲಕ ತುಂಬಾ ಅರ್ಥಪೂರ್ಣವಾಗಿ ಮತ್ತು ವ್ಯವಸ್ಥಿತವಾಗಿ ಮುನ್ನಡೆಸುತ್ತಿದ್ದಾರೆ.

ಶ್ರೀ ನಟರಾಜ ಪ್ರತಿಷ್ಠಾನದ ಆಶ್ರಯದಲ್ಲಿ ಪ್ರತಿ ವರ್ಷ ಲಿಂಗೈಕ್ಯ ಪೂಜ್ಯ ಶ್ರೀ ಬಸವಲಿಂಗ ಸ್ವಾಮಿಗಳ ಪುಣ್ಯಾರಾಧನಾ ಮಹೋತ್ಸವವನ್ನು ಆಚರಿಸಿ ಅನ್ನಸಂತರ್ಪಣೆ ನಡೆಸಲಾಗುತ್ತಿದೆ. ಏಪ್ರಿಲ್ ತಿಂಗಳಲ್ಲಿ ಆಚರಿಸಲಾಗುವ ಪೂಜ್ಯ ಶ್ರೀ ಗುರುಶಾಂತಸ್ವಾಮಿ ಗಳ ಪುಣ್ಯಾರಾಧನಾ ಮಹೋತ್ಸವ, ಅಲ್ಲದೆ ಶರಣ ಪರಂಪರೆಯ ಶ್ರೇಷ್ಠ ವ್ಯಕ್ತಿಗಳಾದ ಬಸವಣ್ಣ, ಅಲ್ಲಮಪ್ರಭು ಹಾಗೂ ಅಕ್ಕಮಹಾದೇವಿಯವರ ಜಯಂತ್ಯುತ್ಸವಗಳನ್ನು



ಅದ್ದೂರಿಯಾಗಿ ಆಚರಿಸುವ ಪರಿಪಾಟವಿದೆ. ಈ ಸಂದರ್ಭಗಳಲ್ಲಿ ಆಹ್ವಾನಿತ ವಿದ್ವಾಂಸರಿಂದ ವಿಶೇಷ ಧಾರ್ಮಿಕ ಉಪನ್ಯಾಸ ಕಾರ್ಯಕ್ರಮಗಳನ್ನು ಏರ್ಪಡಿಸಿ ಶರಣ ಧರ್ಮದ ಸಂದೇಶವನ್ನು ಇಂದಿನ ಜನಸಾಮಾನ್ಯರಿಗೆ ತಿಳಿಸುವುದರ ಮೂಲಕ ಶರಣತತ್ವ ಚಿಂತನೆಗಳ ಅರಿವು ಮೂಡಿಸುವ ಕಾರ್ಯ ಮಾಡುತ್ತಿದೆ. ಇದೇ ಸಂದರ್ಭದಲ್ಲಿ ಉಚಿತ ಸಾಮೂಹಿಕ ವಿವಾಹ ಕಾರ್ಯಕ್ರಮ ಏರ್ಪಡಿಸಲಾಗುತ್ತದೆ. ಈ ಎಲ್ಲ ಆಧ್ಯಾತ್ಮಿಕ, ಸಾಮಾಜಿಕಪರವಾದ ಕಾರ್ಯಕ್ರಮ ಆಚರಿಸಿದ ನಂತರ ಅಂತಿಮದಲ್ಲಿ ಶ್ರೀ ಬಸವೇಶ್ವರರ ಪುತ್ಥಳಿಯನ್ನು ನಗರದ ಪ್ರಮುಖ ರಸ್ತೆಗಳಲ್ಲಿ ಮೆರವಣಿಗೆ ಮಾಡಲಾಗುತ್ತದೆ.

ಕಾರ್ತಿಕಮಾಸದ ಸಂದರ್ಭದಲ್ಲಿ ಪ್ರತಿ ಸಂಜೆ ಪ್ರಸಿದ್ಧ ವಿದ್ವಾಂಸರನ್ನು ಆಹ್ವಾನಿಸಿ ಧಾರ್ಮಿಕ ಉಪನ್ಯಾಸಗಳನ್ನು ಏರ್ಪಡಿಸುವುದರ ಮೂಲಕ ಜನಸಾಮಾನ್ಯರಲ್ಲಿರುವ ತಮೋಗುಣ ಹೋಗಲಾಡಿಸುವ ಪ್ರಯತ್ನ ನಿರಂತರವಾಗಿ ನಡೆಯುತ್ತಿದೆ.

ವಯೋವೃದ್ಧರು ತಮ್ಮ ಉಳಿದ ಜೀವಿತಾವಧಿಯನ್ನು ನೆಮ್ಮದಿಯಿಂದ ಕಳೆಯು ವಂತಾಗಬೇಕೆಂದು ಮೈಸೂರಿನಿಂದ 15 ಕಿಲೋಮೀಟರ್ ದೂರದಲ್ಲಿರುವ ನಾಗವಾಲ ಗ್ರಾಮದ ಪಕ್ಕದಲ್ಲಿ ಶ್ರೀಮಠದ ಸದ್ಭಕ್ತರಲ್ಲೊಬ್ಬರಾದ ಬೆಂಗಳೂರಿನ ಶ್ರೀಮಾನ್ ಚಂದ್ರಶೇಖರಯ್ಯ ಎಂಬುವವರು 1996ರಲ್ಲಿ ಶ್ರೀಮಠಕ್ಕೆ ದಾನವಾಗಿ ನೀಡಿರುವ ತೋಟದಲ್ಲಿ 'ಶ್ರೀ ನಟರಾಜ ವೃದ್ಧ ಸೇವಾಶ್ರಮ' ಎಂಬ ಸಂಸ್ಥೆಯನ್ನು ಸ್ಥಾಪಿಸಲಾಗಿದೆ.

ಶ್ರೀ ನಟರಾಜ ಪ್ರತಿಷ್ಠಾನದ ಆಶ್ರಯದಲ್ಲಿ ಧಾರ್ಮಿಕ ಮತ್ತು ಸಾಮಾಜಿಕ ಕಾರ್ಯಕ್ರಮಗಳು ವರ್ಷಪೂರ್ತಿ ನಿರಂತರವಾಗಿ ಜರುಗುತ್ತಲೇ ಇರುತ್ತವೆ.

* *

**ದೇವನೂರು ಮಠ :** ದೇವನೂರು ದಾಸೋಹಮಠ ಜನತೆಯಲ್ಲಿ ಶರಣಧರ್ಮದ ತತ್ವಗಳನ್ನು ಬಿತ್ತರಿಸುತ್ತಾ ಕಾಯಕ ಮತ್ತು ದಾಸೋಹವೆಂಬ ನಿಜತತ್ವಗಳನ್ನು ಅನುಸರಿಸುತ್ತ ಬಂದಿದೆ. ಶ್ರೀಮಠದಲ್ಲಿ ಸದಾಕಾಲ ವಿಚಾರಗೋಷ್ಠಿಗಳು ಪುರಾಣ ಪ್ರವಚನಗಳು ಶಿವಾನುಭವ ಉಪನ್ಯಾಸಗಳು ಮತ್ತು ಧಾರ್ಮಿಕ ಉತ್ಸವಗಳನ್ನು ನಡೆಸಿಕೊಂಡು ಬರುತ್ತಿದೆ. ಇಲ್ಲಿ ನಿತ್ಯದಾಸೋಹ ನಿರಂತರವಾಗಿ ನಡೆಯುತ್ತದೆ. ಶ್ರೀ ಗುರುಮಲ್ಲೇಶ್ವರರ ಮೂಲಗದ್ದುಗೆ ಯನ್ನೊಳಗೊಂಡಂತೆ ಶ್ರೀಮಠದ ಪರಂಪರೆಯಲ್ಲಿ ಬಂದಂತಹ ಮತ್ತು ಮಠಕ್ಕಾಗಿ ಅವಿಶ್ರಾಂತವಾಗಿ ದುಡಿದ ಎಲ್ಲಾ ಪೂಜ್ಯರುಗಳ ಗದ್ದುಗೆ ಗಳಿಗೂ ನಿತ್ಯ ಪೂಜೆ ನಡೆಯುತ್ತದೆ. ಅನ್ನದಾಸೋಹ ಶ್ರೀಮಠದ ಜೀವನಾಡಿಯಾಗಿದೆ. ಕಂಥೆಭಿಕ್ಷದಿಂದ ಬಂದ ಮತ್ತು ಶ್ರೀಮಠದ ವತಿಯಿಂದ ಮಾಡಿದ ಪ್ರಸಾದವನ್ನು ನೂರಾರು ಭಕ್ತರಿಗೆ ಪ್ರತಿನಿತ್ಯ ಬೆಳಗ್ಗೆ, ಮಧ್ಯಾಹ್ನ ಮತ್ತು ರಾತ್ರಿ ವೇಳೆಗಳಲ್ಲಿ ದಾಸೋಹ ಮಾಡಲಾಗುತ್ತಿದೆ.

ಗುರುಮಲ್ಲೇಶ್ವರರಾದಿಯಾಗಿ ಶ್ರೀಮಠದ ಗುರುಪರಂಪರೆಯವರಿಗೆಲ್ಲಾ ಜಂಗಮ ಎಂದರೆ ಪ್ರಾಣ. ಪ್ರತಿವರ್ಷ ದೇವನೂರು ಮಠದಲ್ಲಿ ನಡೆಯುವ ಆರಾಧನೆಗಳಲ್ಲಿ ಸಕಲ ಮರ್ಯಾದೆಗಳೊಡನೆ ಜಂಗಮೋತ್ಸವ ಮತ್ತು ಪಾದಪೂಜೆಗಳು ನಿರಂತರವಾಗಿ ನಡೆದುಕೊಂಡು ಬಂದಿದೆ. ಇದಕ್ಕೆ ಇಂತಹವರೆ ಆಗಬೇಕೆಂದೇನು ಇಲ್ಲ. ಮಠಕ್ಕೆ ಬರುವ ಜಂಗಮರ ಸ್ಥಾನಮಾನಗಳನ್ನು ಲೆಕ್ಕಿಸದೆ ಎಲ್ಲರಿಗೂ ಸಮಾನ ಗೌರವಾದರಗಳನ್ನು ನೀಡಿ ಸತ್ಕರಿಸಲಾಗುತ್ತದೆ. ಇಲ್ಲಿ ನಿತ್ಯ ನಡೆಯುವ ಶ್ರೀ ಗುರುಮಲ್ಲೇಶ್ವರ ಭಜನಾ ಮೇಳ ಬಹಳ ಪ್ರಸಿದ್ಧಿ ಪಡೆದಿದೆ. ದೇವರ ಸಾಕ್ಷಾತ್ಕಾರಕ್ಕೆ ಭಜನೆ ಒಂದು ಸುಲಭ ಮಾರ್ಗ. ಭಜನೆ ಯನ್ನು ಕೇಳಲೇಬೇಕೆಂದರೆ ಪ್ರತಿವರ್ಷ ಶ್ರೀಮಠದಲ್ಲಿ ನಡೆಯುವ ಜೇಷ್ಠ ಮತ್ತು ಕೊನೆಯ ಕಾರ್ತಿಕೋತ್ಸವ, ಶಿವರಾತ್ರಿ ಮುಂತಾದ ಹಬ್ಬಹರಿದಿನಗಳಲ್ಲಿ ಭಾಗಿಯಾಗ ಬೇಕು. ಭಜನಾತಂಡದವರು ಗುರುಮಲ್ಲೇಶ್ವರರು ಮತ್ತು ಶರಣರ ನಾಮಸ್ಮರಣೆ ಮಾಡುತ್ತಾ ಭಾವಪರವಶವಾಗಿ ತಮ್ಮನ್ನು ತಾವೇ ಮರೆಯುತ್ತಾರೆ. ಹಾರ್ಮೋನಿಯಂ, ತಬಲ, ಖಂಜರ, ತಾಳ ಮುಂತಾದ ಪಕ್ಕವಾದ್ಯದಲ್ಲಿ ಭಜನೆ ಮಾಡುವುದು ನೆರೆದ ಭಕ್ತರು ಭಾವಪರವಶರಾಗಿ ಶ್ರೀ ಗುರುಮಲ್ಲೇಶ್ವರರಲ್ಲಿ ತಲ್ಲೀನರಾಗುವುದು ಭಜನೆಯ ಅಂತ್ಯದಲ್ಲಿ ಉದ್ಘೋಷಿಸುವ 'ಜೈ ನಮಃ ಪಾರ್ವತೀಪತೇ ಹರಹರ ಮಹದೇವ್', 'ಅಲಕ್ ನಿರಂಜನ ಗುರುಮಲ್ಲೇಶ ಮಹಾಪ್ರಭು ಬಹುಪರಾಕ್' ಇಡೀ ಪ್ರದೇಶದಲ್ಲಿ ಅನುರಣಿತವಾಗುತ್ತದೆ.

ಮಹಾತ್ಮರಾದ ಶ್ರೀ ಗುರುಮಲ್ಲೇಶ್ವರರು ಲಿಂಗೈಕ್ಯರಾದ (25.6.1899) ನಂತರ ಪ್ರಾರಂಭವಾದ ಶ್ರೀ ಗುರುಮಲ್ಲೇಶ್ವರರ ಪ್ರಮಥ ಗಣಾರಾಧನ ಮಹೋತ್ಸವವು ಪ್ರತಿವರ್ಷ ಜೇಷ್ಠಮಾಸದಲ್ಲಿ ನಡೆಯುತ್ತದೆ. ಕ್ರಿ.ಶ. 1899 ರಿಂದ ಸತತವಾಗಿ ಒಂದು ನೂರು ವರ್ಷಗಳವರೆಗೆ ನಡೆದುಕೊಂಡು ಬಂದಿರುವ ಈ ಗಣಾರಾಧನ ಮಹೋತ್ಸವದಲ್ಲಿ ಸಹಸ್ರಾರು ಭಕ್ತರು ಭಾಗವಹಿಸಿ ಪುನೀತರಾಗಿದ್ದಾರೆ. ಇಪ್ಪತ್ತನೇ ಶತಮಾನದ ಕೊನೆಯ ವರ್ಷದಲ್ಲಿ ಶ್ರೀ ಗುರುಮಲ್ಲೇಶ್ವರರ ಈ ಗಣಾರಾಧನ ಶತಮಾನೋತ್ಸವದಲ್ಲಿ ಈ ಉತ್ಸವ ನೆನಪಿನಲ್ಲುಳಿವಂತೆ ಮಾಡಲು ಶ್ರೀ ಗುರುಮಲ್ಲೇಶ್ವರ ಶತಮಾನೋತ್ಸವ ಸಂಸ್ಮರಣ ಗ್ರಂಥ, ಕೆಲವು ಪುಸ್ತಕಗಳ ಪ್ರಕಟಣೆ, ಗೋಶಾಲೆ, ಅಡುಗೆಮನೆ, ದಾಸೋಹ ಭವನಗಳ ನಿರ್ಮಾಣ, ಮಠದ ನವೀಕರಣ ಮೊದಲಾದ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿದೆ. ಇವುಗಳ ಜೊತೆಗೆ, ಶರಣ ಧರ್ಮದ ವಿಚಾರಗೋಷ್ಠಿಗಳು, ಭಜನಾಮೇಳ, ನಾಟಕ ಪ್ರದರ್ಶನ, ಜಂಗಮೋತ್ಸವ, ಮಹಾದಾಸೋಹ ಮೊದಲಾದ ಕಾರ್ಯಕ್ರಮಗಳ ವ್ಯವಸ್ಥೆಯನ್ನು ಮಾಡಲಾಗಿತ್ತು.

ದೇವನೂರಿನ ಶ್ರೀಮಠದ ಇತಿಹಾಸದಲ್ಲೆ ಬರೆದಿಡಬಹುದಾದ ಸುವರ್ಣ ದಿನ ಎಂದರೆ ದಿನಾಂಕ 14.6.1949ರಲ್ಲಿ ಶ್ರೀಮಠದ ಜೇಷ್ಠಮಾಸದ ಆರಾಧನ



ಮಹೋತ್ಸವವು ಪೂಜ್ಯ ಶ್ರೀ ತೋಂಟದಾರ್ಯರ ನೇತೃತ್ವದಲ್ಲಿ ನಡೆದದ್ದು. ಅದೇನೆಂದರೆ ಶ್ರೀ ಗುರುಮಲ್ಲೇಶ್ವರರ ಸುವರ್ಣ ಮಹೋತ್ಸವ ಹಾಗೂ ಅರವತ್ಮೂರು ಪುರಾತನರ ಪೂಜಾ ಸಮಾರಂಭಗಳು. ಇದೊಂದು ಅಭೂತಪೂರ್ವವಾದ ಕಾರ್ಯಕ್ರಮ ವೆಂದು ಇದನ್ನು ಕಣ್ಣಾರೆ ಕಂಡಿರುವ ಜನರು ಇಂದಿಗೂ ನೆನಪಿಸಿಕೊಳ್ಳುತ್ತಾರೆ. ಅರವತ್ಮೂರು ವಿವಿಧ ಮಠಾಧಿಪತಿಗಳನ್ನು ಆಹ್ವಾನಿಸಿ ಅರವತ್ಮೂರು ಮಂಟಪಗಳನ್ನು ಮಾಡಿ ಮಂಟಪಗಳಿಗೆ ಅರವತ್ಮೂರು ಪುರಾತನ ಹೆಸರುಗಳನ್ನು ಇಟ್ಟು, ಒಂದೊಂದು ಮಂಟಪದಲ್ಲಿ ಒಬ್ಬೊಬ್ಬ ಶ್ರೀಗಳ ಪಾದಪೂಜೆಯನ್ನು ಓರೋರ್ವ ದಂಪತಿಗಳಿಗೆ ವಹಿಸಿಕೊಡಲಾಗಿತ್ತು. ನಂತರ ಜಂಗಮೋತ್ಸವ, ಶಿವಾನುಭವ ಗೋಷ್ಠಿ, ಮಹಾಪ್ರಸಾದ ವಿನಿಯೋಗ ಹೀಗೆ ಅನೇಕ ಕಾರ್ಯಕ್ರಮಗಳನ್ನು ವ್ಯವಸ್ಥೆ ಮಾಡಲಾಗಿತ್ತು. ಲಕ್ಷಾಂತರ ಜನ ಭಕ್ತರು ಈವೊಂದು ಪುಣ್ಯ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಪ್ರತಿ ವರ್ಷದ ಕಡೆ ಕಾರ್ತಿಕ ಸೋಮವಾರ ಮತ್ತು ಮಂಗಳವಾರದಂದು ನಿರಂತರವಾಗಿ ಕಾರ್ತಿಕ ಸೋಮವಾರದ ಆರಾಧನಾ ಮಹೋತ್ಸವಗಳನ್ನು ನಡೆಸಿಕೊಂಡು ಬರಲಾಗುತ್ತಿದೆ. ಈ ಆರಾಧನಾ ಮಹೋತ್ಸವದಲ್ಲಿ ಭಾಗವಹಿಸುವ ಭಕ್ತರ ಸಂಖ್ಯೆಗೆ ಮಿತಿಯೇ ಇಲ್ಲ. ಪ್ರತಿ ವರ್ಷವೂ ಶಿವಾನುಭವಗೋಷ್ಠಿ, ಜಂಗಮೋತ್ಸವ, ಭಜನಾ ಮೇಳ, ಮಹಾದಾಸೋಹ ಮೊದಲಾದ ಕಾರ್ಯಕ್ರಮಗಳು ಬಹು ವಿಜೃಂಭಣೆಯಿಂದ ನಡೆಯುತ್ತಲೆ ಇದೆ. ಮೇಲಾಗಿ ಶ್ರೀ ಮಠದಲ್ಲಿ ಧನುರ್ಮಾಸ, ಮಹಾಶಿವರಾತ್ರಿಗಳಂದು ವಿಶೇಷವಾದ ಪೂಜೆ ಪುನಸ್ಕಾರಗಳು ನಡೆಯುತ್ತವೆ. ಹೀಗೆ ದೇವನೂರು ಮಠದ ಇತಿಹಾಸವು ಕೇವಲ ನೂರೈವತ್ತು ಇನ್ನೂರು ವರ್ಷಗಳ ಒಳಗಿದ್ದರು. ಇಲ್ಲಿ ಅನೇಕ ಆರಾಧನಾ ಮಹೋತ್ಸವಗಳು ನಡೆದು ಶಿವಾನುಭವ ಗೋಷ್ಠಿಗಳ ಮೂಲಕ ಧರ್ಮ ಪ್ರಚಾರ ಕಾರ್ಯ ನಿರಂತರವಾಗಿ ನಡೆಸುತ್ತ ಶ್ರೀಮಠ ಸದಾ ಕಾರ್ಯತತ್ಪರವಾಗಿದೆ.

ಮೇಲ್ಕಂಡ ಮಠಗಳಲ್ಲದೆ ಮೈಸೂರು ಜಿಲ್ಲೆಯ ಸುತ್ತ ಇರುವಂತಹ ಎಲ್ಲಾ ವೀರಶೈವ ಮಠಗಳು ಇಂದಿಗೂ ತಮ್ಮ ವ್ಯಾಪ್ತಿಯಲ್ಲಿನ ಧಾರ್ಮಿಕ ಮತ್ತು ಸಾಮಾಜಿಕ ಕಾರ್ಯಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತವೆ.

ಆರ್ಥಿಕವಾಗಿ ಸದೃಢವಲ್ಲದ ಅನೇಕ ಮಠಗಳೂ ಸಹ ಸುತ್ತಮುತ್ತಲಿನ ಹಳ್ಳಿಗಳಲ್ಲಿ ನಡೆಯುವ ಮದುವೆ, ನಾಮಕರಣ ಮತ್ತು ಕಲ್ಯಾಣ ಕಾರ್ಯಗಳ ಜೊತೆಗೆ ಅಂತ್ಯಸಂಸ್ಕಾರದಂತಹ ಕಾರ್ಯಗಳನ್ನು ನಡೆಸಿಕೊಡುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ಇಂಥ ಸಂದರ್ಭದಲ್ಲಿ ಸುತ್ತಲಿನ ಮಠಾಧೀಶರೆಲ್ಲ ಒಂದೆಡೆ ಸೇರಿ ಧಾರ್ಮಿಕ ಮತ್ತು ಸಾಮಾಜಿಕ ವಿಷಯಗಳ ಬಗ್ಗೆ ಚರ್ಚಿಸುತ್ತಾರೆ. ಬೆಟ್ಟದಪುರ, ವಾಟಾಳು, ಕುಂದೂರ ಮಠ, ಕುದೇರು ಮಠ ಮತ್ತು ಉಕ್ಕಲಗೆರೆ ಮದ್ದಾರಲಿಂಗಯ್ಯನಹುಂಡಿ ಪಟ್ಟದ ಮಠ ಮುಂತಾದ ಅನೇಕ ಮಠಗಳು ಶ್ರಾವಣ ಮಾಸದಲ್ಲಿ ಮತ್ತು ಕಾರ್ತಿಕ

ಮಾಸದಲ್ಲಿ ವಿಶೇಷ ಪೂಜೆ ಮತ್ತು ಪ್ರವಚನ ಕಾರ್ಯಕ್ರಮವನ್ನು ಏರ್ಪಡಿಸಿ ಸುತ್ತಲಿನ ಜನಕ್ಕೆ ಧಾರ್ಮಿಕ ಮತ್ತು ಆಧ್ಯಾತ್ಮಿಕ ಅರಿವನ್ನು ಮೂಡಿಸುವ ಕಾರ್ಯವನ್ನು ಮಾಡುತ್ತಿವೆ. ಅಲ್ಲದೆ ಎಲ್ಲಾ ವೀರಶೈವ ಮಠಗಳು ಪ್ರತಿ ವರ್ಷ ತಮ್ಮ ಮಠದಲ್ಲಿ ಲಿಂಗೈಕ್ಯರಾದ, ಗುರುಗಳ ವಾರ್ಷಿಕ ಜಯಂತಿ ಮತ್ತು ಆರಾಧನಾ ಮಹೋತ್ಸವವನ್ನು ಆಚರಿಸುತ್ತ ಅಂತಹ ದಿನಗಳಲ್ಲಿ ಧಾರ್ಮಿಕ ಗೋಷ್ಠಿಯ ಕಾರ್ಯಕ್ರಮ ಏರ್ಪಡಿಸಿ ವೀರಶೈವ ಧರ್ಮಚಿಂತನೆಯನ್ನು ಜನರಲ್ಲಿ ಮೂಡಿಸುವ ಕಾರ್ಯ ಮಾಡುತ್ತವೆ. ಸುತ್ತಲೂ ಇರುವ ಗ್ರಾಮಗಳಲ್ಲಿ ಹಬ್ಬ ಜಾತ್ರೆಗಳಲ್ಲಿ ಪ್ರಮುಖ ಪಾತ್ರ ವಹಿಸುತ್ತ ನ್ಯಾಯತೀರ್ಮಾನ ವೀರಶೈವ ಧರ್ಮದವರಿಗೆ ವಟುದೀಕ್ಷೆ ಮತ್ತು ಲಿಂಗದೀಕ್ಷೆ ಕಾರ್ಯಕ್ರಮ ಏರ್ಪಡಿಸುವುದರ ಮೂಲಕ ಧರ್ಮದ ಉಳಿವಿಗೆ ಕಾರಣರಾಗಿ ಮತ್ತು ಆ ಪ್ರಾಂತ್ಯದಲ್ಲಿ ಶಾಂತಿ ನೆಲೆಸುವಂತೆ ಸರ್ವಧರ್ಮದವರನ್ನು ಉದ್ಧರಿಸುವ ಕೆಲಸವನ್ನು ಈ ಮಠಗಳು ಮಾಡುತ್ತಿರುವುದು ಸರ್ವವಿದಿತ.

ಗುರುಭಕ್ತಿಯ ಮಾಡಬಹುದಲ್ಲದೆ ಲಿಂಗಭಕ್ತಿಯ ಮಾಡಬಾರದು.
ಲಿಂಗಭಕ್ತಿಯ ಮಾಡಬಹುದಲ್ಲದೆ ಜಂಗಮಭಕ್ತಿಯ ಮಾಡಬಾರದು.
ಜಂಗಮಭಕ್ತಿಯ ಮಾಡಬಹುದಲ್ಲದೆ ಸಮಯಭಕ್ತಿಯ ಮಾಡಬಾರದು.
ಸಮಯಭಕ್ತಿಯ ಮಾಡಬಹುದಲ್ಲದೆ ಸಮಯಸಂತೋಷವ ಮಾಡಬಾರದು.
ಇವೆಲ್ಲವ ಮಾಡಬಹುದಲ್ಲದೆ ತನ್ನ ತಾನಱಿಯಬಾರದು ;
ತನ್ನ ತಾನಱಿದೆಹೆನೆಂಬ ಅಹಂಕಾರವುಳ್ಳಡೆ ನಿಮ್ಮವರಿಗೆ ದೂರ,
ಎಲೆ ದೇವಾ, ಅನ್ಯಕ್ಕೆ ಆಸೆ ಮಾಡಿದೆನಾದಡೆ ನಿಮ್ಮಾಣೆ,
ನಿಮ್ಮ ಪ್ರಮಥರಾಣೆ, ಕೂಡಲಸಂಗಮದೇವಾ !

-ಬಸವಣ್ಣ

ಶ್ರೀಮಠದ ಹಿರಿಯ ವಿದ್ಯಾರ್ಥಿ

## ಡಾ. ಎಸ್.ಎಂ. ವೃಷಭೇಂದ್ರ ಸ್ವಾಮಿಯವರಿಗೆ ನುಡಿನಮನ

**ಶಾಲ್ಮಲಿಯ ಜೊತೆಗಿನ ಮಧುರ ಸಂಬಂಧ ಕಳಚಿಕೊಂಡಿತು ಈ ಜೀವ**

**ಡಾ. ಎಸ್. ವಿದ್ಯಾಶಂಕರ**



ಕಳೆದ ಜನವರಿ 7 ರಂದು ಬೆಂಗಳೂರಿನಲ್ಲಿ ಕನ್ನಡದ ಖ್ಯಾತ ವಿದ್ವಾಂಸ ಧಾರವಾಡದ ಡಾ. ಎಸ್.ಎಂ. ವೃಷಭೇಂದ್ರಸ್ವಾಮಿಯವರಿಗೆ 'ಶಿವಕಮಲ ಪ್ರಶಸ್ತಿ'ಯನ್ನು ಶ್ರೀ ಕಾಶೀ ಜಗದ್ಗುರುಗಳು ಪ್ರದಾನ ಮಾಡಿದರು. 86ರ ಹರಯದ ಅವರು ಪ್ರಶಸ್ತಿ ಕೊಟ್ಟದ್ದಕ್ಕೆ ಕೃತಜ್ಞತೆ ಸಲ್ಲಿಸುತ್ತ, 'ನನಗೆ ಬಿ.ಪಿ. ಇಲ್ಲ, ಶುಗರ್ ಇಲ್ಲ. ಬದುಕಿನಲ್ಲಿ ಯಾವ ಕೊರತೆಯೂ ಇಲ್ಲ. ಜೀವನಸಂಗಾತಿ ಎರಡು ವರ್ಷಗಳ ಹಿಂದೆ ತೀರಿಕೊಂಡರು. ಒಬ್ಬನೇ ಮಗ, ಬೆಂಗಳೂರಿನ ಜೆಎನ್‌ಎಫ್‌ಆರ್‌ನಲ್ಲಿ ವಿಜ್ಞಾನಿ. ತುಂಬು ಸಂಸಾರ, ಆತ್ಮೀಯರ ಬಳಗವಿದೆ. ಯಾವ ದುರಭ್ಯಾಸಗಳೂ ಇಲ್ಲದ ಸಾತ್ವಿಕ ಜೀವನ. ಧಾರವಾಡದ ನನ್ನ ಮನೆಯಲ್ಲಿ ನನ್ನದು ಒಂಟಿ ಬದುಕು. ಆದರೂ ಸುಖ-ಶಾಂತಿ-ನೆಮ್ಮದಿಯ ಈ ಮುಸ್ಸಂಜೆಯ ಹೊತ್ತಿನಲ್ಲಿ ನನ್ನ ಸಂಗಾತಿ ಪುಸ್ತಕಗಳು, ಗೆಳೆಯರ ಜೊತೆಗಿನ ಮಧುರವಾದ ಸಂವಾದ. ಈ ಕ್ಷಣವಷ್ಟೇ ನನಗೆ ಮುಖ್ಯ. ಧಾರವಾಡದ ನನ್ನ ಪುಟ್ಟ ಗೂಡು ತಲುಪುತ್ತೇನೋ ಇಲ್ಲವೋ ನನಗೆ ತಿಳಿಯದು' - ಹೀಗೆ ತಮ್ಮ ಬದುಕಿನ ಪುಟ ತೆರೆದಿಟ್ಟರು. ಅವರು ಎಂಥ ಜೀವನ ರಹಸ್ಯವನ್ನು ಬಿಚ್ಚಿಟ್ಟರು ಎನ್ನುವುದು ನನಗೆ ಈ ಕ್ಷಣವೂ ಸೋಜಿಗ. ಬದುಕಿನ ನಶ್ವರತೆಯನ್ನು ಅವರು ಸಹಜವಾಗಿ ಹೇಳಿದ್ದರು. ಆದರೆ, ಅದು ಕಹಿ ಸತ್ಯ ಎನ್ನುವುದು ಮೊನ್ನೆ ಅವರು ತೀವ್ರ ಹೃದಯಾಘಾತಕ್ಕೆ ಒಳಗಾಗಿ ಕೊನೆಯುಸಿರೆಳೆದರು ಎಂಬ ಸುದ್ದಿ ಮುಟ್ಟಿದಾಗಲೇ ತಿಳಿದದ್ದು.

ಸ್ವಾಮಿಯವರು ನನಗೆ 1964ರಲ್ಲಿ ಗುರುಗಳು. ಮೂರು ನಾಲ್ಕು ವರ್ಷಗಳ ಹಿಂದೆಯಷ್ಟೇ ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಅಧ್ಯಾಪಕರಾಗಿ ಬಂದಿದ್ದರು. ಅವರು ತಮ್ಮ ಮೊದಲ ದಿನದ ತರಗತಿಯಲ್ಲೇ ನನ್ನ ಮೇಲೆ ಗಾಢ ಪ್ರಭಾವ ಬೀರಿದ್ದರು. ತುಂಬು ಶರೀರದ, ಸೇಬುಕೆನ್ನೆಯ, ಗೋಧಿಗೆಂಪು ಮೈಬಣ್ಣದ, ಮಧ್ಯಮ ಎತ್ತರದ, ಪ್ರಸನ್ನವದನದ, ಅರಳು ಹುರಿದಂತೆ ಸೊಗಸಾದ ಮೈಸೂರು ಭಾಗದ ಕನ್ನಡದಲ್ಲಿ ಮಾತನಾಡಲು ನಿಂತ ಅವರ ಪಾಠದ ನೆನಪು ಅಚ್ಚಳಿಯದೆ ನಿಂತಿದೆ.

ಅವರ ಪಾಠದ ವಿಶೇಷವೆಂದರೆ, ಸಮಯ ಹೋದದ್ದೇ ತಿಳಿಯದಂತೆ ಪರಿಣಾಮಕಾರಿಯಾಗಿ ತಿಳಿಸುವ ಜಾಣ್ಮೆ. ಜೀವಂತ ಮಾತುಗಾರಿಕೆ. ನಾನು ಕಂಡ ಶ್ರೇಷ್ಠ ಶಿಕ್ಷಕ, ಪ್ರಚಂಡ ವಾಗ್ಮಿ ವೃಷಭೇಂದ್ರಸ್ವಾಮಿಯವರು ಬಡತನದಲ್ಲಿಯೇ ಹುಟ್ಟಿ ಬೆಳೆದವರು. ಅವರು ಜನಿಸಿದ್ದು 1928ರ ಸೆಪ್ಟೆಂಬರ್ ಒಂದರಂದು ಎಂ.ಬಿ. ಅಯ್ಯನಹಳ್ಳಿಯಲ್ಲಿ. ಅದು ಬಳ್ಳಾರಿ ಜಿಲ್ಲೆ ಕೂಡ್ಲಿಗಿ ತಾಲ್ಲೂಕಿಗೆ ಸೇರಿದ ಸಣ್ಣ ಹಳ್ಳಿ. ತಂದೆ ಸೊನ್ನದ ಮುರಡಿಮಠದ ಕೊಟ್ರಪ್ಪಯ್ಯ, ತಾಯಿ ಬಸ್ಮ. ಬಾಲ್ಯದ ಶಿಕ್ಷಣ ಹುಟ್ಟೂರಲ್ಲಿ ಆದರೆ, ಬಳ್ಳಾರಿಯ ವೀರಶೈವ ಕಾಲೇಜಿನಲ್ಲಿ. ಇಂಟರ್‌ಮೀಟಿಯೆಟ್, ಎಂ.ಎ. ಪದವಿ ಮೈಸೂರಿನ ಮಹಾರಾಜಾ ಕಾಲೇಜಿನಲ್ಲಿ ಕುವೆಂಪುರವರ ಆಪ್ತ ಶಿಷ್ಯವರ್ಗದಲ್ಲಿ ಅವರೂ ಒಬ್ಬರು. ಹಳ್ಳಿಯ ಮುಗ್ಧಪರಿಸರದಿಂದ ಮೈಸೂರಿನ ಶೈಕ್ಷಣಿಕ ಪರಿಸರಕ್ಕೆ ವರ್ಗಾವಣೆಗೊಂಡಾಗಲೇ ಕುವೆಂಪು ವಿದ್ವತ್ ಪರಿಸರದಲ್ಲಿ ಅವರ ವ್ಯಕ್ತಿತ್ವದಲ್ಲಿ ಗಮನಾರ್ಹ ಬದಲಾವಣೆ ಕಾಣಿಸಿಕೊಂಡದ್ದು. 1950-1955ರ ಅವಧಿಯಲ್ಲಿ ವಿದ್ಯಾರ್ಥಿದೆಸೆಯಲ್ಲಿ ಅವರು ನಿತ್ಯವೂ ದಿನಚರಿ ಬರೆಯುವ ಪರಿಪಾಠವಿಟ್ಟುಕೊಂಡಿದ್ದರು. 2006ರಲ್ಲಿ ಈ ಕಾಲಘಟ್ಟದ ದಿನಚರಿ ಬೆಳಕು ಕಂಡಿತು. ಆ ಕೃತಿಯ ಹೆಸರು 'ಕುವೆಂಪು: ನನ್ನ ದಿನಚರಿಯ ಕನ್ನಡಿಯಲ್ಲಿ' - ಇದೊಂದು ಅಪೂರ್ವ ದಿನಚರಿ. ಅವರೇ ಹೇಳಿಕೊಂಡಿರುವಂತೆ 'ಈ ಕೃತಿ ದಿನಚರಿ ರೂಪದ ನೆನಪಿನ ಬುತ್ತಿ, ಸ್ಮೃತಿಸಂಚಯ. ಅಯ್ಯನಹಳ್ಳಿಯ ಮುಗ್ಧ ಹುಡುಗನೊಬ್ಬ, ಹೆಚ್ಚಿನ ಓದಿಗಾಗಿ ಮೈಸೂರಿಗೆ ಬಂದು, ಕುವೆಂಪು ಶಿಷ್ಯರಾಗಿ, ಅಲ್ಲಿನ ಸಾಹಿತ್ಯಕ ಹಾಗೂ ಸಾಂಸ್ಕೃತಿಕ ಪರಿಸರದಲ್ಲಿ ತನ್ನ ವ್ಯಕ್ತಿಯಾಗಿ ಮೈಸೂರಿಗೆ ಬಂದಾಗ ಕುವೆಂಪು 'ಬೆಳ್ಳಿ ನಕ್ಷತ್ರ'ವಾಗಿ ಕಂಡುಬಂದರು. 'ಬಾವಿಯ ಕಪ್ಪೆ'ಯಂತಿದ್ದ ನನ್ನ ಬದುಕನ್ನು ಸಾಹಿತ್ಯ ಮಹತೋಮಹಿಯಕ್ಕೆ ಏರಿಸಿದುದು ಕುವೆಂಪು ಸಾಹಿತ್ಯ. 'ನೀರಹನಿ' ಕುವೆಂಪು ಕಣ್ಣಾವಲಿನಲ್ಲಿ ಮೈಸೂರಿನ ಸಂಸ್ಕಾರದಿಂದ ನನ್ನ ಕಪ್ಪೆಚಿಪ್ಪು ಒಡೆದು 'ಜಾತಿಮುತ್ತಾಗಿ' ಪರಿವರ್ತನೆಯಾಯಿತು'. (ಈ ಕೃತಿಗೆ ಕುವೆಂಪು ವಿಶ್ವವಿದ್ಯಾಲಯ ಡಿ.ಲಿಟ್. ಪದವಿಯನ್ನು ಕೊಟ್ಟಿದೆ)

ಮಹಾರಾಜ ಕಾಲೇಜಿನ ವಿದ್ವತ್ ಪರಿಸರದಿಂದ ಸ್ವಾಮಿಯವರು ಎಷ್ಟರಮಟ್ಟಿಗೆ ಪ್ರಭಾವಿತರಾದರೆಂದರೆ ಅವರು ತಮ್ಮ ಗುರುಗಳ ಪಾಠವನ್ನು ತದೇಕಚಿತ್ತದಿಂದ ಕೇಳಿ ಟಿಪ್ಪಣಿ ಮಾಡಿಕೊಂಡು ಡಿ.ಎಲ್.ಎನ್. ಕನ್ನಡ ಸಾಹಿತ್ಯ ಚರಿತ್ರೆ, ತರಗತಿಗಳಲ್ಲಿ ಕುವೆಂಪು (ತೌಲನಿಕ ಕಾವ್ಯಮೀಮಾಂಸೆ) ಕೃತಿಗಳನ್ನು ಹೊರತಂದರು. ಕುವೆಂಪು ಅವರು ಸ್ವಾಮಿಯವರ ಆರಾಧ್ಯ ಗುರುವರ್ಯರು. ಸ್ವಾಮಿ ಹೇಳುವರು: "ಕುವೆಂಪು ನನ್ನ ಬದುಕಿನ ಆಶ್ರಯವಾದ ದೋಣಿ; ಸಾಹಿತ್ಯ, ಕಲೆ ನನ್ನ ಬದುಕನ್ನು ತೇಲಿಸುವ ಭಾವಸಮುದ್ರ. ನನ್ನ ಬದುಕಿನ ಗುರಿ ಈ ಕುವೆಂಪು ದೋಣಿ. ಅದರ ರಸಪೂರ್ಣ ನೆನಪುಗಳೇ ಜೀವನದ ರಸಘಟ್ಟಗಳು. ಅಧ್ಯಾತ್ಮದ ಗುರು ಬೇರೆಯಾದರೂ ಕುವೆಂಪುವೇ ನನ್ನ ಜೀವನದ ಗುರಿ ಮತ್ತು ನನ್ನ ಗರಿ".



ಸ್ವಾಮಿಯವರ ಬದುಕಿನ ಮೊದಲ ಘಟ್ಟ ಮೈಸೂರಿನ ಸಾಹಿತ್ಯ ಮತ್ತು ಸಾಂಸ್ಕೃತಿಕ ಪರಿಸರದಿಂದ ಆವೃತವಾಗಿದ್ದರೆ, ಅವರ ಬದುಕಿನ ಎರಡನೇ ಘಟ್ಟ ತೆರೆದುಕೊಂಡದ್ದು ಧಾರವಾಡದ ಶೈಕ್ಷಣಿಕ ವಲಯದಲ್ಲಿ. ಅಧ್ಯಾಪಕ, ರೀಡರ್, ಪ್ರಾಧ್ಯಾಪಕ, ವಿಭಾಗ ಮುಖ್ಯಸ್ಥರಾಗಿ; ಪಠ್ಯಪುಸ್ತಕ ನಿರ್ದೇಶನಾಲಯದ ನಿರ್ದೇಶಕರಾಗಿ; ಕನ್ನಡ ಸಂಶೋಧನ ಸಂಸ್ಥೆಯ ನಿರ್ವಾಹಕ ನಿರ್ದೇಶಕರಾಗಿ; ನಿವೃತ್ತಿಯ ನಂತರ ಮೈಸೂರು ವಿಶ್ವವಿದ್ಯಾನಿಲಯದ ಕುವೆಂಪು ಕಾವ್ಯಪೀಠದ ಸಂದರ್ಶಕ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದರು.

ಅವರು ಡಾ. ಆರ್.ಸಿ. ಹಿರೇಮಠರ ಮಾರ್ಗದರ್ಶನದಲ್ಲಿ 1975ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯಕ್ಕೆ 'ಕನ್ನಡ ಸಾಹಿತ್ಯದಲ್ಲಿ ಅಲ್ಲಮಪ್ರಭುದೇವ' ಎನ್ನುವ ಮಹಾ ಪ್ರಬಂಧವನ್ನು ಡಾಕ್ಟೋರಲ್ ಡಿಗ್ರಿಗಾಗಿ ಸಾದರಪಡಿಸಿದರು. ಅವರ 35 ವರ್ಷಗಳಷ್ಟು ದೀರ್ಘಾವಧಿಯ ವಿಶ್ವವಿದ್ಯಾಲಯದ ಸೇವೆಯಲ್ಲಿ ಪಡೆದದ್ದು ಸಹಸ್ರಾರು ಮಂದಿ ಶಿಷ್ಯರ ಪ್ರೀತಿ-ವಿಶ್ವಾಸಗಳನ್ನು. ಅವರು ಬರೆದದ್ದಕ್ಕಿಂತ ಭಾಷಣ ಮಾಡಿ ಜನರಲ್ಲಿ ಸಾಹಿತ್ಯಾಭಿರುಚಿ ಹೆಚ್ಚಿಸಿದುದೇ ಹೆಚ್ಚು. ನಾಡು-ನುಡಿಯ ಬಗೆಗೆ ಉಜ್ವಲ ಅಭಿಮಾನಿಯಾಗಿದ್ದ ಅವರು ಅವುಗಳಿಗೆ ಧಕ್ಕೆಯೊದಗಿದ ಸಂದರ್ಭದಲ್ಲಿ ಮುಂಚೂಣಿಯ ನಾಯಕರಾಗಿ ನಿಲ್ಲುತ್ತಿದ್ದರು. ಸ್ವಾಮಿ, ಸಾರಸ್ವತಲೋಕದ ಸಾಧಕರು. ಅವರು ದಣಿವರಿಯದೆ ಬರೆದರು. ಆದರೆ, ಪ್ರಕಟಿಸುವ ಗೋಜಿಗೆ ಹೋಗಲಿಲ್ಲ. ನಾನು ಎಷ್ಟೋ ಬಾರಿ "ನೀವು ನಿಮ್ಮ ಶ್ರೀಮತಿಯವರ ಸಮಗ್ರ ಸಾಹಿತ್ಯ ಹೊರತರುವಲ್ಲಿ ಉತ್ಸಾಹ ತೋರಿದಿರಿ; ನಿಮ್ಮ ಬರವಣಿಗೆಯ ಬಗೆಗೆ ಗಂಭೀರವಾಗಿ ಯೋಚಿಸಲೇ ಇಲ್ಲ" ಎಂದು ಆಕ್ಷೇಪಿಸಿದ್ದೂ ಉಂಟು. ಆಗೆಲ್ಲ ಅವರು ನಕ್ಕುಬಿಡುತ್ತಿದ್ದರು.

ಅವರು ತಮ್ಮ ಶಿಷ್ಯರ ಏಳಿಗೆಯಲ್ಲಿ ಸುಖ ಕಾಣುತ್ತಿದ್ದರು, ಹಿಗ್ಗುತ್ತಿದ್ದರು. ನನ್ನ ಅವರ ಸಂಬಂಧ ನಾಲ್ಕು ದಶಕಗಳದ್ದು. ನಾನು ಬರೆದ ಎಲ್ಲ ಕೃತಿಗಳನ್ನು ಓದಿ, ಸಂಭ್ರಮಿಸಿ ಹೊಗಳಿಕೆಯಲ್ಲಿ ನನ್ನನ್ನು ಮುಳುಗಿಸಿಬಿಡುತ್ತಿದ್ದರು. ಇಂಥ ನಿಷ್ಕಳಂಕ ಮನಸ್ಸಿನ ಗುರುವಿನ ಶಿಷ್ಯ ನಾನು!

ನಾನು ಕಂಡಂತೆ ನನ್ನ ಗುರುಗಳು ತಮಗೆ ಪ್ರಾಪ್ತಿಯಾಗದುದರ ಬಗೆಗೆ ಎಂದೂ ಕೊರಗಿದವರಲ್ಲ. ಅವರದು ಯೋಗಿಯ ಸಮತೋಲನದ ಮನಸ್ಸು. ಸಂತೃಪ್ತ ಜೀವವೊಂದು ತನ್ನ ಬದುಕನ್ನು ರೂಪಿಸಿಕೊಂಡ ರೀತಿ, ಸ್ವಾಭಿಮಾನಿ-ಛಲಗಳನ್ನು ತನ್ನಲ್ಲಿ ಅಳವಡಿಸಿಕೊಂಡ ರೀತಿ, ಅನ್ಯರ ಕಷ್ಟಸುಖಗಳನ್ನು ತನ್ನದಾಗಿ ಭಾವಿಸುವ ಈ ಹಿರಿಯ ಜೀವದ ಮನಃಸ್ಥಿತಿ ಅಪರೂಪದ್ದು, ಧಾರವಾಡದ ಸಾಹಿತ್ಯ ಹಾಗೂ ಸಾಂಸ್ಕೃತಿಕ ಬದುಕಿನ ಜೊತೆ ಹಾಸುಹೊಕ್ಕಾಗಿದ್ದ ಈ ಜೀವ ತನ್ನ ಕೊನೆಯುಸಿರಿನಲ್ಲಿ ಈ ಶಾಲ್ಮಲಿಯ ಅಂಟುನಂಟಿನ ಬೆಸುಗೆಯನ್ನು ಕಳಚಿಕೊಂಡಿತು.

# ವಾರ್ತಾವಿಹಾರ

**ಸಂತರಲ್ಲಿ ಸಮಾನತೆ ಅಗತ್ಯ**

ಸಂತರಲ್ಲಿ ಸಮಾನತೆ ಇದೆಯೇ ಎಂಬ ಕುರಿತು ಆತ್ಮವಿಮರ್ಶೆ ಮಾಡಿಕೊಳ್ಳಬೇಕಾದ ಕಾಲ ಸನ್ನಿಹಿತವಾಗಿದೆ. ಹೀಗಿರುವಾಗ ಅಸ್ಪೃಶ್ಯತೆ, ಅಸಮಾನತೆಯನ್ನು ತೊಡೆದುಹಾಕುವ ಸಂಕಲ್ಪವನ್ನು ಸಂತ ಸಮ್ಮೇಳನದಲ್ಲಿ ಮಾಡಿರುವುದು ಎಷ್ಟು ಪ್ರಸ್ತುತ ಎಂಬ ಪ್ರಶ್ನೆ ನಮ್ಮನ್ನು ಕಾಡುತ್ತಿದೆ. ಸಮಾಜವನ್ನು ಒಗ್ಗೂಡಿಸಲು ಮಾರ್ಗದರ್ಶಕರಾಗಿರಬೇಕಾದ ಸಂತರಲ್ಲಿಯೇ ಅಸಮಾನತೆ ಕಾಣುತ್ತಿದ್ದು, ಈ ತರಹದ ಬೆಳವಣಿಗೆ ಸರಿಯಲ್ಲ. ಕೆಲವು ಸಂತರು, ಮಠಾಧೀಶರು ಬೇರೆ ಗುರುಪೀಠಗಳ ಸ್ವಾಮೀಜಿಗಳ ಜತೆ ವೇದಿಕೆ ಹಂಚಿಕೊಳ್ಳಲು ಕೂಡ ಹಿಂದೇಟು ಹಾಕುತ್ತಿದ್ದಾರೆ. ಬೆಂಗಳೂರಿನಲ್ಲಿ ಒಮ್ಮೆ ಪೇಜಾವರ ಶ್ರೀಗಳಿಗೆ ಇಂತಹ ಪರಿಸ್ಥಿತಿ ಎದುರಾಗಿತ್ತು. ಹೀಗಿರುವಾಗ, ಎಲ್ಲರೂ ಒಂದೇ ಅನ್ನುವ ಸದ್ಭಾವನೆಯನ್ನು ಸಮಾಜದಲ್ಲಿ ಸಂತರು ಬಿತ್ತುವುದಾದರೂ ಹೇಗೆ? ಹಿಂದು ಧರ್ಮದಲ್ಲಿ ಅನೇಕತೆಗಳನ್ನು ಒಂದುಗೂಡಿಸುವುದು ಅಸಾಧ್ಯ. ಅದು ಅಪ್ರಸ್ತುತ ಕೂಡ. ಅನೇಕತೆಯ ಸಂಪ್ರದಾಯ ಗೌರವಿಸುವುದೇ ಹಿಂದು ಸಂಪ್ರದಾಯ ಎಂದು ಪರಮಪೂಜ್ಯ ಜಗದ್ಗುರುಗಳವರು ತಿಳಿಸಿದರು.

ದಿನಾಂಕ 11 ಮತ್ತು 12 ನವೆಂಬರ್ 2014 ರಂದು ತುಮಕೂರಿನ ಶ್ರೀ ಸಿದ್ಧಗಂಗಾ ಮಠದ ಆವರಣದಲ್ಲಿ ವಿಶ್ವ ಹಿಂದೂ ಪರಿಷತ್‌ನ ಸ್ವರ್ಣ ಜಯಂತಿ ಪ್ರಯುಕ್ತ ಆಯೋಜಿಸಿದ್ದ ಎರಡು ದಿನಗಳ ಸಂತ ಸಮ್ಮೇಳನದ ಸಮಾರೋಪ ಸಮಾರಂಭದಲ್ಲಿ ಪರಮಪೂಜ್ಯರು ಮಾತನಾಡಿದರು.

ಸಮಾರಂಭದಲ್ಲಿ ಶ್ರೀ ಸಿದ್ಧಗಂಗಾ ಮಠದ ಸಿದ್ಧಲಿಂಗ ಶ್ರೀಗಳು, ಶ್ರೀ ಪೇಜಾವರ ಮಠದ ಶ್ರೀ ವಿಶ್ವೇಶತೀರ್ಥ ಸ್ವಾಮೀಜಿ, ಮಂಗಳೂರಿನ ಶ್ರೀ ವಜ್ರದೇಹಿ ಮಠದ ಶ್ರೀ ರಾಜಶೇಖರಾನಂದ ಸ್ವಾಮೀಜಿ, ವಿಶ್ವ ಹಿಂದೂ ಪರಿಷತ್‌ನ ಉಪಾಧ್ಯಕ್ಷರಾದ ಶ್ರೀ ಜಿನೇಶ್ವರ ಮಿಶ್ರ, ಹಂಪಿಯ ಶ್ರೀ ವಿದ್ಯಾರಣ್ಯ ಭಾರತೀ ಸ್ವಾಮೀಜಿ, ಶ್ವಾಸಗುರು ಶ್ರೀ ವಚನಾನಂದ ಸ್ವಾಮೀಜಿ, ಬೇಲಿಮಠದ ಶ್ರೀ ಶಿವರುದ್ರ ಸ್ವಾಮೀಜಿ, ಹುಬ್ಬಳ್ಳಿ ಸಿದ್ಧಾರೂಢ ಮಠದ ಶ್ರೀ ಸಿದ್ಧ ಶಿವಯೋಗಿ ಸ್ವಾಮೀಜಿ ಭಾಗವಹಿಸಿ ಮೌಲಿಕವಾದ ಮಾತುಗಳನ್ನಾಡಿದರು.



**ಧರ್ಮರಕ್ಷಣೆಗೆ ಪಂಚಸೂತ್ರ - ಸಮ್ಮೇಳನದಲ್ಲಿ ಕೈಗೊಂಡ ಪಂಚ ನಿರ್ಣಯಗಳು:** 1. ಕಾನೂನಿನ ಮೂಲಕ ಗೋಹತ್ಯೆ ನಿಷೇಧ, 2. ಏಕರೂಪ ಸಮಾನ ನಾಗರಿಕ ಸಂಹಿತೆ, 3. ಮತಾಂತರ ತಡೆಗೆ ಕಾನೂನು, 4. ಭ್ರೂಣಹತ್ಯೆಗೆ ಮುಕ್ತ ಪರವಾನಗಿ ನೀಡುವ ಮಸೂದೆ ಹಿಂಪಡೆಯುವುದು, 5. ಭಾರತವನ್ನು ಮಾಂಸ ನಿರ್ಯಾತ ಮುಕ್ತ ರಾಷ್ಟ್ರವನ್ನಾಗಿ ಘೋಷಣೆ.

**ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ಮೈಸೂರು ನಗರ ಘಟಕದ**
**2ನೇ ಶರಣ ಸಾಹಿತ್ಯ ಸಮ್ಮೇಳನ**

ವಚನಗಳನ್ನು ಗಂಭೀರವಾಗಿ ಸ್ವೀಕರಿಸಿ ಜನರ ಬಳಿಗೆ ಕೊಂಡೊಯ್ಯುವ ಕೆಲಸವಾದಾಗ ಮಾತ್ರ ಸಮ್ಮೇಳನ ಸಾರ್ಥಕವಾಗಲಿದೆ ಎಂದು ಸುಪ್ರೀಂಕೋರ್ಟ್ ನಿವೃತ್ತ ನ್ಯಾಯಮೂರ್ತಿ ಡಾ. ವಿ. ಶಿವರಾಜ ಪಾಟೀಲ್ ಅಭಿಪ್ರಾಯಪಟ್ಟರು.

ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್, ಮೈಸೂರು ನಗರ ಘಟಕದಿಂದ ದಿನಾಂಕ 15 ಮತ್ತು 16 ನವೆಂಬರ್ 2014 ರಂದು ಪರಮಪೂಜ್ಯರ ಸಾನ್ನಿಧ್ಯದಲ್ಲಿ ಆಯೋಜಿಸಲಾಗಿದ್ದ ಎರಡು ದಿನಗಳ ಜಿಲ್ಲಾ ಸಮ್ಮೇಳನವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ನುಡಿದಂತೆ ನಡೆಯುವುದು ಮುನ್ನಡೆಯಾದರೆ, ನುಡಿದಂತೆ ನಡೆಯದೆ ಹೋದರೆ ಹಿನ್ನಡೆಯಾಗುತ್ತದೆ ಎಂದು 12ನೇ ಶತಮಾನದಲ್ಲಿಯೇ ವಚನಕಾರರು ತಿಳಿಸಿದ್ದಾರೆ. ನುಡಿ, ನಡೆಯಲ್ಲಿ ಭಕ್ತಿ, ಗೌರವವಿದ್ದರೆ ಮನುಷ್ಯನ ಉನ್ನತಿ ಸಾಧ್ಯ. ವಚನಕಾರರ ಬಹುತೇಕ ವಚನಗಳು ಇದೇ ಸಂದೇಶ ಸಾರುತ್ತದೆ. ಈ ನಿಟ್ಟಿನಲ್ಲಿ ವಚನ ಗಳನ್ನು ಓದಿ, ಜೀವನದಲ್ಲಿ ಅಳವಡಿಸಿಕೊಂಡಾಗ ಸತ್ಯದ ದರ್ಶನವಾಗುತ್ತದೆ ಎಂದರು.

ನುಡಿ-ನಡೆಯಲ್ಲಿ ಯಾವುದೇ ವ್ಯತ್ಯಾಸ ಇರಬಾರದು. ಆಡುವ ಮಾತು-ನಡೆದುಕೊಳ್ಳುವ ರೀತಿ ನಡುವೆ ಸತ್ಯವಿರಬೇಕು. ಈ ನಿಟ್ಟಿನಲ್ಲಿ ಸುತ್ತೂರು ಗುರುಪರಂಪರೆ ಸ್ಥಾಪಿಸಿದ ಶರಣ ಸಾಹಿತ್ಯ ಪರಿಷತ್ ಉತ್ತಮ ಕಾರ್ಯಕ್ರಮ ಹಮ್ಮಿಕೊಳ್ಳುತ್ತಿದೆ. ಹೀಗಾಗಿ ಶರಣ ಸಾಹಿತ್ಯ ಪರಿಷತ್ ಎಂಬ ಹೆಸರನ್ನು ವಿಸ್ತರಿಸಿ ಶರಣ ಸಾಹಿತ್ಯ-ಸಂಸ್ಕೃತಿ ಪರಿಷತ್ ಎಂದು ಮರು ನಾಮಕರಣ ಮಾಡುವ ಮೂಲಕ ಕಾರ್ಯಕ್ರಮ ಹಮ್ಮಿಕೊಳ್ಳುವ ಅವಶ್ಯಕತೆ ಇದೆ ಎಂದು ಹೇಳಿದರು.

ಸಮ್ಮೇಳನದ ಸರ್ವಾಧ್ಯಕ್ಷರಾದ ಶ್ರೀ ಎಚ್. ಗಂಗಾಧರನ್ ಮಾತನಾಡಿ, ಶರಣರು ಕೇವಲ ಮಾನವರ ಕಲ್ಯಾಣಕ್ಕಾಗಿ ಮಾತ್ರವಲ್ಲದೆ ಸೃಷ್ಟಿಯ ಸಕಲ ಜೀವಿಗಳ ಕ್ಷೇಮದ ಬಗ್ಗೆಯೂ ಚಿಂತನೆ ಮಾಡಿದ ಮಹಾನುಭಾವರಾಗಿದ್ದಾರೆ. ಅವರು ನೀಡಿದ ವಚನಸಂಪತ್ತು ಯಾವ ಜಾತಿ, ಮತ, ಪಂಥ, ದೇಶ ಭಾಷೆಗಳ ಸೀಮಿತಕ್ಕೆ ಸೇರಿದ ಸಂಪತ್ತಲ್ಲ. ಬದಲಿಗೆ ಲೋಕಕಲ್ಯಾಣಕ್ಕಾಗಿ ಬೆಳಗಿದ ಸಂಪತ್ತಾಗಿದೆ ಎಂದರು.

ಶರಣರ ಸಂಪತ್ತಿನಲ್ಲೂ ಅನೇಕ ವೈಶಿಷ್ಟ್ಯಗಳಿವೆ. ಹೀಗಾಗಿ ವಚನಶಾಸ್ತ್ರಸಂಪತ್ತು ಜಗತ್ತಿನ ಎಲ್ಲ ಸಂತರ ಜ್ಞಾನಸಂಪತ್ತಿನೊಡನೆ ಸಮರಸವಾಗಿ, ಭಾಷಾಂತರವಾಗಿ ಎಲ್ಲೆಡೆ ಪ್ರಕಟವಾಗಬೇಕು. ಆದರೆ ಇದು ನಿರೀಕ್ಷಿತ ರೂಪದಲ್ಲಿ ಬೆಳೆಯದ ಪರಿಣಾಮ ಜಗತ್ತಿಗೆ ಅಪಾರ ನಷ್ಟವಾಗಲಿದೆ ಎಂದರು.

ಇದೇ ವೇಳೆ ಸಂಸದ ಶ್ರೀ ಪ್ರತಾಪ್‌ಸಿಂಹ ವಿವಿಧ ಕೃತಿಗಳನ್ನು ಬಿಡುಗಡೆ ಮಾಡಿದರು. ಕಾರ್ಯಕ್ರಮದಲ್ಲಿ ಪರಮಪೂಜ್ಯ ಜಗದ್ಗುರುಗಳು, ಅಂಧ್ರಪ್ರದೇಶದ ಹಜರತ್ ಕ್ವಾಜಾ ಸೈಯಿದ್ ಷಾ ಸಾಹೇಬ್ ಪೀರ್ ಹುಸೇನ್ ಚಿಷ್ತಿ, ಕುದೇರು ಮಠದ ಶ್ರೀ ಗುರುಶಾಂತ ಸ್ವಾಮೀಜಿ, ವಾಟಾಳು ಮಠದ ಶ್ರೀ ಸಿದ್ಧಲಿಂಗ ಶಿವಾಚಾರ್ಯ ಸ್ವಾಮೀಜಿ, ಶಾಸಕರಾದ ಶ್ರೀ ವಾಸು, ಶ್ರೀ ಎಂ.ಕೆ. ಸೋಮಶೇಖರ್, ವಿಧಾನ ಪರಿಷತ್ ಸದಸ್ಯ ಶ್ರೀ ಗೋ. ಮಧುಸೂದನ್, ಮೇಯರ್ ಶ್ರೀ ಆರ್. ಲಿಂಗಪ್ಪ, ಉಪಮೇಯರ್ ಶ್ರೀಮತಿ ಮಹದೇವಮ್ಮ, ಮಾಜಿ ಎಂಎಲ್‌ಸಿ ಶ್ರೀ ತೋಂಟದಾರ್ಯ, ಸ್ವಾಗತ ಸಮಿತಿ ಪ್ರಧಾನ ಕಾರ್ಯದರ್ಶಿ ಶ್ರೀ ಗೊ.ರು. ಪರಮೇಶ್ವರಪ್ಪ ಇತರರು ಭಾಗವಹಿಸಿದ್ದರು.

**ಎಲ್ಲ ಸಮಸ್ಯೆಗೆ ಶರಣ ಸಾಹಿತ್ಯದಲ್ಲಿ ಪರಿಹಾರ**

ಶರಣರ ವಚನ ಸಾಹಿತ್ಯವನ್ನು ಅಧ್ಯಯನ ಮಾಡುವುದರಿಂದ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬಹುದಾದ ವಿಚಾರಧಾರೆಗಳನ್ನು ತಿಳಿದುಕೊಳ್ಳಲು ಸಾಧ್ಯವಿದೆ ಎಂದು ಪರಮಪೂಜ್ಯ ಜಗದ್ಗುರುಗಳು ತಿಳಿಸಿದರು.

ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ಮತ್ತು ರಮಣಶ್ರೀ ಪ್ರತಿಷ್ಠಾನದ ಸಹಯೋಗದಲ್ಲಿ ದಿನಾಂಕ 17.11.2014 ರಂದು ಬೆಂಗಳೂರಿನಲ್ಲಿ ನಡೆದ ಸಮಾರಂಭದಲ್ಲಿ 'ರಮಣಶ್ರೀ ಶರಣ ಪ್ರಶಸ್ತಿ' ಪ್ರದಾನ ಮಾಡಿ ಪೂಜ್ಯರು ಮಾತನಾಡಿದರು.

ಇತ್ತೀಚೆಗಿನ ದಿನದಲ್ಲಿ ಶರಣರ ವಚನ ಸಾಹಿತ್ಯವನ್ನು ಅಧ್ಯಯನ ಮಾಡುವ ಪದ್ಧತಿ ಕಡಿಮೆಯಾಗಿದೆ. ಇಂದಿನ ಯುವ ಪೀಳಿಗೆಗೆ ಸಾಹಿತ್ಯದ ಅಧ್ಯಯನದ ಮಹತ್ವದ ಅರಿವಿಲ್ಲ. ಸಾಹಿತ್ಯವನ್ನು ಅಭ್ಯಾಸ ಮಾಡುವುದರಿಂದ ಸಮಸ್ಯೆಗಳಿಗೆ ಪರಿಹಾರಗಳನ್ನು ಕಂಡುಕೊಳ್ಳಬಹುದು. ಸಾಕಷ್ಟು ವಿಚಾರಧಾರೆಗಳು ಅದರಲ್ಲಿ ಅಡಕವಾಗಿರುತ್ತವೆ ಎಂದು ಹೇಳಿದರು.

ಸಾಹಿತ್ಯವನ್ನು ಓದಿ ಅದರಲ್ಲಿನ ಸಾರಾಂಶಗಳನ್ನು ಅರಿತುಕೊಂಡು ಜೀವನದಲ್ಲಿ ಅಳವಡಿಸಿಕೊಂಡರೆ ಬದುಕಿನ ಮಹತ್ವ ಅರಿತುಕೊಳ್ಳಬಹುದು. ಅದರಿಂದ ಎದೆಗುಂದದೆ ಆತ್ಮಸ್ಥೈರ್ಯವನ್ನು ಬೆಳೆಸಿಕೊಳ್ಳಬಹುದು ಎಂದರು.

ನಿವೃತ್ತ ನ್ಯಾಯಮೂರ್ತಿ ಶ್ರೀ ರಾಮಾ ಜೋಯಿಸ್ ಮಾತನಾಡಿ, 'ಶರಣ ಸಾಹಿತ್ಯ ಸಂಸ್ಕೃತಿಗೆ ಆತ್ಮಸ್ಥೈರ್ಯ ನೀಡುವ ಶಕ್ತಿ ಇದೆ. ವಚನಕಾರರ ಸಾಹಿತ್ಯದ ಮೂಲಕ ನಶ್ವರವಾದ ಜೀವನವನ್ನು ಸಾರ್ಥಕಪಡಿಸಿಕೊಳ್ಳಬಹುದಾದ ಮಾರ್ಗೋಪಾಯವನ್ನು ಕಂಡುಕೊಳ್ಳಬಹುದು. ಆದರೆ, ಇತ್ತೀಚೆಗೆ ಮನುಷ್ಯ ನಿರ್ಮಾಣದ ವಿದ್ಯೆ ನೀಡುವ ಬದಲು ಹಣ ಮಾಡುವ ವಿದ್ಯೆ ನೀಡಲಾಗುತ್ತಿದೆ ಎಂದು ವಿಷಾದಿಸಿದರು.



ಇದೇ ವೇಳೆ ಶರಣ ಸಾಹಿತ್ಯ ಸಂಶೋಧನೆ, ವಚನ ರಚನೆ, ವಚನ ಸಂಗೀತ ಮತ್ತು ಶರಣ ಸಂಸ್ಕೃತಿ ಪ್ರಸಾರದಲ್ಲಿ ಉತ್ತಮ ಕಾರ್ಯ ಮಾಡಿದವರಿಗೆ ರಮಣಶ್ರೀ ಶರಣ ಪ್ರಶಸ್ತಿ ಪ್ರದಾನ ಮಾಡಿ ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ನಿಘಂಟು ತಜ್ಞ ಪ್ರೊ. ಜಿ. ವೆಂಕಟಸುಬ್ಬಯ್ಯ, ಬಸವ ಸಮಿತಿ ಅಧ್ಯಕ್ಷ ಶ್ರೀ ಅರವಿಂದ ಜತ್ತಿ, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಶ್ರೀ ಗೊ.ರು. ಚನ್ನಬಸಪ್ಪ, ರಮಣಶ್ರೀ ಪ್ರತಿಷ್ಠಾನದ ಅಧ್ಯಕ್ಷ ಶ್ರೀ ಎನ್. ಷಡಕ್ಷರಿ ಮುಂತಾದವರು ಉಪಸ್ಥಿತರಿದ್ದರು.

**ಕೈಲಾದಷ್ಟು ಋಣ ತೀರಿಸಿ**

ಮನುಷ್ಯ ಜೀವನವನ್ನು ತನ್ನ ಬದುಕಿಗೆ ಮಾತ್ರ ಸೀಮಿತಗೊಳಿಸಿಕೊಳ್ಳದೆ ತನ್ನ ಬೆಳವಣಿಗೆ ಮತ್ತು ಬದುಕಿಗೆ ಅವಕಾಶ ಕಲ್ಪಿಸಿಕೊಟ್ಟ ಸಮಾಜದ ಋಣ ತೀರಿಸಲು ವಿನಿಯೋಗಿಸಬೇಕು ಎಂದು ಪರಮಪೂಜ್ಯ ಜಗದ್ಗುರುಗಳು ಹೇಳಿದರು.

ದಿನಾಂಕ 23.1.2015 ರಂದು ಜರುಗಿದ ವೀರಶೈವ ಮುಖಂಡರು, ಕರ್ನಾಟಕ ವೀರಶೈವ ವಿದ್ಯಾಭಿವೃದ್ಧಿ ಸಂಸ್ಥೆಯ ಅಧ್ಯಕ್ಷರೂ ಆದ ಶ್ರೀ ಬಿ.ಎಸ್. ಪರಮಶಿವಯ್ಯ ನವರ 75ನೇ ವರ್ಷದ ಅಭಿನಂದನಾ ಸಮಾರಂಭದಲ್ಲಿ ಪರಮಪೂಜ್ಯರು ಆಶೀರ್ವಚನ ನೀಡಿದರು. ಬೆಂಗಳೂರಿನ ಬಸವೇಶ್ವರ ಸುಜ್ಞಾನ ಮಂಟಪದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಪರಮಪೂಜ್ಯರು ಧಾರ್ಮಿಕ, ಶೈಕ್ಷಣಿಕ ಮತ್ತು ಸಹಕಾರಿ ಕ್ಷೇತ್ರದಲ್ಲಿ ಉದಾತ್ತ ಸೇವೆ ಸಲ್ಲಿಸುತ್ತಿರುವ ಪರಮಶಿವಯ್ಯನವರ ಸಾಮಾಜಿಕ ಕಾರ್ಯ ಶ್ಲಾಘನೀಯ ಎಂದರು.

ಶ್ರೀ ಬಿ.ಎಸ್. ಪರಮಶಿವಯ್ಯ ಹಿರಿಯ ನಾಗರಿಕರ ವಸತಿ ನಿಲಯ ಮತ್ತು ಅನಾಥಾಲಯಕ್ಕೆ ಸಂಸದ ಶ್ರೀ ಬಿ.ಎಸ್. ಯಡಿಯೂರಪ್ಪ ಅವರು ಶಿಲಾನ್ಯಾಸ ನೆರವೇರಿಸಿದರು. ಈ ಸಂದರ್ಭದಲ್ಲಿ ಪರಮಶಿವಯ್ಯ ಮತ್ತು ಪತ್ನಿ ಸರ್ವಮಂಗಳ ಅವರನ್ನು ಸನ್ಮಾನಿಸಲಾಯಿತು. ಸಿದ್ಧಗಂಗಾ ಮಠದ ಶ್ರೀ ಸಿದ್ಧಲಿಂಗ ಸ್ವಾಮೀಜಿ, ಮೇಯರ್ ಶ್ರೀಮತಿ ಎನ್. ಶಾಂತಕುಮಾರಿ, ಶಾಸಕ ಶ್ರೀ ಎಂ. ಕೃಷ್ಣಪ್ಪ, ಹಿರಿಯ ಸಾಹಿತಿ ಪ್ರೊ. ಜಿ.ಎಸ್. ಸಿದ್ಧಲಿಂಗಯ್ಯ ಉಪಸ್ಥಿತರಿದ್ದರು.

## ಜಾತ್ರಾ ಮಹೋತ್ಸವದ ವರದಿ

ದಿನಾಂಕ 17.1.2015 ರಿಂದ 22.1.2015 ರವರೆಗೆ ನಡೆದ ಜಾತ್ರಾ ಮಹೋತ್ಸವದ ಕಾರ್ಯಕ್ರಮಗಳು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಜರುಗಿದವು.

ಜಾತ್ರಾ ಮಹೋತ್ಸವದಲ್ಲಿ ದಿನಾಂಕ 17.1.2015 ರಂದು ಭಜನಾಮೇಳವನ್ನು ಉದ್ಘಾಟಿಸಿ ಕೇಂದ್ರ ಸಚಿವರಾದ ಶ್ರೀ ಅನಂತಕುಮಾರ್‌ರವರು ಮಾತನಾಡುತ್ತ, ನಾವೆಲ್ಲ ರಾಜಕಾರಣಿಗಳಾಗಿ ಇಲ್ಲಿಗೆ ಬಂದಿಲ್ಲ, ಭಕ್ತಾದಿಗಳಾಗಿ ಬಂದಿದ್ದೇವೆ. ಈ ವೇದಿಕೆಯಲ್ಲಿ ಕೇಂದ್ರ ಹಾಗೂ ರಾಜ್ಯದ ವಿವಿಧ ಮಂತ್ರಿಗಳಿದ್ದಾರೆ. ನಾವೆಲ್ಲ ಇಲ್ಲಿ ರಾಜಕಾರಣವನ್ನು ಮರೆತು ಸೌಹಾರ್ದದಿಂದ ಇದ್ದೇವೆ. ಏಕೆಂದರೆ ಸುತ್ತೂರು ಶ್ರೀಕ್ಷೇತ್ರ ಸಮಾನತೆಯ ಸಂಕೇತ, ಧರ್ಮಕ್ಷೇತ್ರ ಎಂದು ಬಣ್ಣಿಸಿದರು.

ಜಾತ್ರಾ ಮಹೋತ್ಸವದ ಅಂಗವಾಗಿ ದಿನಾಂಕ 17.1.2015 ರಂದು ಏರ್ಪಡಿಸಿದ್ದ 23ನೇ ಭಜನಾ ಮೇಳ, ಚಿತ್ರಕಲೆ, ರಂಗೋಲಿ, ಗಾಳಿಪಟ, ಸೋಬಾನೆ ಪದ ಸ್ಪರ್ಧೆಗಳು ಹಾಗೂ ದೋಣಿ ವಿಹಾರ ಮತ್ತು ಸ್ವಚ್ಛತಾ ಆಂದೋಲನ ಅಭಿಯಾನ ಇವೇ ಮೊದಲಾದ ಹತ್ತು ಹಲವು ಸ್ಪರ್ಧಾ ಕಾರ್ಯಕ್ರಮಗಳು ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ದಿವ್ಯ ಸಾನ್ನಿಧ್ಯದಲ್ಲಿ ಮತ್ತು ದೇವನೂರು ಶ್ರೀ ಗುರುಮಲ್ಲೇಶ್ವರ ದಾಸೋಹ ಮಹಾಸಂಸ್ಥಾನ ಮಠದ ಶ್ರೀ ಮಹಾಂತಸ್ವಾಮಿಗಳು ಹಾಗೂ ದಾವಣಗೆರೆ ಶ್ರೀ ವಿರಕ್ತ ಮಠ, ಬಸವ ಕೇಂದ್ರದ ಶ್ರೀ ಬಸವಪ್ರಭು ಸ್ವಾಮಿಗಳ ಸಮ್ಮುಖದಲ್ಲಿ ಸಡಗರ, ಸಂಭ್ರಮ ಮತ್ತು ವಿಜೃಂಭಣೆಯಿಂದ ಚಾಲನೆಗೊಂಡವು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ನ್ಯೂಜಿಲ್ಯಾಂಡ್‌ನ ದಿ ಆಕ್‌ಲ್ಯಾಂಡ್ ಇಂಡಿಯನ್ ಅಸೋಸಿಯೇಷನ್‌ನ ಸಂಚಾಲಕರಾದ ಡಾ. ಲಿಂಗಪ್ಪ ಕಲಬುರ್ಗಿರವರು ಮಾತನಾಡುತ್ತಾ ಬಯಸಿ ಬಂದದ್ದು ಅಂಗಭೋಗ, ಬಯಸದೇ ಬಂದದ್ದು ಲಿಂಗಭೋಗ ಎಂಬ ವಚನಕಾರರ ಮಾತಿನಂತೆ ಈ ಕಾರ್ಯಕ್ರಮಕ್ಕೆ ಬಂದದ್ದು ನನಗೆ ಬಯಸದೇ ಬಂದ ಭಾಗ್ಯವೆಂದರು. ಪೂಜ್ಯ ಶ್ರೀಗಳವರು ಎಲ್ಲ ವರ್ಗದವರಿಗೂ ಅನುಕೂಲವಾಗುವಂತೆ ಜಾತ್ರೆಯ ಮೂಲಕ ಜ್ಞಾನದಾಸೋಹ ನೀಡುವ ಕೈಂಕರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ ಎಂದರು.

ಕಾರ್ಯಕ್ರಮದಲ್ಲಿ ಮಹಾರಾಷ್ಟ್ರದ ಶ್ರೀ ಗಂಗಾಧರ ಶಿವಾಚಾರ್ಯ ಮಹಾಸ್ವಾಮಿಗಳವರು, ಲಲಿತಕಲಾ ಅಕಾಡೆಮಿ ಅಧ್ಯಕ್ಷರಾದ ಶ್ರೀ ಎಂ.ಎಸ್. ಮೂರ್ತಿ, ಮಾಜಿ ವಿಧಾನಸಭಾ ಸದಸ್ಯರಾದ ಶ್ರೀ ಬಿ.ಸಿ. ಪಾಟೀಲ್‌ರವರು, ಮಾಜಿ ವಿಧಾನಸಭಾ ಸದಸ್ಯರಾದ ಶ್ರೀ ಮಹಿಮಾ ಪಟೇಲ್, ಅಮೆರಿಕಾದ ಫಾರ್ಮ್ಯುಲೇಷನ್ಸ್‌ನ ಹಿರಿಯ ಉಪಾಧ್ಯಕ್ಷರಾದ ಶ್ರೀ ಮುತ್ತುಸ್ವಾಮಿ ಷಣ್ಮುಗಂ, ಜೆಎಸ್‌ಎಸ್ ವಿಶ್ವವಿದ್ಯಾನಿಲಯದ ಕುಲಪತಿಗಳಾದ ಡಾ. ಬಿ. ಸುರೇಶ್, ಕರ್ನಾಟಕ ಸಹಕಾರಿ ಹಾಲು ಉತ್ಪಾದಕರ ಮಹಾಮಂಡಳಿಯ ಶ್ರೀ ಪಿ. ನಾಗರಾಜು, ಅಮೇರಿಕಾದ ಲಲಿತಕಲೆ ಕಾಲೇಜಿನ ಪ್ರಾಧ್ಯಾಪಕರಾದ ಪ್ರೊ. ಡೇವಿಡ್ ಡೇವಿಸನ್, ಹನೂರು ಶಾಸಕರಾದ ಶ್ರೀ ನರೇಂದ್ರ, ಶ್ರೀಮತಿ ಉಮಾ ಉಮೇಶ್‌ಮೂರ್ತಿರವರುಗಳು ಉಪಸ್ಥಿತರಿದ್ದರು.



ಜಾತ್ರಾ ಮಹೋತ್ಸವದ ಅಂಗವಾಗಿ ದಿನಾಂಕ 18.1.2015 ರಂದು ಏರ್ಪಡಿಸಿದ್ಧ ಉಚಿತ ಸಾಮೂಹಿಕ ವಿವಾಹ ಹಾಗೂ ದೇಸೀ ಆಟಗಳ ಉದ್ಘಾಟನಾ ಸಮಾರಂಭಗಳು ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳ ದಿವ್ಯ ಸಾನ್ನಿಧ್ಯದಲ್ಲಿ ಜರುಗಿದವು.

ಕೇಂದ್ರ ಕಾನೂನು ಮತ್ತು ನ್ಯಾಯ ಸಚಿವರು ಹಾಗೂ ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಡಿ.ವಿ. ಸದಾನಂದಗೌಡರು ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡುತ್ತಾ, ಇದೊಂದು ಅದ್ಭುತ ಸಂಬಂಧ ಬೆಸೆಯುವ ಸಮಾರಂಭದ ನನ್ನ ಜೀವನದಲ್ಲಿ ಅತ್ಯಂತ ಮಹತ್ವದ ಕ್ಷಣ. ಮದುವೆ ಎಂಬುದು ಜೀವನದಲ್ಲಿ ಪ್ರಮುಖ ಘಟ್ಟ, ಬಾಂಧವ್ಯ ಹಾಗೂ ಸಂಬಂಧಗಳನ್ನು ಬೆಸೆಯುವ ಕ್ಷಣ. ಇಂದಿನ ಸಾಮಾಜಿಕ ವ್ಯವಸ್ಥೆಯಲ್ಲಿ ಜಗತ್ತು ಬಹು ವೇಗವಾಗಿ ಬೆಳೆಯುತ್ತಿದೆ. ಈ ವೇಗಕ್ಕೆ ಅನುಗುಣವಾಗಿ ಮನುಷ್ಯನು ಹೊಂದಿಕೊಂಡು ಹೋಗಬೇಕು. ಪ್ರಕೃತಿಯಲ್ಲಿರುವ ಸಂಸ್ಕೃತಿ ವಿಕೃತಿಯಾದಾಗ ಸಾಮಾಜಿಕ ವ್ಯವಸ್ಥೆ ಏರುಪೇರಾಗುತ್ತದೆ. ಸಮಾಜದ ಅಧಃಪತನಕ್ಕೆ ದಾರಿಯಾಗುತ್ತದೆ. ನಾವು ಸುಧಾರಣೆಯತ್ತ ಗಮನ ಹರಿಸಬೇಕು. ಪಾತ್ರೆಯ ಆಕೃತಿಗೆ ತಕ್ಕಂತೆ ನೀರು ಹೊಂದಿಕೊಳ್ಳುವಂತೆ ಮನುಷ್ಯನೂ ಸಹ ಸಂದರ್ಭಕ್ಕನುಗುಣವಾಗಿ ಹೊಂದಿಕೊಂಡು ಹೋಗುವುದನ್ನು ಕಲಿಯಬೇಕು ಎಂದು ನವಜೋಡಿಗಳಿಗೆ ಜಾಗರೂಕತೆಯಿಂದ ಜೀವನ ರೂಪಿಸಿಕೊಳ್ಳಿ ಎಂದು ಕಿವಿಮಾತು ಹೇಳಿದರು.

ಕರ್ನಾಟಕದ ಉಪಲೋಕಾಯುಕ್ತರಾದ ನ್ಯಾ. ಸುಭಾಷ್ ಬಿ. ಅಡಿಯವರು ನವಜೋಡಿಗಳಿಗೆ ಮಾಂಗಲ್ಯ ವಿತರಣೆ ಮಾಡಿದರು. ಮಾಜಿ ಸಚಿವರಾದ ಆರ್. ಅಶೋಕ್, ಶ್ರೀ ಬಸವರಾಜ ರಾಯರೆಡ್ಡಿ, ವಿಧಾನಪರಿಷತ್ ಸದಸ್ಯರಾದ ಶ್ರೀ ವೀರಣ್ಣ ಮತ್ತೀಕಟ್ಟಿ, ಕರ್ನಾಟಕ ಗೃಹ ಮಂಡಳಿ ಅಧ್ಯಕ್ಷರಾದ ಶ್ರೀ ಎಸ್.ಜಿ. ನಂಜಯ್ಯಮಠ್, ಶಾಸಕರಾದ ಶ್ರೀ ತನ್ವೀರ್‌ಸೇಠ್ ಸಮಾರಂಭದಲ್ಲಿ ಉಪಸ್ಥಿತರಿದ್ದರು.

ಮುರಗೋಡ ಶ್ರೀ ಮಹಾಂತ ದುರದುಂಡೇಶ್ವರ ಮಠದ ನಿ.ಪ್ರ.ಸ್ವ. ಶ್ರೀ ನೀಲಕಂಠ ಮಹಾಸ್ವಾಮಿಗಳು ಹಾಗೂ ಕನಕಪುರದ ಶ್ರೀ ದೇಗುಲ ಮಠದ ನಿ.ಪ್ರ.ಸ್ವ. ಶ್ರೀ ಮುಮ್ಮಡಿ ನಿರ್ವಾಣ ಸ್ವಾಮಿಗಳು ಕಾರ್ಯಕ್ರಮದ ಸಮ್ಮುಖ ವಹಿಸಿ ನೂತನ ದಂಪತಿಗಳಿಗೆ ಹಾರೈಸಿ ಆಶೀರ್ವದಿಸಿದರು.

ಜಾತ್ರಾ ಮಹೋತ್ಸವದ ಅಂಗವಾಗಿ ದಿನಾಂಕ 19.1.2015 ರಂದು ನಡೆದ ಧಾರ್ಮಿಕ ಸಭೆಯ ಕಾರ್ಯಕ್ರಮವನ್ನು ಉದ್ಘಾಟಿಸಿದ ಲೋಕಸಭೆಯ ಕಾಂಗ್ರೆಸ್ ಪಕ್ಷದ ನಾಯಕರಾದ ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆಯವರು ಮಾತನಾಡಿ, ಜನರ ಮನಸ್ಸಿನಲ್ಲಿ ಸಮಾನತೆ, ಏಕತೆಯನ್ನು ಬಿತ್ತುವುದೇ ನಿಜವಾದ ಧರ್ಮ. ಎಲ್ಲಾ ಧರ್ಮಗಳು ಮಾನವೀಯತೆಯನ್ನೇ ಸಾರುತ್ತವೆ. ಮಾನವರೆಲ್ಲಾ ಒಂದೇ ಎಂಬುದು

ಎಲ್ಲಾ ಧರ್ಮಗಳ ಸಾರ. ಸ್ವಾತಂತ್ರ್ಯ ಸಮಾನತೆ, ಭ್ರಾತೃತ್ವವನ್ನು ಪ್ರತಿಪಾದಿಸುವ ಹಾಗೂ ಎಲ್ಲರನ್ನೂ ಒಂದುಗೂಡಿಸುವ ಧರ್ಮ ಇಂದು ಬೇಕಾಗಿದೆ. ಸಮಾನತೆಗಾಗಿ ಸಾಮಾಜಿಕ ಕ್ರಾಂತಿ ಮಾಡಿದ ಬಸವಾದಿ ಶರಣರ ತತ್ವಗಳನ್ನು ಇಂದಿನ ಮಠಗಳಲ್ಲಿ ನೋಡುತ್ತಿದ್ದೇವೆ. ಧರ್ಮಜಾಗೃತಿ ಕಾರ್ಯ ಇಂದು ಹೆಚ್ಚಾಗಿ ನಡೆಯಬೇಕಾಗಿದೆ ಎಂದರು.

ಇಂದು ವಿದ್ಯಾವಂತರ ಸಂಖ್ಯೆ ಹೆಚ್ಚಾಗುತ್ತಿದೆ. ಆದರೆ ವಿದ್ಯಾವಂತರಾದವರೆ ಸಂಕುಚಿತರು, ಸ್ವಾರ್ಥಿಗಳು, ಭ್ರಷ್ಟರು ಆಗುತ್ತಿದ್ದಾರೆ. ಸಮಾಜದಲ್ಲಿ ಒಗ್ಗಟ್ಟು ಇರದಿದ್ದರೆ ಐಕ್ಯತೆ ಸಾಧ್ಯವಿಲ್ಲ ಎಂದು ಹೇಳಿದರು.

ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಎನ್. ಧರ್ಮಸಿಂಗ್‌ರವರು ಮಾತನಾಡಿ, ದೇಶದ ಶೋಷಿತ ವರ್ಗದವರ ಉದ್ಧಾರಕ್ಕಾಗಿ ಬಸವಣ್ಣನವರು ಅಂದು ಮಾಡಿದ ಕೆಲಸವನ್ನು ಇಂದು ಮಠಗಳು ಮಾಡುತ್ತಿವೆ ಎಂದು ಹೇಳಿದರು.

ಸಮಾರಂಭದಲ್ಲಿ ಮಾಜಿ ರಾಜ್ಯ ಅಭಿಯೋಜಕರಾದ ಶ್ರೀ ಎಚ್.ಎಸ್. ಚಂದ್ರಮೌಳಿ, ರಾಷ್ಟ್ರೀಯ ಸಫಾಯಿ ಕರ್ಮಚಾರಿಗಳ ಆಯೋಗದ ಅಧ್ಯಕ್ಷರಾದ ಶ್ರೀ ಎಂ. ಶಿವಣ್ಣ, ದಾವಣಗೆರೆಯ ಕೈಗಾರಿಕೋದ್ಯಮಿಗಳಾದ ಶ್ರೀ ಅಥಣಿ ಎಸ್. ವೀರಣ್ಣ ಮುಂತಾದವರು ಭಾಗವಹಿಸಿದ್ದರು.

ಜಾತ್ರಾ ಮಹೋತ್ಸವದ ಅಂಗವಾಗಿ ದಿನಾಂಕ 20.1.2015 ರಂದು ಆಯೋಜಿಸಲಾಗಿದ್ದ ಕೃಷಿ ಸಮ್ಮೇಳನ ಮತ್ತು ಬೀಜ ಸಂಸ್ಕರಣ ಘಟಕದ ಉದ್ಘಾಟನಾ ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಹಾಗೂ ಹಜ್ ಸಚಿವ ಶ್ರೀ ಆರ್. ರೋಷನ್ ಬೇಗ್‌ರವರು ಮಾತನಾಡಿ, ನನಗೆ ಶ್ರೀಮಠ ಹಿಂದಿನಿಂದಲೂ ಪರಿಚಯವಿದೆ. ನಾನು ಅನೇಕ ಬಾರಿ ಶ್ರೀಮಠ ಸುತ್ತೂರಿಗೆ ಭೇಟಿ ನೀಡಿದ್ದೇನೆ. ಸರ್ಕಾರದಿಂದ ಈ ಸಂಸ್ಥೆಗೆ ಬೇಕಾದ ಎಲ್ಲಾ ಸಹಾಯವನ್ನು ಮಾಡಲು ಸಿದ್ಧನಿದ್ದೇನೆ ಎಂದು ಭರವಸೆ ನೀಡಿದರು ಹಾಗೂ ಶ್ರೀಮಠದ ಸೇವೆಯನ್ನು ಸ್ಮರಿಸಿದರು.

ವಿಧಾನಸಭಾ ಸದಸ್ಯರು ಹಾಗೂ ಮಾಜಿ ಸಚಿವರಾದ ಶ್ರೀ ಬಸವರಾಜ ಎಸ್. ಬೊಮ್ಮಾಯಿರವರು ಮಾತನಾಡಿ, ಸುತ್ತೂರು ಜಾತ್ರೆ ನಾಡಿನ ಸಂಸ್ಕೃತಿಯ ಒಂದು ಪ್ರತೀಕ. ಶ್ರೀಗಳವರು ಗ್ರಾಮೀಣ ಜನತೆಯ ಬದುಕಿಗೆ ಬೇಕಾದ ಕೃಷಿಮೇಳ, ವಸ್ತುಪ್ರದರ್ಶನ, ದನಗಳ ಜಾತ್ರೆ ಹೀಗೆ ಹಲವು ಕಾರ್ಯಕ್ರಮಗಳನ್ನು ರೂಪಿಸಿ ಮಾರ್ಗದರ್ಶಕರಾಗಿದ್ದಾರೆ. ರಾಜ್ಯದ ಎಲ್ಲಾ ರಾಜಕಾರಣಿಗಳನ್ನು ಕಾರ್ಯಕ್ರಮಕ್ಕೆ ಆಹ್ವಾನಿಸಿ, ನೈತಿಕ ಶಕ್ತಿಯನ್ನು ತುಂಬುತ್ತಿದ್ದಾರೆ. ರೈತರು ಯಾವ ಪಕ್ಷಕ್ಕೂ ಸೇರಿದವರಲ್ಲ. ಆದರೆ ಎಲ್ಲಾ ರಾಜಕೀಯ ಪಕ್ಷಗಳು ರೈತರಿಗೆ ಸೇರಿವೆ. ಇದನ್ನು ರಾಜಕಾರಣಿಗಳು ಅರ್ಥಮಾಡಿಕೊಳ್ಳಬೇಕು. ನಾನು ನೀರಾವರಿ ಮಂತ್ರಿಯಾಗಿದ್ದಾಗ,



ಪೂಜ್ಯ ಶ್ರೀಗಳವರ ಆಶೀರ್ವಾದದಿಂದ ಈ ಭಾಗದ ನೀರಾವರಿ ಸ್ಥಳಗಳು ಸೇರಿದಂತೆ ರಾಜ್ಯದ ವಿವಿಧೆಡೆ. ಉತ್ತಮವಾಗಿ ನೀರಾವರಿ ಕೆಲಸಗಳನ್ನು ಮಾಡಿಸಿದ್ದೇನೆ. ಸುತ್ತೂರು ಶ್ರೀಮಠ ಎಲ್ಲ ಕ್ಷೇತ್ರಗಳಲ್ಲೂ ಉತ್ತಮವಾಗಿ ಕಾರ್ಯ ನಿರ್ವಹಿಸುತ್ತಿದೆ ಎಂದರು.

ಸಮಾರಂಭದಲ್ಲಿ ಶಿವಮೊಗ್ಗ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ. ಸಿ. ವಾಸುದೇವಪ್ಪ, ಬೆಂಗಳೂರಿನ ಕೃಷಿ ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ. ಡಿ.ಪಿ. ಕುಮಾರ್, ಕರ್ನಾಟಕ ರಾಜ್ಯ ಬೀಜ ನಿಗಮದ ಅಧ್ಯಕ್ಷರಾದ ಶ್ರೀ ಸುಂದರದಾಸ್ ಮುಂತಾದವರು ಭಾಗವಹಿಸಿದ್ದರು.

ದಿನಾಂಕ 20.1.2015 ರಂದು ಕೃಷಿಮೇಳದ ಮತ್ತು ಬೀಜ ಸಂಸ್ಕರಣ ಘಟಕದ ಉದ್ಘಾಟನೆ ಮಾಡಿದ ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್. ಯಡಿಯೂರಪ್ಪ ನವರು ಮಾತನಾಡಿ, ಅನ್ನ ಕೊಡುವ ರೈತರು ಈ ದೇಶದಲ್ಲಿ ಗೌರವದಿಂದ, ಹೆಮ್ಮೆಯಿಂದ ಬದುಕಬೇಕು. ಅದಕ್ಕಾಗಿ ಸರ್ಕಾರ ರೈತರ ಬದುಕನ್ನು ಹಸನುಗೊಳಿಸುವ ಯೋಜನೆಗಳನ್ನು ರೂಪಿಸಿ ಕಾರ್ಯಗತಗೊಳಿಸಬೇಕು. ಕೆರೆಗಳಿಗೆ ನೀರು ತುಂಬಿಸುವುದು, ವೈಜ್ಞಾನಿಕ ಬೆಲೆ ನಿಗದಿ, ಬೆಳೆ ವಿಮೆ, ಮುಂತಾದವುಗಳನ್ನು ಕಾರ್ಯರೂಪಕ್ಕೆ ತರಬೇಕು ಎಂದ ಅವರು ಐತಿಹಾಸಿಕ ಹಿನ್ನೆಲೆಯುಳ್ಳ ಸುತ್ತೂರು ಶ್ರೀಮಠವು ಶ್ರದ್ಧಾ, ಭಕ್ತಿ ಕೇಂದ್ರವಾಗಿ ಜನೋಪಯೋಗಿ ಕಾರ್ಯಗಳನ್ನು ಮಾಡುತ್ತಿದೆ ಎಂದರು.

ಅಖಿಲ ಭಾರತ ವೀರಶೈವ ಮಹಾಸಭಾ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ಗಳಾದ ಶ್ರೀ ಬಿ.ಎಸ್. ವಾಗೀಶ್ ಪ್ರಸಾದ್‌ರವರು ಮಾತನಾಡಿ, ಮಠಗಳೆಂದರೆ, ಸಮಾಜದ ಅಧಿಪತಿಗಳು, ಮಠಗಳ ಆದರ್ಶ, ತತ್ವ, ಸಿದ್ಧಾಂತಗಳನ್ನು ಸರ್ಕಾರಗಳು ಅನುಸರಿಸಿ ನಡೆಯಬೇಕೆಂದರು. ಕರ್ನಾಟಕದಲ್ಲಿ ವೀರಶೈವ ಸಮಾಜದ ಎಲ್ಲಾ ಸಮಾಜದವರೊಂದಿಗೆ ಸೌಹಾರ್ದತೆಯಿಂದ ನಡೆದುಕೊಂಡು, ಸಮಾನತೆಗಾಗಿ ಶ್ರಮಿಸುತ್ತಿದೆ. ಸುತ್ತೂರು ಶ್ರೀಮಠ 'ಇವನಮ್ಮವ, ಇವನಮ್ಮವ' ಎನ್ನುತ್ತ ಶೈಕ್ಷಣಿಕ ಸಾಮಾಜಿಕವಾಗಿ ಉತ್ತಮ ಕಾರ್ಯ ನಿರ್ವಹಿಸುತ್ತಿದೆ ಎಂದರು.

ವಿಧಾನಸಭಾ ಸದಸ್ಯರಾದ ಮಾಜಿ ಸಚಿವ ಶ್ರೀ ಜಿ.ಟಿ. ದೇವೇಗೌಡರವರು ಮಾತನಾಡಿ, ಭಕ್ತರನ್ನು ತನ್ನತ್ತ ಸೆಳೆಯುವ ಶಕ್ತಿ ಸುತ್ತೂರು ಶ್ರೀಮಠಕ್ಕೆ ಇದೆ. ನಾವು ನೀವೆಲ್ಲರೂ ಶ್ರೀಮಠಕ್ಕೆ ಕೃತಜ್ಞರಾಗಿರೋಣವೆಂದರು.

ಸಮಾರಂಭದಲ್ಲಿ ಮಾಜಿ ಸಚಿವ ಶ್ರೀ ಅಲ್ಲಂ ವೀರಭದ್ರಪ್ಪ, ವಿಧಾನಪರಿಷತ್ ಸದಸ್ಯ ಶ್ರೀ ಧರ್ಮಸೇನ ಮುಂತಾದ ಗಣ್ಯರು ಉಪಸ್ಥಿತರಿದ್ದರು.

ದಿನಾಂಕ 21.1.2015 ರಂದು ರಾಜ್ಯಮಟ್ಟದ ಇಪ್ಪತ್ತೂರನೆಯ ಭಜನಾಮೇಳ ಸಮಾರೋಪ ಸಮಾರಂಭದಲ್ಲಿ ವಿಜೇತ ಪುರುಷ ತಂಡಗಳಿಗೆ ಬಹುಮಾನ ವಿತರಿಸಿ ಮಾತನಾಡಿದ ಮಾಜಿ ಸಭಾಪತಿಗಳು ಹಾಗೂ ಅಖಿಲ ಭಾರತ ವೀರಶೈವ ಮಹಾಸಭಾದ ರಾಜ್ಯಾಧ್ಯಕ್ಷರಾದ ಶ್ರೀ ಎನ್. ತಿಪ್ಪಣ್ಣನವರು ಪ್ರಾರಂಭದಲ್ಲಿ ಕೇವಲ

ಬೆರಳೆಣಿಕೆಯಷ್ಟಿದ್ದ ಶಾಲೆಗಳು ಇಂದು ನೂರಾರು ಶಾಲೆಗಳ ಮಹಾವಿದ್ಯಾಪೀಠವಾಗಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ವಿಸ್ತರಿಸಿದೆ. ಇಡೀ ಜಗತ್ತನ್ನು ಹೇಗೆ ಒಳ್ಳೆಯ ರೀತಿಯಲ್ಲಿ ಬದಲಿಸಬೇಕೆಂಬುದನ್ನು ಶ್ರೀಮಠದ ಗುರುಗಳನ್ನು ನೋಡಿ ಕಲಿಯಬೇಕು. 1949-50 ರಲ್ಲಿ ನಾನು ಮಹಾರಾಜ ಕಾಲೇಜಿನಲ್ಲಿ ಬಿ.ಎ. ವ್ಯಾಸಂಗಕ್ಕಾಗಿ ಪ್ರವೇಶ ಪಡೆದಿದ್ದೆ. ಆಗ ಪೂಜ್ಯ ರಾಜೇಂದ್ರ ಶ್ರೀಗಳು ವಸತಿನಿಲಯದಲ್ಲಿ ಅವಕಾಶ ಕಲ್ಪಿಸಿಕೊಟ್ಟು ನನ್ನ ವಿದ್ಯಾಭ್ಯಾಸಕ್ಕೆ ನೆರವಾದರು. ಅದನ್ನು ನಾನು ಎಂದಿಗೂ ಮರೆಯಲು ಸಾಧ್ಯವಿಲ್ಲ ಎಂದು ಸ್ಮರಿಸಿದರು. ದೈವೀಶಕ್ತಿಯನ್ನುಳ್ಳಂತಹ ಶ್ರೀ ರಾಜೇಂದ್ರಶ್ರೀಗಳು ತಮ್ಮ ಕಾಲದಲ್ಲಿ ಲಕ್ಷಾಂತರ ಮಕ್ಕಳಿಗೆ ವಿದ್ಯೆ ಅನ್ನದಾನ ಮಾಡಿ ಒಳ್ಳೆಯ ವ್ಯಕ್ತಿಗಳನ್ನು ಸಮಾಜಕ್ಕೆ ಕೊಡುಗೆಯಾಗಿ ನೀಡಿದರು. ಆ ಪ್ರವೃತ್ತಿಯನ್ನು ಶ್ರೀಗಳವರು ಮುಂದುವರೆಸಿಕೊಂಡು ಹೋಗುತ್ತಿದ್ದಾರೆ. ಶರಣರ ತತ್ವಗಳಲ್ಲಿ ಒಂದನ್ನಾದರೂ ಅಳವಡಿಸಿಕೊಂಡು ಶಾಂತಿ ಶಿಸ್ತಿನಿಂದ ಒಳ್ಳೆಯ ಮಾನವರಾದರೆ ಸಾಕು ಗುರುಗಳಿಗೆ ಸೇವೆ ಮಾಡಿದಂತೆ ಎಂದು ನುಡಿದರು.

ಶುಭ ಸಂದೇಶ ನೀಡಿದ ಹರಿಹರದ ಶ್ರೀ ಹೋಳೇಮಠ ಮಹಾಸಂಸ್ಥಾನದ ಶ್ರೀ ಬಸವರಾಜ ದೇಶೀಕೇಂದ್ರ ಸ್ವಾಮಿಗಳವರು ಹಿಂದೆ ಸತ್ಯ ಸೂಕ್ಷ್ಮತೆ ಅರಿಯುವಂತಹ ಅನೇಕ ತತ್ವಪದಗಳನ್ನು ಕೆಲವು ದಾಸರು, ಮಹಾನ್ ವ್ಯಕ್ತಿಗಳು ಆಯಾ ಭಾಷೆಗಳಲ್ಲಿ ಜನರನ್ನು ತಿದ್ದುವುದಕ್ಕಾಗಿ ಭಜನೆ ಮೂಲಕ ಮಾಡುತ್ತಿದ್ದರು. ಭಜನೆಗಳನ್ನು ಕೇಳಿದಾಗ ತಮ್ಮ ತಪ್ಪುಗಳ ಅರಿವಾಗಿ ತಿದ್ದಿಕೊಳ್ಳಲು ಅವಕಾಶವಾಗುತ್ತದೆ. ಇತ್ತೀಚಿನ ದಿನಗಳಲ್ಲಿ ನಶಿಸಿಹೋಗುತ್ತಿರುವ ಇಂತಹ ಕಲೆಗಳನ್ನು ಶ್ರೀಗಳವರ ಉತ್ಸಾಹದಿಂದ ಭಜನಾಮೇಳ ಏರ್ಪಡಿಸಿ ಪುರಾತನ ಪದ್ಧತಿಯ ಎಲ್ಲಾ ವಿಷಯಗಳಿಗೂ ಒತ್ತು ನೀಡಿರುವುದು ಸಂತಸದ ವಿಷಯ ಎಂದರು.

ಸಮಾರಂಭದಲ್ಲಿ ಯುಎಸ್‌ಎ, ವಿಎಸ್‌ಎನ್‌ಎ ನ ಮಾಜಿ ಅಧ್ಯಕ್ಷರಾದ ಶ್ರೀ ಜಯರಾಜ್ ಕಲ್ಮಠ್, ವಿಧಾನಪರಿಷತ್ ಸದಸ್ಯರಾದ ಶ್ರೀ ಮರಿತಿಬ್ಬೇಗೌಡ, ಶ್ರೀ ಸುರೇಂದ್ರಕುಮಾರ್, ತಮಿಳುನಾಡಿನ ಬಸವ ಬಳಗದ ಅಧ್ಯಕ್ಷರು ಹಾಗೂ ಟೀ ಉದ್ಯಮಿ ಶ್ರೀ ರಾಜೇಶ್ ಮುಂತಾದವರು ಉಪಸ್ಥಿತರಿದ್ದರು.

ಜಾತ್ರಾ ಮಹೋತ್ಸವದ ಅಂಗವಾಗಿ ಏರ್ಪಡಿಸಲಾಗಿದ್ದ ವಸ್ತುಸಂಗ್ರಹಾಲಯ ಕಟ್ಟಡದ ಶಿಲಾನ್ಯಾಸ, ವಸ್ತುಪ್ರದರ್ಶನ, ಕೃಷಿಮೇಳ ಮತ್ತು ಸಾಂಸ್ಕೃತಿಕ ಮೇಳ ಸಮಾರೋಪ ಸಮಾರಂಭವು ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ದಿವ್ಯ ಸಾನ್ನಿಧ್ಯದಲ್ಲಿ ಜರುಗಿತು.

ವಸ್ತುಸಂಗ್ರಹಾಲಯದ ಕಟ್ಟಡ ಶಿಲಾನ್ಯಾಸ ನೆರವೇರಿಸಿದ ಮುಖ್ಯಮಂತ್ರಿಗಳಾದ ಶ್ರೀ ಸಿದ್ಧರಾಮಯ್ಯನವರು ಮಾತನಾಡಿ, ಸಮಾಜದಲ್ಲಿರುವ ಜಾತಿ ವ್ಯವಸ್ಥೆ, ಸಾಮಾಜಿಕ ಆರ್ಥಿಕ ಅಸಮಾನತೆ ಅಳಿಯಬೇಕು. ಜಾತ್ಯತೀತ, ಸಮಾಜವಾದಿ ಸಮಾಜದ



ನಿರ್ಮಾಣವಾಗಬೇಕು. ಹನ್ನೆರಡನೆಯ ಶತಮಾನದಲ್ಲಿಯೇ ಬಸವಣ್ಣ ಸಮಾನತೆಗಾಗಿ ಕ್ರಾಂತಿ ಮಾಡಿದರು. ಮಾನವೀಯತೆಯೆ ನಿಜವಾದ ಧರ್ಮ, ಧರ್ಮವಿರುವುದು ಜನರಿಗಾಗಿ, ಜನರ ಕಲ್ಯಾಣಕ್ಕಾಗಿ, ಮಾನವರೆಲ್ಲ ಒಂದೇ ಎನ್ನುವ ತತ್ವ, ಆದರ್ಶ, ಮೌಲ್ಯಗಳಿರುವ ಧರ್ಮ ಇಂದು ನಮಗೆ ಬೇಕಾಗಿದೆ ಎಂದರು. ಮುಂದುವರಿದು ಮಾತನಾಡಿದ ಅವರು, ಶಿಕ್ಷಣ, ಆರೋಗ್ಯ, ಧಾರ್ಮಿಕ ಜಾಗೃತಿ ಮುಂತಾದ ಸಮಾಜಮುಖಿ ಕೆಲಸಗಳನ್ನು ಇಂದು ಅನೇಕ ಮಠಗಳು ಮಾಡುತ್ತಿವೆ. ಈ ಕೈಂಕರ್ಯದಲ್ಲಿ ಸುತ್ತೂರು ಶ್ರೀಮಠವು ತನ್ನನ್ನು ಅವಿರತವಾಗಿ ತೊಡಗಿಸಿಕೊಂಡಿದೆ. ಇಂತಹ ಜಾತ್ರೆಗಳು ಜನರ ಮನಸ್ಸಿನ ಕ್ಲೇಶ ಅಳಿಸುವ ಸಮಾಜದಲ್ಲಿ ಸ್ನೇಹ ಸೌಹಾರ್ದ ವಾತಾವರಣ ನಿರ್ಮಾಣವಾಗಲು ಸಹಕಾರಿಯಾಗಿದೆ ಎಂದರು. ಮಳೆ, ಬೆಳೆ ಚೆನ್ನಾಗಿ ಆಗಲಿ, ನಾಡಿನ ಸಮಸ್ತ ಜನತೆ ನೆಮ್ಮದಿ ಸಂತೋಷದಿಂದ ಇರಲಿ ಎಂದು ಹೇಳಿದರು.

ಜಾತ್ರಾ ಮಹೋತ್ಸವದ ಕೊನೆಯ ದಿನ ಏರ್ಪಡಿಸಿದ್ದ ಸಾಂಸ್ಕೃತಿಕ ತಿರುಳು ಸಭಾ ಕಾರ್ಯಕ್ರಮಕ್ಕೆ ಆಗಮಿಸಿದ್ದ ಲೋಕಸಭಾ ಸದಸ್ಯರಾದ ಶ್ರೀ ಪ್ರಹ್ಲಾದ ಜೋಷಿರವರು ಮಾತನಾಡಿ, ಸುತ್ತೂರು ಮಠ ನಮ್ಮ ದೇಶದ ಅತ್ಯಂತ ಪುರಾತನ ಹಾಗೂ ಭವ್ಯತೆ ಮೆರೆದ ಮಠ. ಶತಶತಮಾನಗಳಿಂದ ಶ್ರೀಮಠ ಸಮಾಜಕ್ಕೆ ಶಾಂತಿ, ಸೌಹಾರ್ದತೆಯನ್ನು ಬೋಧಿಸುತ್ತಾ ಬಂದಿದೆ. ಪೂಜ್ಯ ಜಗದ್ಗುರುಗಳವರು ಶೈಕ್ಷಣಿಕ, ಸಾಮಾಜಿಕ, ಧಾರ್ಮಿಕವಾಗಿ ಸಾಕಷ್ಟು ಕೊಡುಗೆಗಳನ್ನು ಸಮಾಜಕ್ಕೆ ನೀಡುತ್ತಾ ಬಂದಿದ್ದಾರೆ. ಜಾತ್ರೆಗಳ ಮೂಲಕ ವಸ್ತುಪ್ರದರ್ಶನ, ಕೃಷಿ ಮೇಳ ಮತ್ತು ದನಗಳ ಜಾತ್ರೆಗಳನ್ನು ಏರ್ಪಡಿಸಿ, ರೈತರ ಬದುಕನ್ನು ಹಸನಾಗಿಸಿದ್ದಾರೆ. ಭಾರತೀಯ ಸಂಸ್ಕೃತಿಯನ್ನು ನಮ್ಮ ಜನ ಉಳಿಸಿಕೊಂಡು ಬರುವಂತಾಗಲಿ ಎಂದರು.

ಸಮಾರಂಭದ ವೇದಿಕೆಯಲ್ಲಿ ಶ್ರೀ ಎ.ಆರ್. ಕೃಷ್ಣಮೂರ್ತಿ, ಶ್ರೀ ಜಿ.ಎನ್. ನಂಜುಂಡಸ್ವಾಮಿ, ಶ್ರೀ ಎಸ್. ಸಿದ್ಧರಾಜು, ಶ್ರೀ ಮಾರುತಿ ಪವಾರ್, ಶ್ರೀ ರವಿಶಂಕರ್, ಶ್ರೀ ಹೇಮಂತ್ ಕುಮಾರ್ ಮತ್ತು ಶ್ರೀ ಎಂ. ನಾಗರಾಜ್ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ವಸ್ತುಸಂಗ್ರಹಾಲಯ ಕಟ್ಟಡದ ಶಿಲಾನ್ಯಾಸ, ವಸ್ತುಪ್ರದರ್ಶನ, ಕೃಷಿಮೇಳ ಮತ್ತು ಸಾಂಸ್ಕೃತಿಕ ಮೇಳದ ಸಮಾರೋಪ ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಕಂದಾಯ ಸಚಿವರಾದ ಶ್ರೀ ವಿ. ಶ್ರೀನಿವಾಸ ಪ್ರಸಾದ್‌ರವರು ಮಾತನಾಡಿ, ನಮ್ಮ ಕಲೆ, ಸಂಸ್ಕೃತಿ, ಪರಂಪರೆ ನಿಂತ ನೀರಾಗಬಾರದು. ಅದು ಹರಿಯುವ ನದಿಯಂತೆ ಚಲನಶೀಲತೆ ಯಾಗಿರಬೇಕು. ಸಾಮಾಜಿಕ ಬದಲಾವಣೆಯ ಜೊತೆ ಮೈದಳೆದು ಕ್ರಿಯಾಶೀಲವಾಗಿ ಮುಂದುವರಿಯಬೇಕು. ಮೌಢ್ಯ, ಕಂದಾಚಾರ, ಜಾತೀಯತೆಯಿಂದ ಜಡ್ಡುಗಟ್ಟಿದ ಸಮಾಜಕ್ಕೆ ಚೈತನ್ಯ ತುಂಬಿದವರು ಬಸವಣ್ಣನವರು. ನಮ್ಮ ಚಿಂತನೆಗಳು,

ಆಲೋಚನೆಗಳು, ಹೃದಯವಂತಿಕೆಯಿಂದ ಮಾನವೀಯತೆಯಿಂದ ಕೂಡಿರಬೇಕು. ಚಿಂತನಾಶೀಲ, ಕ್ರಿಯಾಶೀಲ ಪ್ರಜ್ಞಾವಂತ ಜನರಿಂದ ಮಾತ್ರ ಸಮಾಜದಲ್ಲಿ ಒಳ್ಳೆಯ ಬದಲಾವಣೆಯಾಗಲು ಸಾಧ್ಯ ಎಂದು ಹೇಳಿದರು.

ಸಮಾರಂಭದಲ್ಲಿ ಶ್ರೀ ಷಡಕ್ಷರಿ ಶಿವಯೋಗಿ ಮುರುಘರಾಜೇಂದ್ರ ಮಹಾಸ್ವಾಮಿಗಳು, ಲೋಕೋಪಯೋಗಿ ಸಚಿವರಾದ ಡಾ. ಎಚ್.ಸಿ. ಮಹದೇವಪ್ಪನವರು, ಸಹಕಾರ ಹಾಗೂ ಸಕ್ಕರೆ ಸಚಿವರಾದ ಶ್ರೀ ಎಚ್.ಎಸ್. ಮಹದೇವಪ್ರಸಾದ್, ಕಲಬುರಗಿ ಪಾಟೀಲ್ ಗ್ರೂಪ್ ಆಫ್ ಇಂಡಸ್ಟ್ರೀಸ್ ವ್ಯವಸ್ಥಾಪಕ ನಿರ್ದೇಶಕ ಶ್ರೀ ಎಸ್.ಎಸ್. ಪಾಟೀಲ್, ಶಾಸಕರಾದ ಶ್ರೀ ಪುಟ್ಟರಂಗಶೆಟ್ಟಿ, ಶ್ರೀ ತನ್ವೀರ್ ಸೇಠ್, ಶ್ರೀ ಎಂ.ಕೆ. ಸೋಮಶೇಖರ್ ಮತ್ತು ಜಿಲ್ಲಾಧಿಕಾರಿಗಳಾದ ಶ್ರೀಮತಿ ಶಿಖಾ ಹಾಗೂ ಮತ್ತಿತರರು ಉಪಸ್ಥಿತರಿದ್ದರು.

☐

ಮಾಡುವ ನೀಡುವ ಭಕ್ತನ ಕಂಡಡೆ
ನಿಧಿ ನಿಧಾನವ ಕಂಡಂತಾಯಿತ್ತು.
ಪಾದೋದಕ ಪ್ರಸಾದ ಜೀವಿಯ ಕಂಡಡೆ
ಹೋದ ಪ್ರಾಣ ಬಂದಂತಾಯಿತ್ತು.
ಅನ್ಯರ ಮನೆಗೆ ಹೋಗಿ, ತನ್ನುದರವ ಹೊರೆಯದ
ಅಚ್ಚ ಶರಣರ ಕಂಡಡೆ
ನಿಶ್ಚಯವಾಗಿ ಕೂಡಲಸಂಗಯ್ಯನೆಂಬೆನು.

**-ಬಸವಣ್ಣ**



## ಪ್ರಸಾದ ಲೇಖನಸೂಚಿ - 2014

**ಸಂಪುಟ 29 ಸಂಚಿಕೆ 1** — **ಜನವರಿ-ಫೆಬ್ರವರಿ**


ಡಾ. ಜಿ.ಎಸ್. ಶಿವರುದ್ರಪ್ಪನವರ ಕಾವ್ಯಾನುಸಂಧಾನ 10
**ಪ್ರೊ. ಸಿ.ಪಿ. ಸಿದ್ಧಾಶ್ರಮ**

ಕರುಣಾಳು ಶ್ರೀ ಶಿವರಾತ್ರಿರಾಜೇಂದ್ರ ಸ್ವಾಮಿಗಳು 22
**ತ.ಸು. ಶಾಮರಾಯ**

ಆಶ್ರಯ ನೀಡಿದ ಶ್ರೀಮಠ 24
**ಡಾ. ಜಿ.ಎಸ್. ಶಿವರುದ್ರಪ್ಪ**

ಯಾವುದೂ ಸಣ್ಣದಲ್ಲ 28
**ಡಾ. ಜಿ.ಎಸ್. ಶಿವರುದ್ರಪ್ಪ**

ವಿದ್ವನ್ಮಣಿ ಎನ್. ಬಸವಾರಾಧ್ಯ 34
**ಡಾ. ಎಂ. ಚಿದಾನಂದಮೂರ್ತಿ**

ಕಾಮನಬಿಲ್ಲಿನ ದೇಶ ಕಟ್ಟಿದ ನೆಲ್ಸನ್ ಮಂಡೇಲಾ 38
**ಈಚನೂರು ಕುಮಾರ್**

ಯದುವಂಶದ ಕೊನೆಯ ಕೊಂಡಿ -
ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ 41
**ಈಚನೂರು ಕುಮಾರ್**

ಕರ್ನಾಟಕ ಸಂಗೀತ ಪಿತಾಮಹ: ಭಕ್ತಿಭಂಡಾರಿ ಬಸವೇಶ್ವರರು 44
**ವಿದ್ವಾನ್ ಬಿ.ಎಸ್. ವಿಜಯರಾಘವನ್**


**ಸಂಪುಟ 29 ಸಂಚಿಕೆ 2** — **ಮಾರ್ಚ್-ಏಪ್ರಿಲ್**


ಸ್ವತಂತ್ರ ಸಿದ್ಧಲಿಂಗೇಶ್ವರರು 11
**ದೇಜಗೌ**

"ಭಾರತರತ್ನ" ಪ್ರೊ. ಸಿ.ಎನ್.ಆರ್. ರಾವ್ 21
**ಡಾ. ಶಂಕರ ರಾಮಚಂದ್ರ ಕಂದಗಲ್ಲ**

ಡಾ. ಜಿ.ಎಸ್. ಶಿವರುದ್ರಪ್ಪನವರ ಕಾವ್ಯಾನುಸಂಧಾನ 24
**ಪ್ರೊ. ಸಿ.ಪಿ. ಸಿದ್ಧಾಶ್ರಮ**

ಶಿವ-ಜಗತ್ತುಗಳ ಕಾರ್ಯಕಾರಣಭಾವ: ಒಂದು ಚಿಂತನೆ 43
**ವಿದ್ವಾನ್ ಎಚ್.ವಿ. ನಾಗರಾಜರಾವ್**

ಭಗವಾನ್ ಮಹಾವೀರ ಶಕೆಯ ಉಲ್ಲೇಖ 47
**ಡಾ. ಹೆಚ್.ಎ. ಪಾರ್ಶ್ವನಾಥ್**

**ಸಂಪುಟ 29 ಸಂಚಿಕೆ 3** **ಮೇ-ಜೂನ್**

ಬಸವಣ್ಣನವರ ವಚನಗಳಲ್ಲಿ ತಾತ್ವಿಕ ವಿಚಾರ 9
**ಡಾ. ಕೆ.ಎಂ. ಮಹದೇವಯ್ಯ**

ಬಸವಣ್ಣನವರ ಆತ್ಮ ನಿವೇದನೆ 30
**ಡಾ. ಎಸ್.ಆರ್. ಗುಂಜಾಳ**

ಪದ್ಮಭೂಷಣ ಡಾ. ಎಂ. ಮಹದೇವಪ್ಪ 42
**ಡಾ. ಅರುಣ್ ಬಳಮಟ್ಟಿ**

ಅಗ್ಘವಣಿ ಕಾಯಕದ ಶಿವಶರಣರು 50
**ಡಾ. ಎಸ್.ಎಂ. ಗಿರಿಜಾಪತಿ**

**ಸಂಪುಟ 29 ಸಂಚಿಕೆ 4** **ಜುಲೈ-ಆಗಸ್ಟ್**

**ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ**
**99ನೆಯ ಜಯಂತಿ ಮಹೋತ್ಸವ ವಿಶೇಷ ಸಂಚಿಕೆ**

**ಸಂಪುಟ 29 ಸಂಚಿಕೆ 5** **ಸೆಪ್ಟೆಂಬರ್-ಅಕ್ಟೋಬರ್**

ಪಂಚಯ್ಯ ಕವಿಯ ಭಕ್ತಿರಸ ಸೋನೆ 9
**ಡಾ. ಎಫ್.ಟಿ. ಹಳ್ಳಿಕೇರಿ**

ಅಕ್ಕಮಹಾದೇವಿಯ ವಚನಗಳ ಪ್ರತಿಮಾವಿಧಾನ 24
**ಎಚ್.ಎಂ. ಚನ್ನಯ್ಯ**

ತಮಿಳುನಾಡಿನಲ್ಲಿ ವೀರಶೈವ ಧರ್ಮ, ಪರಂಪರೆ 32
**ಸು. ಬಸವರಾಜದೊಡ್ಡಟ್ಟಿ**

**ಸಂಪುಟ 29 ಸಂಚಿಕೆ 6** **ನವೆಂಬರ್-ಡಿಸೆಂಬರ್**

ಕನ್ನಡ ಕೋಶ ಸಾಹಿತ್ಯದಲ್ಲಿಯೇ ಒಂದು ಮೈಲಿಗಲ್ಲು: "ವರ್ಣನಾತ್ಮಕ ವಚನಪದಕೋಶ" 11
**ಡಾ. ಗುರುಲಿಂಗ ಕಾಪಸೆ**

ವಚನಸಾಹಿತ್ಯದಲ್ಲಿ ಶೈಕ್ಷಣಿಕ ವಿಚಾರಗಳು 19
**ಡಾ. ತಿಪ್ಪೇಸ್ವಾಮಿ**

ಭರತ-ಬಾಹುಬಲಿಯವರ ಯುದ್ಧಪ್ರಸಂಗ ಮತ್ತು ಸಮಕಾಲೀನತೆ 32
**ಪ್ರೊ. ಸಿ.ಪಿ. ಸಿದ್ಧಾಶ್ರಮ**

ಆದರ್ಶ ಪ್ರಾಧ್ಯಾಪಕ ಪ್ರೊ. ಮ.ಗಂ. ರೇಣುಕಪ್ರಸನ್ನ 43
**ನಗರ್ಲೆ ಶಿವಕುಮಾರ**